ರುಜುವಾತು - 43

ಸಂ. ಯು. ಆರ್. ಅನಂತಮೂರ್ತಿ

ಸಂಪಾದಕ
ಯು.ಆರ್. ಅನಂತಮೂರ್ತಿ

ವ್ಯವಸ್ಥಾಪಕ ಸಂಪಾದಕ
ಪ್ರಸನ್ನ

ಛಾಯಾ ಚಿತ್ರಗ್ರಾಹಕ
ಕೆ. ಜಿ. ಸೋಮಶೇಖರ್

ಸಹ ಸಂಪಾದಕರು
ವಿಲಿಯಂ
ಬಂದಗದ್ದೆ ರಾಧಾಕೃಷ್ಣ

ವಿತರಣೆ
ಶ್ರೀಧರ್ ರಾವ್ ಎಚ್.
ಗಂಗಾಧರ ಎನ್. ಸಿ.

ಅಕ್ಷರ ಜೋಡಣೆ
ಶ್ರೀಲಕ್ಷ್ಮಿ. ಎಸ್. ಭಟ್
ಸವಿತಾ ಕಾಕಾಲ್
ಪ್ರಮಥ. ಹೆಚ್. ಎನ್.

ಚಂದಾವಿವರ

ಬಿಡಿಪ್ರತಿ	: ೧೬ /-
ವಾರ್ಷಿಕ	: ೪೦ /-
ವಾರ್ಷಿಕ (ಸಂಸ್ಥೆಗಳಿಗೆ)	: ೬೦ /-
ಠೇವಣಿ ಯೋಜನೆ *	: ೫೦೦ /-

* ನಿಮ್ಮ ಠೇವಣಿ ಬ್ಯಾಂಕಿನಲ್ಲಿ ಇಟ್ಟು ಅದು ಗಳಿಸಿದ ಬಡ್ಡಿಯಲ್ಲಿ ರುಜುವಾತು ಕಳುಹಿಸುತ್ತೇವೆ. ನಿಮಗೆ ಬೇಕೆನ್ನಿಸಿದಾಗ ಠೇವಣಿ ಹಣವನ್ನ ಇಡಿಯಾಗಿ ಹಿಂದೆ ಪಡೆಯಬಹುದು.

ಚಂದಾಹಣವನ್ನ ಮನಿ ಆರ್ಡರ್/ ಡ್ರಾಫ್ಟ್ ಮೂಲಕ ಕಳುಹಿಸಬೇಕು. ಚೆಕ್ / ಡ್ರಾಫ್ಟ್ ಮೂಲಕ ಕಳುಹಿಸುವವರು ರೂ ೭/- ಬ್ಯಾಂಕ್ ಕಮಿಷನ್ ಸೇರಿಸಿ ಕಳುಹಿಸಬೇಕು.

ಸೃಜನಶೀಲ ಹೊಸ ಪ್ರಯೋಗಗಳಿಗಾಗಿ,
ಹೊಸ ದಿಕ್ಕುಗಳ ಹುಡುಕಾಟಕ್ಕಾಗಿ,
ನಮ್ಮ ಸಾಮಾಜಿಕ ಸಂದರ್ಭದ ಶೋಧಕ್ಕಾಗಿ,
ತ್ರೈಮಾಸಿಕ ಪತ್ರಿಕೆ ..... ರುಜುವಾತು

ರುಜುವಾತು - ೪೩

ಏಪ್ರಿಲ್ - ಜೂನ್
೧೯೯೬

ಕವಿ - ಕಾವ್ಯ
ಹೆಗ್ಗೋಡು - ೫೭೭ ೪೧೭
ಶಿವಮೊಗ್ಗ ಕರ್ನಾಟಕ
ದೂರವಾಣಿ : 08183-2813, 2713

ಕವಿ ಕಾವ್ಯದ ವಿದಾಯ

ರುಜುವಾತು ೪೩, ಎರಡು ತಿಂಗಳು ತಡವಾಗಿ ಹೊರಬರುತ್ತಿದೆ. ನಾವು ಪ್ರಕಟಣೆಯ ಜವಾಬ್ದಾರಿ ವಹಿಸಿಕೊಂಡ ನಂತರದ ನಾಲ್ಕು ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ಹೀಗಾಗುತ್ತಿರುವುದು. ದುರ್ದೈವದ ಸಂಗತಿಯೆಂದರೆ ಇದು ಕಡೆಯ ಸಂಚಿಕೆಯೂ ಹೌದು. ಹೆಗ್ಗೋಡನ್ನ ಕೇಂದ್ರವಾಗಿಸಿಕೊಂಡಿರುವ **ಕವಿ-ಕಾವ್ಯ**ದ ಚಟುವಟಿಕೆಗಳನ್ನ ಸ್ಥಗಿತಗೊಳಿಸುವ ನಿರ್ಧಾರಕ್ಕೆ ನಾವು ಬಂದಿದ್ದೇವೆ. **ಕವಿ-ಕಾವ್ಯ**ದ ಅವಸಾನಕ್ಕೆ ಕಾರಣವಾದ ಸಂಗತಿಗಳ ಸುರುಳಿಬಿಚ್ಚುತ್ತ ಕೂರುವುದಿಲ್ಲ ಇಲ್ಲಿ ನಾನು. ನಮ್ಮೆದುರಿಗಿರುವ **ಕವಿ-ಕಾವ್ಯ**ದ ಎರಡು ಮುಖ್ಯ ಚಟುವಟಿಕೆಗಳು, **ರುಜುವಾತು** ಪತ್ರಿಕೆಯ ಪ್ರಕಾಶನ ಹಾಗೂ **ಚರಕ** ಎಂಬ ಸ್ವದೇಶಿ ಆಂದೋಲನ.

ರುಜುವಾತು ಪ್ರಕಟಣೆ **ಕವಿ-ಕಾವ್ಯ**ಕ್ಕೆ ಅವಿಸ್ಮರಣೀಯ ಆನಂದದ ಅನುಭವ. ನಮ್ಮೆಲ್ಲ ತಪ್ಪುಗಳನ್ನು ಒಪ್ಪಿಕೊಂಡ ರುಜುವಾತು ಬಳಗ, ನಮ್ಮ ಪುಟ್ಟ ಕೆಲಸವನ್ನೇ ಸಾಧನೆಯೆಂದು ಪರಿಗಣಿಸಿದರು. ಅನಂತಮೂರ್ತಿಯವರು ಅಜಾತ ಶತೃಗಳು. ನಾವೆಷ್ಟೇ ಕೆದಕಿದರೂ ಕೆರಳದಲೆ, ನಗುನಗುತ್ತ ಒಳ್ಳೆಯದನ್ನಷ್ಟೆ ನಮ್ಮಿಂದ ಪಡೆದುಕೊಂಡರು. ಪತ್ರಿಕೆಯನ್ನು ಅವರಿಗೆ ಕೃತಜ್ಞತೆಯಿಂದ ಹಿಂದಿರುಗಿಸುತ್ತಿದ್ದೇವೆ.

ಪತ್ರಿಕೆಯ ಈ ವರೆಗಿನ ಲೆಕ್ಕಾಚಾರ, ಕೊಡು-ಕೊಳ್ಳುವ ವ್ಯವಹಾರ ಚೊಕ್ಕವಾಗಿದೆ. **ರುಜುವಾತು** ಪತ್ರಿಕೆಗೆ ಈಗ ಎರಡು ಸಾವಿರಕ್ಕೂ ಮಿಕ್ಕಿದ ಚಂದಾದಾರರ ಬಳಗವಿದೆ. ಪ್ರತಿಯೊಂದು ಸಂಚಿಕೆಯೂ ಹೊಸಬರನ್ನು ಒಳತರುತ್ತಿದೆ. ಇನ್ನು ಮುಂದೆ **ರುಜುವಾತು** ಪ್ರಕಟಣೆಯ ಹೊಣೆಯನ್ನ ಬೆಂಗಳೂರಿನ ಅನನ್ಯ ಟ್ರಸ್ಟಿನವರು ನಿರ್ವಹಿಸಲಿದ್ದಾರೆ. ಹಾಗಾಗಿ ನಿಮ್ಮಗಳ ನಂಬುಗೆ ಹಾಗೂ ಹಣಕಾಸುಗಳನ್ನು ಅನನ್ಯ ಟ್ರಸ್ಟಿಗೆ ಒಪ್ಪಿಸಲಿಕ್ಕೆ ನಿಮ್ಮ ಅನುಮತಿ ಬೇಡುತ್ತೇವೆ. ಈಗಿನ ಸಂಪಾದಕೀಯ ಹಾಗೂ ವ್ಯವಸ್ಥಾಪಕ ಬಳಗದ ನಾವೆಲ್ಲರೂ ಮುಂದೆಯೂ ಪತ್ರಿಕೆಯೊಟ್ಟಿಗೆ ದುಡಿಯುವ ಆಶ್ವಾಸನೆ ನೀಡುತ್ತಿದ್ದೇವೆ.

ಚರಕದ ಬಗ್ಗೆ ಒಂದೆರೆಡು ಮಾತುಗಳು. **ಚರಕ** ಎಂಬುದು ಕವಿ-ಕಾವ್ಯ ಟ್ರಸ್ಟ್ ಆರಂಭಿಸಿದ, ಹತ್ತಿ ಕೈಮಗ್ಗ ಹಾಗೂ ಗುಡಿ ಕೈಗಾರಿಕೆಗಳ ಪುನರುಜ್ಜೀವನದ ಒಂದು ಕಾರ್ಯಕ್ರಮ. ಈ ಕಾರ್ಯಕ್ರಮದಡಿಯಲ್ಲಿ ಸುತ್ತಮುತ್ತಲ ಗ್ರಾಮಗಳಲ್ಲಿ ಕಾರ್ಯನಿರತವಾಗಿರುವ **ಚರಕ**

ಗ್ರಾಮೋದ್ಯೋಗ ಘಟಕ ಮೂವತ್ತಕ್ಕೂ ಹೆಚ್ಚಿಗೆ ಹಿಂದುಳಿದ ಗ್ರಾಮೀಣ ಮಹಿಳೆಯರಿಗೆ ಕೆಲಸ ನೀಡಿದೆ. ಕೈಮಗ್ಗದ ಸಿದ್ಧ ಉಡುಪುಗಳನ್ನ ಹಾಗೂ ಕರಕುಶಲ ವಸ್ತುಗಳನ್ನ ತಯಾರಿಸುತ್ತಿರುವ ಚರಕ ದೊಡ್ಡ ಸ್ವದೇಶಿ ಚಳುವಳಿಯಾಗಿ ಬೆಳೆಯುವ ಆಶಯ ಹೊಂದಿದೆ. ಕವಿ-ಕಾವ್ಯದ ಸಮಸ್ತ ಆಸ್ತಿಯನ್ನ ಚರಕಕ್ಕೆ ಒಪ್ಪಿಸುತ್ತಿದ್ದೇವೆ.

ಕಾಗೋಡು ಸತ್ಯಾಗ್ರಹದ ನಂತರದ ಮಲೆನಾಡು

ಮಲೆನಾಡಿನಲ್ಲಿ ಮೊದಲ ಬಾರಿಗೆ ಸಾಮಾಜಿಕ ಬದಲಾವಣೆ ಸಾಧ್ಯವಾದದ್ದು ಕಾಗೋಡು ಸತ್ಯಾಗ್ರಹದ ಮೂಲಕವಾಗಿ. ಗೇಣಿ ಪದ್ಧತಿಯ ನಿರ್ಮೂಲನದಿಂದಾಗಿ ಉಂಟಾದ ವ್ಯವಸಾಯ ಭೂಮಿಯ ಮರು ಹಂಚಿಕೆ, ಮಲೆನಾಡಿನ ಬಡರೈತರಿಗೆ ಹೊಸದೊಂದು ಆರ್ಥಿಕ ಬುನಾದಿಯನ್ನೂ, ಸಾಮಾಜಿಕ ಸ್ಥಾನಮಾನವನ್ನೂ ಹಾಗೂ ರಾಜಕೀಯ ಧ್ವನಿಯನ್ನೂ ಆಗ ನೀಡಿತ್ತು. ಕಾಗೋಡು ಸತ್ಯಾಗ್ರಹ ಕರ್ನಾಟಕದ ರಾಜಕಾರಣಕ್ಕೆ, ಗೋಪಾಲಗೌಡರ ಆದಿಯಾಗಿ ಹಲವು ಗಟ್ಟಿ ರಾಜಕಾರಣಿಗಳನ್ನ ನೀಡಿತು.

ಈಗ ಮಲೆನಾಡಿನಲ್ಲಿ ಬಡವರಿಗೆ ಹಂಚಲಿಕ್ಕೆ ಬೇಸಾಯಯೋಗ್ಯ ಭೂಮಿ ಉಳಿದಿಲ್ಲ. ವ್ಯವಸಾಯವನ್ನ ವಿಸ್ತರಿಸಿದಷ್ಟೂ ಮಲೆನಾಡಿನ ಬೆಟ್ಟಗುಡ್ಡಗಳು ಬರಡಾಗುತ್ತಿವೆ, ಕಾಡು ನಾಶವಾಗುತ್ತಿದೆ. ಬಗರ್ ಹುಕುಂ ಸಾಗುವಳಿಯ ಹೆಸರಿನಲ್ಲಿ ಇತ್ತೀಚಿನ ದಿನಗಳಲ್ಲಿ ದೊಡ್ಡರೈತರು ಹಾಗೂ ಜಮೀನುದಾರರು ಮತ್ತೊಮ್ಮೆ ಸಾವಿರಾರು ಎಕರೆ ಸರ್ಕಾರಿ ಭೂಮಿಯನ್ನ ಕಬಳಿಸಿ ಕುಳಿತಿದ್ದಾರೆ. ಐಬೆಕ್ಸ್ ಬೇಲಿಗಳು ಸಾಹುಕಾರರಿಗೆ ದೊರೆತಿರುವ ಹೊಸದೊಂದು ಬ್ರಹ್ಮಾಸ್ತ್ರವಾಗಿದೆ. ಉಳ್ಳವರೊಡನೆ ಸ್ಪರ್ಧೆಗೆ ನಿಂತಿರುವ ಬಡವರೂ ಗುಡ್ಡಗಳಿಗೆ ಬೇಲಿಹಾಕಲು ಯತ್ನಿಸಿ ಸೋತಿದ್ದಾರೆ. ಬಡವರ ಪರವಾದ ರಾಜಕಾರಣ ಇಂದು ಕವಲು ಹಾದಿಯಲ್ಲಿ ನಿಂತಿದೆ.

ಮಲೆನಾಡಿನ ಬೆಳವಣಿಗೆಯ ಈ ಸಂದಿಗ್ಧಕ್ಕೆ ಚರಕ ಮಾತ್ರವೇ ಉತ್ತರವಾಗಬಲ್ಲದು. ಮಲೆನಾಡಿನ ಜನ ಈಗಲೂ ೫೦-೬೦ ಪ್ರತಿಶತ ಕೈಮಗ್ಗದ ಬಟ್ಟೆಯನ್ನೇ ಬಳಸುತ್ತಾರೆ. ಆ ಎಲ್ಲ ಬಟ್ಟೆಯೂ ಹೊರಗಿನಿಂದ - ಅದರಲ್ಲೂ ಕರ್ನಾಟಕದ ಆಚೆನಿಂದ ಬರುತ್ತಿದೆ. ಹತ್ತಿಕೈಮಗ್ಗ ಹಾಗೂ ಕಾಡನ್ನ ಆಧರಿಸಿದ ಗುಡಿ ಕೈಗಾರಿಕೆಗಳ ಸ್ಥಾಪನೆ ಸರಕಾರಿ ಕಾರ್ಯಕ್ರಮ ಮಾತ್ರವೇ ಆದರೆ ಸಾಲದು, ಜನಪರ ಚಳುವಳಿಯಾಗಬೇಕು ಎನ್ನುವುದು ಚರಕ ಆಂದೋಲನದ ಆಶಯ. ಕವಿ-ಕಾವ್ಯದಲ್ಲಿ ಕಾರ್ಯನಿರತರಾಗಿದ್ದ ನಾವುಗಳೆಲ್ಲರೂ ಇನ್ನುಮುಂದೆ ಚರಕ ಉಳಿಸಿ ಆಂದೋಲನದಲ್ಲಿ ಪಾಲ್ಗೊಳ್ಳುವ ನಿರ್ಧಾರ ಮಾಡಿದ್ದೇವೆ. ನಮಗೆ ನಿಮ್ಮೆಲ್ಲರ ಬೆಂಬಲ ಬೇಕು.

ಕವಿ-ಕಾವ್ಯ ಟ್ರಸ್ಟಿಗಳ ಪರವಾಗಿ

ಈ ಸಂಚಿಕೆಯಲ್ಲಿ

೮	ಸಂಪಾದಕನ ಟಿಪ್ಪಣಿಗಳು	ಯು. ಆರ್. ಅನಂತಮೂರ್ತಿ
೧೪	ಬಾಲ್ಯ ಕಾಲ	ವಿ. ಕೃ. ಗೋಕಾಕ್
೨೪	ಮದುವೆಯೆಂಬ ನರಕ - ೨	ಪ್ರಸನ್ನ
೩೪	ಕತೆಗಾರನ ಮೊದಲ ಪಾಠಗಳು	ಎಂ. ಟಿ ವಾಸುದೇವನ್ ನಾಯರ್
೪೨	ಒಂದು ಪ್ರಬಂಧ	ಬಿ. ಎಸ್. ವೆಂಕಟಲಕ್ಷ್ಮಿ
೪೭	ತಿಂಗಳ ಕವಿತೆ	ವೀಚಿ ಶಾ. ಬಾಲುರಾವ್ ಪ್ರತಿಭಾ ನಂದಕುಮಾರ್
೫೫	ಪಂಪಿಸಿ, ಪ್ರಾರ್ಥಿಸಿ	ಡಿ. ವಿ. ಗುಂಡಪ್ಪ
೬೧	ಗೋವಿಂದ ಪೈ ಸಂಶೋಧನ ಸಂಪುಟ	ಪಿ. ಶ್ರೀಪತಿ ತಂತ್ರಿ
೭೫	ಪುಸ್ತಕ ಪರಿಚಯ	ವಿಲಿಯಂ

ಈ ಸಂಚಿಕೆಯ ಲೇಖಕರು

ಎ. ವಿ. ಗೋಕಾಕ್, Secretary, Dept. of Programme Implementation, 205, Sardar Patel Bhavan, Parliament Street, New-Delhi-110 001

ಎಂ. ಟಿ. ವಾಸುದೇವನ್ ನಾಯರ್, "Sithara", Kottaram Road, Kozhikode : 673 006

ಕೆ. ಕೆ. ನಾಯರ್, ಎಫ್ - ೧೨/೭, ಕೆ. ಎಮ್. ಸಿ. ಫ್ಲಾಟ್ಸ್, ಮಣಿಪಾಲ -೫೭೬ ೧೧೯

ಬಿ. ಎಸ್. ವೆಂಕಟಲಕ್ಷ್ಮಿ, ೭೯ "ಸಾಯಿರಾಮ್" ೧೩ನೇ ಬಿ. ಮುಖ್ಯ ರಸ್ತೆ, ಎಚ್.ಎ.ಎಲ್. ೨ನೇ ಹಂತ, ಬೆಂಗಳೂರು ೫೬೦ ೦೦೮

ವೀಚಿ, ಚಿಕ್ಕವೀರಯ್ಯನ ಪಾಳ್ಯ, ತುಮಕೂರು ೫೭೨ ೧೦೯

ಶಾ. ಬಾಲುರಾವ್, 'ಕಾವೇರಿ' ೧೩೧, 'ಜೆ' ಹಂತ, ಲಕ್ಷ್ಮೀನಗರ, ದೆಹಲಿ - ೧೧೦ ೦೯೨

ಪ್ರತಿಭಾ ನಂದಕುಮಾರ್, ೬೮ ಎ, ೪ನೇ ಬ್ಲಾಕ್, ಪಶ್ಚಿಮ ಜಯನಗರ, ಬೆಂಗಳೂರು ೫೬೦ ೦೧೧

ಪ್ರೊ. ಪಿ. ಶ್ರೀಪತಿ ತಂತ್ರಿ, 'ಪಂಚಾಪರ್ಣೆಯ' ಮಹಾಕಾಳೀ ಮಾರ್ಗ, ಅಂಬಲಪಾಡಿ, ಉಡುಪಿ ದ.ಕ.

ವಿಲಿಯಂ, ೧೫ / ೧೩, ೨ನೇ ತಿರುವು, ನೆಹರು ನಗರ, ಸಾಗರ, ೫೭೭ ೪೦೧ ಶಿವಮೊಗ್ಗ.

ಪ್ರಸನ್ನ, ಹೆಗ್ಗೋಡು ೫೭೭ ೪೧೭, ಸಾಗರ, ಶಿವಮೊಗ್ಗ.

ಯು. ಆರ್. ಅನಂತಮೂರ್ತಿ, ೧೦ ಮಾಧವ ನಗರ, ಮಣಿಪಾಲ ೫೭೬ ೧೧೯

ಸಂಪಾದಕನ ಟಿಪ್ಪಣಿಗಳು

ಸುಭದ್ರ ಸರಕಾರ, ಸಭ್ಯ ಸಮಾಜ

ಮಣಿಪಾಲಿನಲ್ಲಿ ಈಚೆಗೆ ನಡೆದ ಗಾಂಧಿ ಸೆಮಿನಾರಿಗೆ ನಮ್ಮ ದೇಶದ ಧೀಮಂತ ಚಿಂತಕರಲ್ಲಿ ಒಬ್ಬರಾದ ಓಬೆರಾಯ್ ಎಂಬುವರು ಬಂದಿದ್ದರು. ಅವರು ಆಡಿದ ಒಂದು ಮಾತು ನನ್ನ ಮನಸ್ಸಿನಲ್ಲಿ ನೆಟ್ಟಿದೆ. ಬ್ರಿಟಿಷರ ಆಡಳಿತವನ್ನ ಕೊನೆಗಾಣಿಸುವ ಹೋರಾಟದ ಮಹಾನ್ ನಾಯಕರೆಂದರೆ ಗಾಂಧೀಜಿ ಎಂದು ನಾವೆಲ್ಲ ಸಾಮಾನ್ಯವಾಗಿ ತಿಳಿಯುತ್ತೇವೆ. ನಿಜವೇ. ಆದರೆ ಗಾಂಧೀಜಿಯವರೇ ತಮ್ಮ ಜೀವನದ ಪರಮ ಉದ್ದೇಶಗಳೆಂದು ಮೂರು ವಿಷಯಗಳನ್ನು ಮಾತ್ರ ಪ್ರಸ್ತಾಪಿಸುತ್ತಾರೆ. ಈ ಮೂರು ವಿಷಯಗಳಲ್ಲಿ ಬ್ರಿಟಿಷ್ ಪ್ರಭುತ್ವದ ವರ್ಗಾವಣೆಯ ಪ್ರಸ್ತಾಪವೇ ಇಲ್ಲ.

ಗಾಂಧೀಜಿಯ ಈ ಮೂರು ಧ್ಯೇಯಗಳು ಹೀಗಿವೆ:

ಮೊದಲನೆಯದು, **ಹಿಂದೂ ಮುಸ್ಲಿಂ ಐಕ್ಯತೆ** ; ಎರಡನೆಯದು, **ಅಸ್ಪೃಶ್ಯತೆಯ ನಿವಾರಣೆ** ; ಮೂರನೆಯದು, **ಖಾದಿ**. ಈ ಮೂರನ್ನು ಹೇಳಿದ ನಂತರ ಬ್ರಿಟಿಷರನ್ನು ಈ ದೇಶದಿಂದ ತೊಲಗಿಸಲು ಸತತವಾಗಿ ಕಾರ್ಯನಿರತರೆಂದು ಕಾಣುವ ಗಾಂಧೀಜಿ ಅದನ್ನು ಯಾಕೆ ಹೇಳುವುದಿಲ್ಲವೆಂಬುದೇ ಇಲ್ಲಿ ಗಮನಿಸಬೇಕಾದ್ದು. ಮೌನ ಕೆಲವು ಸಾರಿ ಮಾತಿಗಿಂತ ಹೆಚ್ಚು ಶಕ್ತವಾಗಿರುತ್ತದೆ ಎನ್ನುವುದಕ್ಕೆ ಇದೊಂದು ಉದಾಹರಣೆ.

ತನ್ನ ಪರಮಧ್ಯೇಯವಾದ ಮೂರು ವಿಷಯಗಳು ಸಫಲವಾದರೆ ಆಡಳಿತದ ವರ್ಗಾವಣೆ ಅಪ್ರಸ್ತುತವೆನ್ನಿಸುವಷ್ಟು ಕಿಂಚಿತ್ ವಿಷಯವಾಗಿ ಬಿಡುತ್ತದೆ ಎಂಬುದು ಗಾಂಧೀಜಿಯವರ ಗ್ರಹಿಕೆ. ಬ್ರಿಟಿಷರು ಈ ದೇಶವನ್ನು ಆಳುವುದೇ ಅಸಾಧ್ಯವಾಗುವಂತಹ ಸಭ್ಯ ಸಮಾಜ ನಮ್ಮದಾಗುತ್ತದೆ ; ಅಥವಾ ಅಂತಹ ಸಭ್ಯ ಸಮಾಜದಲ್ಲಿ ಯಾರು ನಮ್ಮನ್ನು ಸರಕಾರವಾಗಿ ಆಳುತ್ತಾರೆ ಎನ್ನುವುದೇ ಅಮುಖ್ಯವಾಗುತ್ತದೆ. ಹೀಗೆಲ್ಲ ನಾವು ಗಾಂಧೀಜಿಯವರ ಮೌನವನ್ನು ವ್ಯಾಖ್ಯಾನಿಸುವುದು ಸಾಧ್ಯವಿದೆ.

* * *

ಗಾಂಧೀಜಿಯವರ ಮೂರು ಧ್ಯೇಯಗಳನ್ನು ಈ ನಮ್ಮ ಪ್ರಸ್ತುತ ಸಂದರ್ಭದಲ್ಲಿ ಗಮನಿಸೋಣ. ಎಲ್ಲ ಸರಕಾರಗಳ ತಲೆನೋವಾಗಿ ಈ ಮೂರು ಪ್ರಶ್ನೆಗಳೂ ಇನ್ನೂ ಉಳಿದಿವೆ. ಹಿಂದೂ ಮುಸ್ಲಿಂ

ಸಖ್ಯದ ಪ್ರಶ್ನೆ ಇನ್ನೂ ಬಗೆಹರಿದಿಲ್ಲ. ಆದ್ದರಿಂದಲೇ ಮತೀಯ ಕಲಹ ರಾಜಕೀಯ ಪಕ್ಷಗಳ ಬಂಡವಾಳವಾಗಿ ಉಳಿದು ಬಿಟ್ಟಿದೆ. ಮುಸ್ಲಿಂ ಜನರನ್ನು ಓಲೈಸುವುದು ದೊಡ್ಡ ಅಪರಾಧವೆಂದು ಸಾರುತ್ತ, ಹಿಂದೂ ಜನರನ್ನು ಒಂದು ದೊಡ್ಡ ಓಟ್‌ಬ್ಯಾಂಕಾಗಿ ಪರಿವರ್ತಿಸಲು ಪ್ರಯತ್ನಿಸುವ ಬಿ.ಜೆ.ಪಿ. ಒಂದು ಕಡೆಯಾದರೆ, ಮುಸ್ಲಿಂ ಜನರ ಭಯವನ್ನೇ ಬಂಡವಾಳ ಮಾಡಿಕೊಂಡು, ಈ ಭಯ ಹೇಗಾದರೂ ಉಳಿದಿರುವಂತೆ ನೋಡಿಕೊಂಡು ಮುಸ್ಲಿಂ ಜನರನ್ನು ಇನ್ನೊಂದು ಓಟ್ ಬ್ಯಾಂಕಾಗಿ ಮಾಡಿಕೊಳ್ಳುವ ಹುಸಿ ಸೆಕ್ಯುಲರ್ ರಾಜಕಾರಣ ಇನ್ನೊಂದು ಕಡೆ. ಹೀಗೆ ಮುಸ್ಲಿಂ ಓಟ್‌ಬ್ಯಾಂಕನ್ನು ಉಳಿಸಿಕೊಳ್ಳುವುದರಲ್ಲಿ ಕಾಂಗ್ರೆಸ್ ಸೋತಿತು ಎಂಬುದೇ ಇವತ್ತಿನ ಅದರ ಸೋಲಿಗೆ ಒಂದು ಮುಖ್ಯ ಕಾರಣ ಎನ್ನಬಹುದು.

ಹೀಗೆ ಕೇವಲ ರಾಜಕೀಯವಾಗಿಬಿಟ್ಟ ಹಿಂದೂ ಮುಸ್ಲಿಂ ಏಕತೆಯ ಸಮಸ್ಯೆ ನಮ್ಮ ದೇಶ ಒಂದು ಸಭ್ಯ ಸಮಾಜವಾಗಲು ಮುಖ್ಯ ತಡೆಯಾಗಿದೆ - ಅಂದರೆ ಗಾಂಧೀಜಿಯ ಮೊದಲನೆಯ ಧ್ಯೇಯ ಇನ್ನೂ ಸಫಲವಾಗಿಲ್ಲ ಎನ್ನಬಹುದು. ಹುಸಿ ಸೆಕ್ಯುಲರ್ ರಾಜಕಾರಣದಲ್ಲಾಗಲೀ, ಮತೀಯ ಉದ್ರೇಕದ ರಾಜಕಾರಣದಲ್ಲಾಗಲೀ ಹಿಂದೂ - ಮುಸ್ಲಿಂ ಸಹಬಾಳ್ವೆಯ ಸಮಸ್ಯೆಗೆ ಉತ್ತರವಿಲ್ಲ ಎಂದು ತಿಳಿಯದ ಹೊರತು ನಾವು ತ್ರಿಕರಣ ಶುದ್ಧಿಯಲ್ಲಿ ಈ ಸಮಸ್ಯೆಯನ್ನು ಎದುರಿಸಲಾರೆವು. ಗಾಂಧೀಜಿ ಈ ಸಮಸ್ಯೆಯನ್ನು ಧಾರ್ಮಿಕವಾಗಿ ಎದುರಿಸಲು ಪ್ರಯತ್ನಿಸಿ ತಮ್ಮ ಪ್ರಾಣವನ್ನೇ ಒಬ್ಬ ಹುಚ್ಚ ಹಿಂದೂವಿನ ಗುಂಡಿಗೆ ಬಲಿ ಕೊಟ್ಟರು ಎನ್ನುವುದನ್ನು ಹೇಳುವುದರಿಂದ ಈ 'ಶುದ್ಧಿ' ಯಾವ ಉತ್ಕಟತೆಯಿಂದ ಹುಟ್ಟಿರುತ್ತದೆ ಎಂಬುದನ್ನು ಸೂಚಿಸಬಹುದು

ಗಾಂಧೀಜಿ ಈ ಸಮಸ್ಯೆಯನ್ನು 'ಧಾರ್ಮಿಕ' ವಾಗಿ ಬಗೆಹರಿಸಲು ಪ್ರಯತ್ನಿಸಿದರು - ಹುಸಿ ಸೆಕ್ಯುಲರ್ ರಾಜಕೀಯವಾಗಿ ಅಲ್ಲ - ಎಂದು ಒತ್ತಿಹೇಳಲು ಕಾರಣವಿದೆ. ಹಿಂದುಗಳ ವೈವಿಧ್ಯಮಯವಾದ ಮತಾಚರಣೆಯಲ್ಲೇ ಮುಸ್ಲಿಮರ ಬಗ್ಗೆ ಆಳವಾದ ಆತಂಕವಿದೆ ಎಂದು ಗಾಂಧೀಜಿ ಮನಗಂಡು, ಈ ಆತಂಕ ಮತ್ತು ಆತಂಕದಿಂದ ಹುಟ್ಟುವ ದ್ವೇಷವನ್ನು ಹಿಂದೂ ಮನಸ್ಸಿನಿಂದ ಕಿತ್ತುಹಾಕಲು ಪ್ರಯತ್ನಿಸಿದರು. ನಮ್ಮ ಸಂಸ್ಕೃತಿ ಮತ್ತು ಧರ್ಮದ ಮೂಲಾರ್ಥಗಳಲ್ಲಿ ಅಪಾರವಾದ ಶ್ರದ್ಧೆ ಮತ್ತು ಪ್ರೀತಿಯಿರುವವರು ಮಾತ್ರ ಇಂತಹ ಕೆಲಸ ಮಾಡಬಲ್ಲರು. ಅಂದರೆ, ಕಬೀರನಂಥವರು, ಗಾಂಧಿಯಂಥವರು.

ಇದರ ಅಗತ್ಯ ಇನ್ನೂ ಈ ದೇಶಕ್ಕೆ ಬಹು ಮುಖ್ಯವಾಗಿ, ಸದಾ ಆತಂಕಕಾರಿಯಾಗಿ ಉಳಿದಿದೆ ಎಂಬುದಕ್ಕೆ ಒಂದು ಸೂಚನೆಯೆಂದರೆ ಬಿ.ಜೆ.ಪಿ. ಪಕ್ಷ ಈಚಿನ ಚುನಾವಣೆಯಲ್ಲಿ ಸ್ಪಷ್ಟ ಬಹುಮತವನ್ನು ಗಳಿಸದೇ ಹೋದುದು. ಉಳಿದ ಪಕ್ಷಗಳಿಗಿಂತ ಕಿಂಚಿತ್ ಮುಂದಿದ್ದು, ರಾಷ್ಟ್ರಪತಿಯಿಂದ ಸಹಜವಾಗಿಯೇ ಸರ್ಕಾರ ನಿರ್ಮಾಣ ಮಾಡಲು ಅವಕಾಶ ಪಡೆದು ರೀಜನಲ್ ಪಕ್ಷಗಳ ಬೆಂಬಲ ಗಳಿಸಲಾರದೆ ಶ್ರೀ ವಾಜಪೇಯಿಯವರು ರಾಜಿನಾಮೆ ಕೊಡಬೇಕಾಗಿ ಬಂದಿತು. ಬಿ.ಜೆ.ಪಿಗೆ

ಇದರಲ್ಲೊಂದು ಕಲಿಯಬೇಕಾದ ಪಾಠವಿದೆ. ವಾಜಪೇಯಿಯವರು ಒಬ್ಬ ದೊಡ್ಡ ರಾಷ್ಟ್ರರಾಜಕಾರಣಿಯಾಗಿ, ಮತ್ತು ಮುತ್ಸದ್ಧಿಯಾಗಿಯೂ ತನ್ನ ಕನಿಷ್ಠ ಕಾರ್ಯಕ್ರಮದಲ್ಲಿ ಮುಸ್ಲಿಮರಿಗೆ ಆತಂಕ ಭಾವನೆ ತರುವಂತಹ ಯಾವ ಉದ್ದೇಶವನ್ನೂ ಘೋಷಿಸಲಿಲ್ಲವೆನ್ನುವುದು ಗಮನಿಸಬೇಕಾದ್ದು. ಅವರನ್ನು ಅಧಿಕಾರದಲ್ಲಿ ಮುಂದುವರಿಸಲು ರೀಜನಲ್ ಪಕ್ಷಗಳು ಅನುವು ಮಾಡಿದ್ದ ಪಕ್ಷದಲ್ಲಿ ಬಿ.ಜೆ.ಪಿ.ಯ ನಿಲುವು ಮತ್ತು ಸ್ವರೂಪವೇ ಬದಲಾಗಬೇಕಾಗಿ ಬರುತ್ತಿತ್ತೇನೋ? ಇಡೀ ದೇಶದಲ್ಲಿ ಹಿಂದೂ ಮತೀಯ ಭಾವನೆಯನ್ನು ಚುರುಕುಗೊಳಿಸಲು ಪ್ರಯತ್ನಿಸಿ ಸೋತ ಬಿ.ಜೆ.ಪಿ.ಯ, ಉದಾರವಾದಿ ಎಂದು ಜನತೆ ನಿರೀಕ್ಷಿಸುವ ನಾಯಕರಾದ ಶ್ರೀ ವಾಜಪೇಯಿ ಒಂದು ಐತಿಹಾಸಿಕ ಅವಕಾಶವನ್ನು ಕಳೆದುಕೊಂಡರೆಂದು ನಮಗೆ ತೋರುತ್ತದೆ. ಹಿಂದೂ ಜನರನ್ನು ಮತೀಯವಾಗಿ ಒಟ್ಟುಮಾಡಿ ಗೆಲ್ಲುವ ದಾರಿಯಲ್ಲಿ ಅವರು ಹೋದ ದೂರಕ್ಕಿಂತ ಹೆಚ್ಚು ದೂರ ಹೋಗಲಾರರು ಎಂದು ತಿಳಿದ ಮೇಲೆ, ಪಾರ್ಲಿಮೆಂಟಿನಲ್ಲಿ ಘೋಷಿಸಿದ ಕನಿಷ್ಠ ಕಾರ್ಯಕ್ರಮವೇ ತಮ್ಮ ಪಕ್ಷದ ಮುಂದಿನ ನಿಲುವು ಎಂದು ಅವರು ಘೋಷಿಸಿದ್ದ ಪಕ್ಷದಲ್ಲಿ ಬಿ.ಜೆ.ಪಿ.ಯಲ್ಲಿರುವ ಉಗ್ರಗಾಮಿಗಳು ಹೊರಗಾಗಬೇಕಾಗಿ ಬಂದು (ಬದಲಾಗಬೇಕಾಗಿ ಬಂದು?) ನೈಜ ಅರ್ಥದಲ್ಲಿ ಅದೊಂದು ರಾಷ್ಟ್ರೀಯ ಪಕ್ಷವಾಗಬಹುದಿತ್ತು. ನಮ್ಮ ಸಂಸ್ಕೃತಿಯ ಅನೇಕತೆಯನ್ನು ಹುಸಿಯಾಗಿ ಹೊಗಳುವುದರ ಬದಲು ಅದನ್ನೇ ತಮ್ಮ ಉಸಿರಾಟದಷ್ಟು ನಿಜಮಾಡಿಕೊಂಡು ಇಡೀ ದೇಶದಲ್ಲಿ ಬೆಳೆಸಬೇಕಾದ ಅನಿವಾರ್ಯತೆ ಇರುತ್ತಿತ್ತು ಬಿ.ಜೆ.ಪಿ.ಗೆ.

ರಾಜಕೀಯ ಮಾಡುವುದರಲ್ಲಿ ಆಸಕ್ತಿಯಿಲ್ಲದ, ಆದರೆ ರಾಜಕಾರಣವನ್ನ ಗಂಭೀರವಾಗಿ ತೆಗೆದುಕೊಂಡ ನಾವೆಲ್ಲರೂ ಇಂತಹ ಒಂದು ಬಯಕೆಯನ್ನು ಇಟ್ಟುಕೊಂಡಿರುತ್ತೇವೆ ಎಂದು ನನಗೆ ಅನ್ನಿಸಿ ಮೇಲಿನ ಮಾತನ್ನು ಬರೆದಿದ್ದೇನೆ. ಹಿಂದೂ - ಮುಸ್ಲಿಂ ಜನರ ನಡುವಿನ ಸಮಸ್ಯೆ ರಾಜಕೀಯದ ಬಂಡವಾಳವಾಗುವುದು ದೇಶಕ್ಕೆ ಕಂಟಕವನ್ನೂ, ನಮ್ಮ ಸಂಸ್ಕೃತಿಗೆ ಕಳಂಕವನ್ನೂ ತರುತ್ತದೆ ಎಂದು ತಿಳಿದ ನಾವೆಲ್ಲರೂ ದೇಶದಲ್ಲಿ ಬೆಳೆಯುತ್ತಿರುವ ಬಿ.ಜೆ.ಪಿ.ಯ ಸ್ವರೂಪ ಬದಲಾಗಬೇಕೆಂದು ಆಶಿಸುತ್ತೇವೆ. ಅದೊಂದು ನೈಜವಾದ ಅರ್ಥದಲ್ಲಿ ಕನ್‌ಸರ್‌ವೆಟಿವ್ ಪಕ್ಷವಾಗಿ ಬೆಳೆದು ಜನರ ಆಯ್ಕೆಗೆ ಒದಗಬೇಕು. ಆಳವಾದ ಕನ್ಸರ್ವೆಟಿವ್ ನಿಲುವಿನ ಒಂದು ಪಕ್ಷ ಇವತ್ತಿನ ಹುಚ್ಚಾಟದ ಜಾಗತೀಕರಣವನ್ನೂ, ಸರ್ವಭಕ್ಷಕವಾದ ಗ್ರಾಹಕ ದುರಾಸೆಯನ್ನೂ ಅನುಮಾನದಿಂದ ಕಂಡು ವಿರೋಧಿಸುತ್ತದೆ ಎಂದು ಬರವಸೆಯಿಟ್ಟುಕೊಂಡು ಆಡುವ ಮಾತಿದು. ಆದರೆ ಇದು ಹುಸಿ ಭರವಸೆ ಯಿರಬಹುದೇನೋ ಎಂಬ ಅನುಮಾನವೂ ನನಗಿದೆ. ಬಿ.ಜೆ.ಪಿ. ಆ ದಾರಿಯಲ್ಲಿ ಸದ್ಯ ಇರುವಂತೆ ಕಾಣುವುದಿಲ್ಲ. ವಾಜಪೇಯಿಯವರು ಸ್ಮರಣೀಯವೆನ್ನುವಂತೆ ಪರಿಸರ ಆಂದೋಳನದ ಬಹುಗುಣ ಅವರಿಗೆ ಸ್ಪಂದಿಸುವುದರ ಜೊತೆಗೇ, ಮುಂಬಯಿಯ ಎನ್ರಾನ್‌ಗೆ ವಿರೋಧವಾಗಿ ಮಾತಾಡುತ್ತಲೇ ಅದಕ್ಕೆ ಒಪ್ಪಿಗೆ ಕೊಟ್ಟಿರುವುದನ್ನು ನೋಡಿದರೆ ಭಾರತ ಒಂದು ಪರ್ಯಾಯ ಆರ್ಥಿಕ ನೀತಿಯನ್ನು - ಗಾಂಧೀಜಿ ತ್ರಿಕರಣ ಪೂರ್ವಕವಾಗಿ ಬಯಸಿದ್ದನ್ನು - ಭಾರತದ ಯಾವ ಪಕ್ಷವೂ

ಅಪೇಕ್ಷಿಸುವುದಿಲ್ಲವೆನ್ನುವುದು ಮನದಟ್ಟಾಗುತ್ತದೆ. ಅಂದರೆ, ನಿಜವಾದ ಅರ್ಥದಲ್ಲಿ ಒಂದು ಕನ್ಸರ್ವೆಟಿವ್ ಪಕ್ಷವನ್ನು ಇವತ್ತಿನ ರಾಜಕಾರಣದ ಓಘಕ್ಕೆ ಎದುರಾಗಿ ಕಟ್ಟುವಲ್ಲಿ ಹಿಂದೆ ರಾಜಾಜಿಯವರು ಸೋತಂತೆಯೇ, ಇವತ್ತೂ ಯಾರೂ ಪ್ರಯತ್ನಿಸಿದರೂ ಸೋಲಬಹುದು ಎಂಬುದು ಗೊತ್ತಾಗುತ್ತದೆ. ನಾವೆಲ್ಲರೂ ಮಾತಿನಲ್ಲಿ ಬಹುವಾಗಿ ಮೆಚ್ಚುವ ಭಾರತದ ಸಂಸ್ಕೃತಿಯ ಅನೇಕತೆ, ಅದರ ವಿವಿಧ ರುಚಿಗಳ ಜೀವನ ಕ್ರಮ - ಎಲ್ಲವೂ ಕ್ರಮೇಣ ನಾಶವಾಗಲೇ ಬೇಕಾಗಿ ಬರುವಂತೆ ನಮ್ಮ ಆಸೆಗಳನ್ನು ಚುರುಕುಗೊಳಿಸುತ್ತ ಬೆಳೆಯುತ್ತಿರುವ ಆಧುನಿಕ ಜಾಗತೀಕರಣದ ಅರ್ಥ ವ್ಯವಸ್ಥೆಗೆ 'ನಿಜವಾದ ಯಾವ ವಿರೋಧಿಯೂ ನಮ್ಮ ದೇಶದಲ್ಲಿ ಕಾಣುತ್ತಿಲ್ಲ. ಹಿಂದೂ ಸಂಸ್ಕೃತಿಯ ಬುಡವನ್ನೇ ಕತ್ತರಿಸಿಹಾಕುತ್ತಿರುವುದು ಈ ದೇಶದ ಮುಸ್ಲಿಮರು ಎಂದು ತಿಳಿಯುವ ಮೂರ್ಖತನದಲ್ಲಿ ಬಿ.ಜೆ.ಪಿ. ನಮ್ಮ ವೈರಿಯಾರೆಂದು ತಿಳಿಯಲಾರದೆ, ಕೇವಲ ಓಟಿನ ರಾಜಕೀಯದಲ್ಲಿ ಬೆಳೆಯಲು ಯತ್ನಿಸುತ್ತಿದೆ. ಹಾಗೂ ಸದ್ಯ ಸೋತಿದೆ.

* * *

ಗಾಂಧೀಜಿಯವರ ಇನ್ನೆರಡು ಧ್ಯೇಯಗಳೂ ಮೂಲತಃ ಧರ್ಮಕ್ಕೆ ಸಂಬಂಧಪಟ್ಟ ವಿಷಯಗಳೇ. 'ಅಸ್ಪೃಶ್ಯತೆ ' ಹಿಂದೂ ಸಮಾಜದ ಮತಾಚರಣೆಯಲ್ಲೇ ಅಂತರ್ಗತವಾದ, ಹಿಂದೂ ಮತೀಯತೆಯ ಸ್ವರೂಪಕ್ಕೇ ಸಂಬಂಧ ಪಟ್ಟ ಸಂಗತಿಯೆನ್ನಬಹುದು. ಈ ಬಗ್ಗೆ ಗತಿಸಿದ ಹಿರಿಯರಾದ ಎ.ಬಿ. ಶಾರವರು ನನಗೆ ಹೇಳಿದ ಕಥೆ ನೆನಪಾಗುತ್ತದೆ. ಗಾಂಧೀಜಿ ಕಾಶಿಯ ಮಹಾಪಂಡಿತರನ್ನೊಮ್ಮೆ ಕೇಳಿದರಂತೆ : ಅಸ್ಪೃಶ್ಯತೆಗೆ ಹಿಂದೂ ಧರ್ಮದಲ್ಲಿ ಸಮರ್ಥನೆಯಿದೆಯೆ ಎಂದು. ಅಮೂರ್ತವಾದ ತಾತ್ವಿಕತೆಯನ್ನು ಮಾತ್ರ ಧರ್ಮದ ನಿಜಸ್ವರೂಪ ಎಂದು ತಿಳಿದ ಈ ಪಂಡಿತರು ವೇದೋಪನಿಷತ್ತುಗಳ ಮಹಾ ವಾಕ್ಯಗಳನ್ನು ಉದ್ಧರಿಸಿ ಇಲ್ಲ ಎಂದರಂತೆ. ಆಮೇಲೆ ಗಾಂಧೀಜಿ ಮಹಾರಾಷ್ಟ್ರದ ಧೀಮಂತ ಸಂಸ್ಕೃತ ಪಂಡಿತ ಮತ್ತು ಎಂ. ಎನ್. ರಾಯ್ ಗೆಳೆಯರಾಗಿದ್ದ ತರ್ಕತೀರ್ಥ ಲಕ್ಷ್ಮಣ ಶಾಸ್ತ್ರಿ ಜೋಷಿಯವರಿಗೆ ಅದೇ ಪ್ರಶ್ನೆ ಹಾಕಿದರಂತೆ. ಜೋಷಿಯವರು ಹಿಂದೂ ಮತಾಚರಣೆಯಲ್ಲಿ ಅಸ್ಪೃಶ್ಯತೆಯ ಭಾವನೆ ಅಂತರ್ಗತವಾದದ್ದು ಎಂದರಂತೆ. ಗಾಂಧೀಜಿ ಎರಡು ಯೋಚಿಸದೆ, ಹಾಗಾದರೆ ತಾನು ಹಿಂದೂ ಮತಾಚರಣೆಗೇ ವಿರೋಧವಾಗಿ ಹೋರಾಡಬೇಕಾಗುತ್ತದೆ ಎಂದರಂತೆ.

ಶೀಲವಂತ ಸಮಾಜವೊಂದರ ನಿರ್ಮಾಣ ಮಾಡಲು ಪ್ರಯತ್ನಿಸುವಾತ ಸತ್ಯಾನ್ವೇಷಣೆಯಲ್ಲಿ ಎಷ್ಟು ದೂರ ಹೋದಾನು ಎಂಬುದಕ್ಕೆ ಇದೊಂದು ಉತ್ತಮ ನಿದರ್ಶನ. ಅಂಥವರು ವಿರೋಧ ಮಾಡುವುದರಲ್ಲೇ ರುಚಿ ಹತ್ತಿದ ಬಂಡಾಯಗಾರರಾಗಿರುವುದಿಲ್ಲ. ತಾನು ಸದಸ್ಯನಾದ ಸಮಾಜದ ಒಪ್ಪಿತ ಚೌಕಟ್ಟಿನಲ್ಲೇ ತಾನು ಬಯಸುವ ಸತ್ಯವನ್ನು, ಸಫಲತೆಯನ್ನು ಪಡೆಯಲು ಆಶಿಸುತ್ತಾನೆ. ಅದು ಏನೇನೂ ಸಾಧ್ಯವಿಲ್ಲ ಎನ್ನಿಸಿದಾಗ ತನ್ನ ಸಮಾಜವನ್ನೇ ಸೀಳಲು ಆತ ಹಿಂಜರಿಯುವುದಿಲ್ಲ. ಗಾಂಧೀಜಿ ಹಾಗಾದ್ದುದರಿಂದಲೇ ಅವರ ಬಂಡಾಯ ಸುವ್ಯವಸ್ಥೆಯ ಆಸೆಯಿಂದ ಯಾವತ್ತೂ

ನಿರ್ದೇಶಿತವೆಂಬುದು ಮುಖ್ಯವಾಗುತ್ತದೆ. ಲಾಲುಪ್ರಸಾದರಂತಹ ಬಾಯಿಬಡುಕರ ಕ್ರಾಂತಿಕಾರತೆಗೆ ಪರ್ಯಾಯವಾಗಿ ನಾನು ಮೇಲಿನ ಮಾತನ್ನು ಬರೆದಿದ್ದೇನೆ.

ನಾವು ಒಟ್ಟಾಗಿ ಒಂದು ರಾಷ್ಟ್ರವೆಂಬ ಭಾವನೆಯಲ್ಲಿದ್ದಾಗ, ಅಂದರೆ ಸ್ವಾತಂತ್ರ್ಯ ಬಂದ ತತ್‌ಕ್ಷಣದ ದಿನಗಳಲ್ಲಿ, ನಾವು ಅಸ್ಪೃಶ್ಯತೆಯೆನ್ನುವುದು ಅನೈತಿಕವೆಂದೂ, ಕಾನೂನುಬಾಹಿರವೆಂದೂ ಘೋಷಿಸುವುದು ಸಾಧ್ಯವಾಯಿತು. ಓಟಿನ ಹುಡುಕಾಟದಲ್ಲಿ ನಾವು ಒಡೆದುಕೊಂಡಿರುವ ಈ ದಿನಗಳಲ್ಲಿ ಅಂತಹ ಒಂದು ನಿರ್ಧಾರ ಸಾಧ್ಯವಾಗುತ್ತಿರಲಿಲ್ಲವೆಂದು ನನಗೆ ಅನುಮಾನ. ಒಂದು ಮತಾಚರಣೆಯಲ್ಲಿ ಅಂತರ್ಗತವಾದ್ದನ್ನು ನಾವು ಬದಲಾಯಿಸಬಹುದೆ ಎನ್ನುವ ಪ್ರಶ್ನೆ ಇಂದಾದರೆ ಸುಪ್ರೀಂಕೋರ್ಟಿಗೆ ಹೋಗಿರುತ್ತಿತ್ತು.

ಜಾತಿ ಪದ್ಧತಿಯಲ್ಲಿರುವ ಅವಮಾನದ ಪ್ರಶ್ನೆ ನಮ್ಮ ಮತಾಚರಣೆಗೇ ಸಂಬಂಧಪಟ್ಟ ಧಾರ್ಮಿಕ ಸ್ವರೂಪದ್ದಾಗಿರುವಂತೆ, ಕಸುಬುಗಾರರಾದ ಜಾತಿಗಳು ಬೃಹತ್ ಕೈಗಾರಿಕರಣದ ಈ ಕಾಲದ ಪ್ರಕ್ರಿಯೆಯಲ್ಲಿ ತಮ್ಮ ಕಸುಬುಗಳನ್ನೇ ಕಳೆದುಕೊಂಡು ಅತಂತ್ರರಾಗುತ್ತಿರುವುದು ಇನ್ನೊಂದು ದೊಡ್ಡ ಪ್ರಶ್ನೆ . ಈ ಪ್ರಶ್ನೆಯನ್ನು ಈಚೆಗೆ ಡಾ.ಡಿ.ಆರ್. ನಾಗರಾಜರು ಆಳವಾಗಿ ವಿಶ್ಲೇಷಿಸಿದ್ದಾರೆ. ಪ್ಲಾಸ್ಟಿಕ್ ಬಕೆಟ್ಟುಗಳು ಮಡಕೆ ಮಾಡುವ ಕುಂಬಾರನನ್ನು ಅತಂತ್ರ ಮಾಡಿದೆ. ಕೈ ಮಗ್ಗದ ಈ ಸೂಕ್ಷ್ಮ ಕಲೆಗಾರರು ಅತಂತ್ರರಾಗಿದ್ದಾರೆ. ಚರ್ಮದ ಕೆಲಸ ಆಧುನಿಕವಾದ ತಾಂತ್ರಿಕ ಜ್ಞಾನವಾಗುತ್ತಿದ್ದಂತೆಯೇ ಚಮ್ಮಾರ ಅತಂತ್ರನಾಗಿ, ಚರ್ಮದ ಉದ್ಯೋಗ ಮೇಲು ಜಾತಿಯ ಜನರ ಸ್ವತ್ತಾಗಿ, ಜಾಗತಿಕ ಉದ್ಯಮವಾಗಿದೆ.

ಗಾಂಧೀಜಿ ಖಾದಿಯ ವಿಷಯ ಎತ್ತಿದ್ದು ಈ ಕಾರಣದಿಂದಾಗಿಯೇ. ಗಾಂಧಿಯ ಮೂರು ಪರಮ ಧ್ಯೇಯಗಳು ಒಂದಕ್ಕೊಂದು ಸಂಬಂಧ ಪಟ್ಟವು ಎಂಬುದು ಸ್ಪಷ್ಟ. ಖಾದಿಯೆಂದರೆ ಸ್ವಾವಲಂಬನೆ; ಸ್ವದೇಶಿ ಎಂದರೆ ಅಸ್ವಾದದ ವ್ರತ. ಅಂದರೆ ನಮ್ಮನ್ನು ಒಂದು ಶೀಲವಂತ ಸಮಾಜ ಮಾಡಲು ಪ್ರತಿ ವ್ಯಕ್ತಿಯೂ ಹೇಗೆ ತನ್ನ ಆಸೆ ಆಂಕಾಕ್ಷೆಗಳಲ್ಲೂ, ಆಹಾರ ವಿಹಾರಗಳಲ್ಲಿಯೂ, ಕೊನೆಗೆ ತನ್ನ ಶೌಚದ ವಿಶಯದಲ್ಲಿಯೂ ನಡೆದುಕೊಳ್ಳಬೇಕೆಂಬ ದಾರ್ಶನಿಕತೆ ಗಾಂಧೀಜಿಯ ಹಂಬಲದಲ್ಲಿದೆ.

*   *   *

ಯಾರು ಪ್ರಭುವೆಂಬುದೇ ಅತಿ ಮುಖ್ಯವಾಗಿಬಿಡುವ ಸಮಾಜ ಶೀಲವಂತ ಸಮಾಜವಲ್ಲ. ಆದ್ದರಿಂದಲೇ ಗಾಂಧೀಜಿ ತನ್ನ ಮೂರು ಮುಖ್ಯ ಧ್ಯೇಯಗಳನ್ನು ಮಾತ್ರ ಹೇಳಿಕೊಂಡು ಅಧಿಕಾರದ ವರ್ಗಾವಣೆಯ ಬಗ್ಗೆ ಮೌನ ತಾಳಿದ್ದು.

ಈಚಿನ ಚುನಾವಣೆಯಲ್ಲಿ ಯಾವ ಪಕ್ಷವೂ ಪ್ರಭುಸ್ಥಾನದ ಹಕ್ಕುದಾರನಾಗಲಾರದೇ ಹೋಯಿತು. ಹೀಗಾದಾಗ ಅರಾಜಕತೆಯ ಭಯ ಕಾಡುವುದು ಸಹಜ. ಜನರನ್ನು ಭಯದಲ್ಲಿಟ್ಟು ಆಳುವ ಸರಕಾರ ಮುರಿದು ಬಿದ್ದಾಗ ಅರಾಜಕತೆ ಎದುರಾಗುತ್ತದೆ ಎಂಬುದಕ್ಕೆ ಪಾಕಿಸ್ತಾನ, ಬಾಂಗ್ಲಾದೇಶ, ಆಫ್ರಿಕಾದ

ಹಲವು ದೇಶಗಳು ಉದಾಹರಣೆ; ನಮ್ಮಲ್ಲಿ ಹಾಗಾಗಲಿಲ್ಲ. ಅಂದಮಾತ್ರಕ್ಕೆ ನಾವಿನ್ನೂ ಶೀಲವಂತ ಸ್ವಯಂನಿಯಂತ್ರಿತ ಸಮಾಜವೆಂದು ಅರ್ಥವಲ್ಲ. ನಮ್ಮ ರಾಜಕಾರಣಿಗಳ, ಅಧಿಕಾರಿಗಳ ಭ್ರಷ್ಟಾಚಾರ ನೋಡಿ. ಪ್ರಭುತ್ವದಲ್ಲೇ ಭ್ರಷ್ಟಾಚಾರ ಅಂತರ್ಗತವಾಗಿ ಬಿಟ್ಟರೆ ಈ ಭ್ರಷ್ಟಾಚಾರ ಕೊನೆಯಾಗುವ ಭರವಸೆಯಿದೆಯೆ? ಪ್ರತಿ ಚುನಾವಣೆಯಲ್ಲೂ ಅಪಾರವಾದ ಹಣದ ಅಗತ್ಯವಿದೆಯೆಂಬುದು ರಾಜಕೀಯ ಭ್ರಷ್ಟಾಚಾರಕ್ಕೆ ಇರುವ ನೆವ. ಚುನಾವಣೆ ನಡೆಸಲೆಂದು ಪಕ್ಷಗಳ ನಾಯಕರು ಸಂಗ್ರಹಿಸುವ ನಿಧಿಯಲ್ಲಿ ಎಷ್ಟು ಪಕ್ಷಕ್ಕೆ, ಎಷ್ಟು ತಮಗೆ ಎಂಬುದು ಜನತೆಗೆ ತಿಳಿಯದು. ಚುನಾವಣೆಗೆಂದು ಈ ಬಡದೇಶದಲ್ಲಿ ಅಷ್ಟು ಹಣ ಖರ್ಚಾಗುವುದು ಸರಿಯೆ?; ಚುನಾವಣೆಗಳನ್ನು ನಡೆಸುವ ಕ್ರಮದಲ್ಲೇ ಆಮೂಲಾಗ್ರ ಬದಲಾವಣೆಗಳು ಆಗಬೇಡವೆ-ಈ ಪ್ರಶ್ನೆಗಳು 'ಹವಾಲಾ' ಹಗರಣಗಳ ನಂತರ ಮುಖ್ಯವಾಗಬೇಕಾಗಿದೆ. ಇಲ್ಲವಾದಲ್ಲಿ ನಮ್ಮ ಸಮಾಜ ಶೀಲವಂತವಾಗಲಾರದು.

ನಮ್ಮ ರಾಜಕಾರಣದಲ್ಲಿ ಏಳುತ್ತಿರುವ ವಾಗ್ವಾದಗಳಲ್ಲೂ ಸಭ್ಯಸಮಾಜದ ಕುರುಹುಗಳು ಕಾಣುತ್ತಿಲ್ಲ. ಈ ದೇಶ ಏನನ್ನಾದರೂ ತಡೆದುಕೊಳ್ಳಬಲ್ಲದು ನಿಜ. ಆನೆಯ ಸೊಂಡಿಲಲ್ಲಿ ಒಂದು ಮಾಲೆಯನ್ನು ಕೊಟ್ಟು ಅದು ಯಾರ ಕೊರಳಿಗೆ ಬೀಳುತ್ತದೆ ಅವನು ರಾಜನಾಗಬೇಕೆಂಬ ಜನಸಂಕಲ್ಪವನ್ನು ನನ್ನ ಗೆಳೆಯರೊಬ್ಬರು ಸ್ಮರಿಸಿದರು. ಅರಾಜಕತೆಯ ನಿವಾರಣೆಗೆ ಇಷ್ಟು ಸರಳವಾದ ಉಪಾಯವನ್ನು ಹೇಳುವ ಜಾನಪದ ನಂಬಿಕೆ ಗಾಂಧೀಜಿಯ ಶೀಲವಂತ ಸಮಾಜದ ಸ್ವಯಂ ನಿಯಂತ್ರಣದ ಶಕ್ತಿಯನ್ನೂ,ಯುಕ್ತಿಯನ್ನೂ ಪಡೆದದ್ದು. ಒಂದರ್ಥದಲ್ಲಿ ಶ್ರೀ ದೇವೇಗೌಡರು ಪ್ರಧಾನಿಯಾದದ್ದು ಹೀಗೇ. ಅವರು ಸಮರ್ಥ ಪ್ರಧಾನಿಯಾಗಿ ತಮ್ಮ ಕೆಲಸ ನಿರ್ವಹಿಸಿದಲ್ಲಿ ನಮ್ಮ ಸಮಾಜ ಪ್ರಜಾತಂತ್ರವಾಗಿ ಪಕ್ವವಾಗುತ್ತಿದೆಯೆಂದು ನಾವು ತಿಳಿಯಬಹುದು.

ಅರಾಜಕತೆಯ ಅತಂತ್ರ ಸ್ಥಿತಿಯಿಂದ ನಾವು ಚುನಾವಣೆಯ ನಂತರ ಪಾರಾದ ಕ್ರಮವನ್ನು ಮೆಚ್ಚುವಾಗಲೂ ನಾವು ಕೇಳಿಕೊಳ್ಳಬೇಕಾದ ಪ್ರಶ್ನೆಗಳಿವೆ. ಚುನಾವಣೆಯಲ್ಲಿ ಕಾಂಗ್ರೆಸನ್ನು ಪ್ರಭಲವಾಗಿ ವಿರೋಧಿಸಿ ಗೆದ್ದ ಪಕ್ಷಗಳು ಈಗ ಕಾಂಗ್ರೆಸಿನ ಮೈತ್ರಿಯಿಂದ ಸರಕಾರ ನಡೆಸುವುದನ್ನು ಜನತೆ ಕ್ಷಮಿಸುತ್ತದೆಯೆ? ಈ ಸರಕಾರ ಗಾಂಧೀಜಿಯ ಮೂರು ಧ್ಯೇಯಗಳ ಸಫಲತೆಗಾಗಿ ದುಡಿಯಬಲ್ಲುದೆ? ದುಡಿಯುತ್ತದೆಯೆ? ಅಥವಾ ಅಪಾರವಾಗಿ ವಿದೇಶೀ ಹಣವನ್ನೂ, ತಂತ್ರಜ್ಞಾನವನ್ನೂ, ಆರ್ಥಿಕ ವ್ಯವಸ್ಥೆಯನ್ನೂ ನಮ್ಮ ದೇಶದೊಳಕ್ಕೆ ತರುವ ಸಮರ್ಥ ಮ್ಯಾನೇಜರಾಗಿ ಮಾತ್ರ ತನ್ನ ಕಾಲವನ್ನು ದೂಡಿಕೊಂಡು ಹೋಗುವುದೇ?

ಸ್ಪಷ್ಟ ಜನಾದೇಶವಿಲ್ಲದೆ ನಡೆಸುವ ಪ್ರಭುತ್ವಕ್ಕಿರುವ ಸಮಸ್ಯೆಯಿಂದ ಬಿ.ಜೆ.ಪಿ.ಯೂ ಪಾರಾಗಲಿಲ್ಲ; ತೃತೀಯ ರಂಗವೂ ಪಾರಾಗಲಿಲ್ಲ. ಆದ್ದರಿಂದಲೇ ಇಂತಹ ಸನ್ನಿವೇಶಗಳಲ್ಲಿ ನಾವು ಆರ್ತವಾಗಿ ಚಿಂತಿಸಬೇಕಾದ್ದು, ದುಡಿಯಬೇಕಾದ್ದು , ಪ್ರಭುತ್ವ ಗೌಣವಾಗುತ್ತ ಹೋಗುವ ಶೀಲವಂತ ಸಮಾಜದ ನಿರ್ಮಾಣದ ದಿಕ್ಕಿನಲ್ಲಿ.



ದಾದಾ

ಎ. ವಿ. ಗೋಕಾಕ್

ನನ್ನ ಜನ್ಮ ಸಾಂಗಲಿಯಲ್ಲಾಯಿತು. ನಾನು ತಂದೆಗೆ ಒಬ್ಬನೇ ಮಗ. ಪ್ರಪಂಚದ ದೃಷ್ಟಿಯಲ್ಲಿ ನನ್ನ ತಂದೆ, ಖ್ಯಾತ ಅಧ್ಯಾಪಕ, ಸಾಹಿತಿ, ವಿನಯವಂತ, **ವಿನಾಯಕ ಕೃಷ್ಣ ಗೋಕಾಕರು**. ನನಗೆ ಮಾತ್ರ ಅವರು ದಾದಾ. ನನಗೆ ದಾದಾನ ಪ್ರೀತಿ, ವಾತ್ಸಲ್ಯ ಗಾಢವಾಗಿ ಲಭಿಸಿತು.

ನನಗೆ Grama phone ಎಂದರೆ ಬಹಳ ಹುಚ್ಚು. ಚಿಕ್ಕವನಿದ್ದಾಗ ನಾನು ಅನೇಕ ರೆಕಾರ್ಡ್‌ಗಳನ್ನು ಹಾಳು ಮಾಡಿರಬೇಕು. ಆದರೂ ದಾದಾ ಕೇಳಿದ್ದನ್ನೆಲ್ಲಾ ತಂದು ಕೊಡುತ್ತಿದ್ದರು. ಯಾವುದಕ್ಕೂ ಇಲ್ಲ ಎನ್ನುತ್ತಿರಲಿಲ್ಲ. ರೇಲು ಗಾಡಿಯ ಇಂಜಿನಿನ ಧ್ವನಿ ಕೇಳಿದಕೂಡಲೇ ನಾನು ಉತ್ತೇಜಿತನಾಗುತ್ತಿದ್ದೆ. ಯಾವುದೋ ಒಂದು ಸುವರ್ಣ ರಾಜ್ಯದಲ್ಲಿ ಹೋದಂತೆ ಎನಿಸುತ್ತಿತ್ತು ನನಗೆ. ದಾದಾ ಇದರ ಸಲುವಾಗಿ ಒಬ್ಬ ಜವಾನನನ್ನು (ಆಳು ಮಗ) ಗೊತ್ತು ಮಾಡಿದ್ದರು. ಅವನ ಕೆಲಸವೆಂದರೆ ಪ್ರತಿ ಸಲ ನನ್ನನ್ನು ವಿಶ್ರಾಮ್‌ಭಾಗ್ ರೇಲು ನಿಲ್ದಾಣದಿಂದ ಸಾಂಗಲಿಯವರೆಗೆ ಹಾಗೂ ಸಾಂಗಲಿಯಿಂದ ವಿಶ್ರಾಮ್‌ಭಾಗ್‌ವರೆಗೂ ತಿರುಗಾಡಿಸಿಕೊಂಡು ಕರೆತರುವುದು. ನನ್ನ ಅಕ್ಕ ತಂಗಿಯರ ಪ್ರಕಾರ ನಾನು ಹಟಮಾರಿಯಾಗಿದ್ದೆ. ಬೇಕಾದ್ದು ಸಿಗದಿದ್ದರೆ ಜೋರಾಗಿ ಅಳುತ್ತಿದ್ದೆ. ದಾದಾ ತಮಾಷೆಗೆ ನನ್ನನ್ನ " Prince of wails" (not wales) ಎಂದು ಕರೆಯುತ್ತಿದ್ದರು.

ದಾದಾ ಡೆಕ್ಕನ್ ಎಜುಕೇಶನ್ ಸೊಸೈಟಿಯಿಂದ ತೀವ್ರ ಮತ ಭೇದದಿಂದಾಗಿ ಹೊರ ಬೀಳಬೇಕಾಯಿತು. ೧೯೪೫ ರಲ್ಲಿ ಅವರು ಗುಜರಾತದ ವೀಸನಗರಕ್ಕೆ ಪ್ರಾಧ್ಯಾಪಕರಾಗಿ ಹೋದರು.

ಅಲ್ಲಿ ಎಮ್. ಎನ್. ಕಾಲೇಜಿನ ಪ್ರಿನ್ಸಿಪಾಲರ ಸೂತ್ರಗಳನ್ನು ಕೈಯಲ್ಲಿ ತೆಗೆದುಕೊಂಡರು. ಈ ಸಂಸ್ಥೆಯನ್ನವರು "The Queen of desert" ಎಂದು ವರ್ಣಿಸುತ್ತಿದ್ದರು. ನನ್ನ ಶಿಕ್ಷಣವನ್ನು ಪಕ್ಕದ ರಾಜಸ್ಥಾನದಲ್ಲಿದ್ದ ಒಂದು Convent ಶಾಲೆಯಲ್ಲಿ ಮಾಡಿಸಿ ಎಂದು ಅನೇಕ ಸ್ನೇಹಿತರೂ ಹಿತಚಿಂತಕರೂ ಸೂಚಿಸಿದರು. ಆದರೆ ಮಕ್ಕಳ ಶಿಕ್ಷಣ ಮಾತೃಭಾಷೆಯಲ್ಲಿ ಅಥವಾ ಪ್ರಾದೇಶಿಕ ಭಾಷೆಯಲ್ಲಿಯೇ ಆಗಬೇಕೆಂಬ ದೃಢ ನಂಬಿಕೆ ದಾದಾನದ್ದಿತ್ತು. ನನ್ನಲ್ಲಿ ಗುಜರಾಥಿ ಭಾಷೆಯ ಬಗ್ಗೆ ಪ್ರೀತಿಯನ್ನು ಹುಟ್ಟಿಸಿದರು ದಾದಾ.

ಒಂದು ದಿನ ದಾದಾ ತನ್ನ ಕೆಲಸವನ್ನು ಮುಗಿಸಿ ಬರೋಡಾದಿಂದ ವೀಸ ನಗರಕ್ಕೆ ಹಿಂದಿರುಗಿ ಬರುವಾಗ ಗುಜರಾಥಿ ಕತೆ ಪುಸ್ತಕಗಳ ಒಂದು ಸಂಗ್ರಹವನ್ನು ತಂದು ಕೊಟ್ಟರು. ಆ ಪುಸ್ತಕಗಳ ಬೆಲೆ ಆಗಿನ ಕಾಲದಲ್ಲಿ ಸುಮಾರು ನೂರು ರುಪಾಯಿಯಾದರೂ ಇದ್ದಿರಬೇಕು. ಪುಸ್ತಕಗಳನ್ನು ನೋಡಿ ಆದ ಸಂತೋಷ ನನಗೆ ಇಂದಿಗೂ ನೆನಪಿದೆ.

ವಿಸ್ ನಗರದ ಎಂ. ಎನ್. ಕಾಲೇಜನ್ನು ಬುನಾದಿಯಿಂದ ಕಟ್ಟಲು ಅವರು ಬಹಳ ಕಷ್ಟಪಟ್ಟರು. ಜನಗಳೊಂದಿಗೆ ಒಂದಾದರು. ವೀಸ ನಗರದ ಜನರ ಬಗ್ಗೆ ಅವರಿಗೆ ಆದರ ಮತ್ತು ಪ್ರೀತಿ ಇತ್ತು. ವೀಸ ನಗರದ ಜನ ಕೂಡ ಅವರನ್ನು ತಮ್ಮವರಂತೇ ಕಂಡರು. ೧೯೪೯ ರಲ್ಲಿ ಕೊಲ್ಹಾಪುರಕ್ಕೆ ವರ್ಗವಾದ ಕಾರಣ ದಾದಾ ವೀಸ ನಗರವನ್ನು ಬಿಡಬೇಕಾಯಿತು: ದಾದಾರ ವರ್ಗಾವಣೆಯನ್ನ ರದ್ದು ಮಾಡಿಸಿ ಕೊಳ್ಳುತ್ತೇವೆ ಎಂದು ಆ ಊರ ಜನ ಬಹಳ ಆಗ್ರಹ ಮಾಡಿದ್ದರು. ಆದರೆ ದಾದಾ ಒಪ್ಪಲಿಲ್ಲ. ವೀಸ ನಗರ ಬಿಟ್ಟ ದಿನ ಇಂದಿಗೂ ನೆನಪಿದೆ ನನಗೆ. ರೇಲ್ವೆ ನಿಲ್ದಾಣಕ್ಕೆ ಅನೇಕ ಜನ ಬಂದಿದ್ದರು. ನಮ್ಮ ಬೋಗಿಯನ್ನು ಹಾರಗಳಿಂದ ಅಲಂಕರಿಸಿದ್ದರು. ರೇಲ್ವೆ ಇಂಜಿನ್ನಿಗೂ ದೊಡ್ಡ ಹಾರ ಹಾಕಿದ್ದರು. ಯಾವ ಮಾತುಕತೆಯೂ ಆಗಲಿಲ್ಲ. ಬರೀ ಮೌನವಿತ್ತು. ಅದರ ತೀವ್ರತೆ ಮತ್ತು ಗಾಂಭೀರ್ಯ ಪ್ರತಿ ನಿಮಿಷಕ್ಕೆ ಹೆಚ್ಚಾಗುತ್ತಿತ್ತು. ಇಂಜಿನಿನ ಸೀಟಿ ಆದಕೂಡಲೇ ಜನಗಳ ಕಣ್ಣುಗಳು ಒದ್ದೆಯಾದವು. ಗಾಡಿ ಬಿಟ್ಟ ಮೇಲೆ ಬಹಳ ಹೊತ್ತು ದಾದಾ ಒಂದು ಶಬ್ದವನ್ನೂ ಆಡಲಿಲ್ಲ. ಒಂಬತ್ತು ವರ್ಷದವನಿದ್ದ ನನಗೆ ಇದೊಂದು ಅಭೂತಪೂರ್ವ ಅನುಭವವಾಗಿತ್ತು. ಆಗಿ ಹೋದ ದಿನಗಳನ್ನು ನೆನಪಿಸಿಕೊಂಡಾಗ ವೀಸ ನಗರ ರೇಲ್ವೆ ನಿಲ್ದಾಣದ ಆ ಪ್ರಸಂಗ ನನ್ನೆದುರು ನಿಲ್ಲುತ್ತದೆ.

ವೀಸ ನಗರವನ್ನು ಬಿಟ್ಟು ಕೊಲ್ಹಾಪುರಕ್ಕೆ ಬಂದ ಮೇಲೆ ನಾನು ಮರಾಠಿ ಭಾಷೆಯಲ್ಲಿ ಕಲಿಯಬೇಕಾಯಿತು. ಕೊಲ್ಹಾಪುರದಲ್ಲಿ ಏಳನೆಯ ತರಗತಿಯ ನಂತರ ಗುಜರಾಥಿಯಲ್ಲಿ ಕಲಿಯುವುದು ಸಾಧ್ಯವಿರಲಿಲ್ಲ. ಶಿಕ್ಷಣದ ಮಾಧ್ಯಮ ಬದಲಾಯಿಸಬೇಕಾದ್ದರಿಂದ ಬಹಳ ತೊಂದರೆಯಾಯಿತು. ಆದರೂ ದಾದಾನ ಹುರುಪಿನಿಂದಾಗಿ ಮರಾಠಿಯಲ್ಲೂ ಅಭ್ಯಾಸ ಮಾಡಿದೆ. ಕೊಲ್ಹಾಪುರದಲ್ಲಿ ರಾಜಾರಾಮ ಕಾಲೇಜಿನ ಪ್ರಿನ್ಸಿಪಾಲರೆಂದು ದಾದಾ ಕೀರ್ತಿಯನ್ನು ಪಡೆದರು.



ತನ್ನ ವಿದ್ಯಾರ್ಥಿ ಶಾಂತಿನಾಥ ದೇಸಾಯರೊಂದಿಗೆ ಚರ್ಚೆಯಲ್ಲಿ ಗೋಕಾಕರು.

ಅಲ್ಲಿಯ ಒಬ್ಬ ವಿದ್ಯಾರ್ಥಿ ಖಶಾಬಾ ಜಾಧವ್ ಕುಸ್ತಿಯಲ್ಲಿ ಸಾಕಷ್ಟು ಪ್ರವೀಣ ಪ್ರವೀಣನಿದ್ದನು. ಅವನಿಗೆ ದಾದಾ ಸಹಾಯ ಮಾಡಿದರು. ಆತ ಹೆಲ್‌ಸಿಂಕಿಯಲ್ಲಿ ನಡೆದ ಒಲಂಪಿಕ್ ಸ್ಪರ್ಧೆಯಲ್ಲಿ ಚಿನ್ನದ ಪದಕ ಪಡೆದನು.

೧೯೫೦ರಲ್ಲಿ ದಾದಾಗೆ ಧಾರವಾಡಕ್ಕೆ ವರ್ಗ ಆಯಿತು. ನಾನು ಕಲಿಯುವ ಕಾಲೇಜಿನ ಪ್ರಿನ್ಸಿಪಾಲನಾದದ್ದಕ್ಕೆ ದಾದಾನಿಗೆ ಬಹಳ ಸಂತೋಷವಾಗಿತ್ತು. ಧಾರವಾಡಕ್ಕೆ ಬಂದ ಮೇಲೆ ನನಗೆ ಕನ್ನಡದಲ್ಲಿ ಓದಲು ಮತ್ತು ಬರೆಯಲು ಬರುತ್ತಿರಲಿಲ್ಲ. ಎಸ್. ಎಸ್. ಸಿ. ಪರೀಕ್ಷೆ ಕೊಡುವ ವರೆಗೆ ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತಿರಲಿಲ್ಲ. ಎಸ್. ಎಸ್. ಸಿ. ಪರೀಕ್ಷೆ ಯಾದ ಮೇಲೆ ದಾದಾ ನನಗೆ ಕನ್ನಡ ಕಲಿಯಲು ಹೇಳಿದರು. ತಾಯಿಗೆ ಇಂಗ್ಲಿಷ್ ಅರ್ಥವಾಗುವುದಿಲ್ಲ. ನೀನು ದೊಡ್ಡವನಾದ ಮೇಲೆ ತಾಯಿಗೆ ಯಾವ ಭಾಷೆಯಲ್ಲಿ ಕಾಗದ ಬರೆಯುತ್ತಿ? ಎಂದು ಕೇಳಿದರು. ಮಾತೃ ಭಾಷೆಯ ಜ್ಞಾನ ಮಕ್ಕಳಿಗೆ ಬೇಕೇಬೇಕೆಂದು ದಾದಾರವರ ದೃಢ ನಂಬಿಕೆಯಿತ್ತು. ನನಗೆ ಕನ್ನಡ ಕಲಿಸಲು ಒಬ್ಬ ಶಿಕ್ಷಕನನ್ನು ನೇಮಿಸಿದರು. ಎಸ್. ಎಸ್. ಸಿ. ಪರೀಕ್ಷೆಯಾದ ನಂತರ ಸುಮಾರು ಮೂರು ತಿಂಗಳು ರಜೆ ಇರುತ್ತಿತ್ತು. ದಾದಾರವರ ಇಚ್ಛೆ ಪ್ರಕಾರ ನಾನು ಮೂರು ತಿಂಗಳಲ್ಲಿ ಕನ್ನಡವನ್ನು ಕಲಿತೆ. ಗುಜರಾಥಿ, ಮರಾಠಿ ಮತ್ತು ಕನ್ನಡ ಭಾಷೆಗಳನ್ನು ಕಲಿತಿರುವುದರಿಂದ ನನಗೆ ತುಂಬ ಲಾಭವಾಗಿದೆ. ಮಹಾರಾಷ್ಟ್ರ ರಾಜ್ಯದಲ್ಲಿ ಐ. ಎ. ಎಸ್. ಅಧಿಕಾರಿಯಾಗಿ ಹೋದಾಗ ಅದರ ಮಹತ್ವ ಗೊತ್ತಾಗಿದೆ.

ಧಾರವಾಡದಲ್ಲಿ ಇನ್ನೊಂದು ಘಟನೆ ನಡೆಯಿತು. ಅದೆಂದರೆ ನನ್ನ ಉಪನಯನ. ದಾದಾ ಧಾರ್ಮಿಕ ಸಂಸ್ಕಾರಗಳನ್ನು ಮೊದಲು ನಡೆಸಿದರು. ಸಾಯಂಕಾಲ ಒಂದು ವಿಶೇಷ ಸಮಾರಂಭವನ್ನು ಏರ್ಪಡಿಸಿದ್ದರು. ಸುಮಾರು ೨೦೦ ಜನರನ್ನು ಕರೆದಿದ್ದರು. ಆ ಸಮಾರಂಭದಲ್ಲಿ ಬೇರೆ ಬೇರೆ ಧರ್ಮದವರ ಹಿರಿಯರನ್ನೂ ಆಮಂತ್ರಿಸಿದ್ದರು. ಆ ಹಿರಿಯರು ಬೈಬಲ್, ಖುರಾನ್ ಹಾಗೂ ಪಾರ್ಸಿ ಧರ್ಮ ಗ್ರಂಥಗಳಿಂದ ಪ್ರಾರ್ಥನೆಗಳನ್ನು ಓದಿ ತೋರಿಸಿದರು. ನಂತರ ಅವರೆಲ್ಲರೂ ನನ್ನನ್ನು ಆಶೀರ್ವದಿಸಿದರು. ಅಂತ್ಯದಲ್ಲಿ ನನಗೆ ಪಾಂಡಿಚೆರಿಯ ತಾಯಿಯವರ ಪ್ರಾರ್ಥನೆಯನ್ನು ಓದಲು ಹೇಳಿದರು. ನನ್ನ ಉಪನಯನದ ದಿನ ಜರುಗಿದ ಈ ಸಮಾರಂಭ ನನಗೆ ಸರ್ವಧರ್ಮ ಪರಿಷತ್ತಿನಂತೆ ಎನಿಸುತ್ತಿತ್ತು.

ದಾದಾ ನನ್ನಲ್ಲಿ ಸಾಹಿತ್ಯದ ಅಭಿರುಚಿಯನ್ನು ಹುಟ್ಟಿಸಿದರು. ಬೆಳಿಗ್ಗಿನಿಂದ ಸಂಜೆವರೆಗೆ ಶೆಲ್ಲಿ ಮತ್ತು ಕೀಟ್ಸ್‌ನ ಕವನಗಳನ್ನು ಗುಣಿ ಗುಣಿಸುತ್ತಿದ್ದರು ಅವರು. ಶೆಕ್ಸ್‌ಪಿಯರ್, ಶೆಲ್ಲಿ, ಕೀಟ್ಸ್‌ರ ವ್ಯಕ್ತಿತ್ವ ಮತ್ತು ಸಾಹಿತ್ಯದ ಬಗ್ಗೆ ಊಟದ ಸಮಯದಲ್ಲಿ ಮಾತನಾಡುತ್ತಿದ್ದರು. ದಾದಾನ ಸಂಗೀತ ಪೂರ್ಣವಾದ ಧ್ವನಿ ಇನ್ನೂ ನನ್ನ ಕಿವಿಗಳಲ್ಲಿ ಕೇಳಿಸುತ್ತಿದೆ, ಕೆಲವು ಸಾಲುಗಳು ನೆನಪಿದೆ. Shakespear, Shelly, Keats ಸಾಹಿತ್ಯದಿಂದ ಇಂದಿಗೂ ನಾನು ಸಂತೋಷಪಡುತ್ತೇನೆ.



ಮುಂಬಯಿಯಲ್ಲಿ ಮಗನ ಮನೆಯ ತಾರಸಿಯ ಮೇಲೆ, ಗೋಕಾಕರು.

ನಾನು ಬಿ. ಎ. ಪರೀಕ್ಷೆಯಲ್ಲಿ ಬರೀ ಪಾಸು ಆದಾಗ ಪೂರ್ಣವಾಗಿ ನಿರಾಶೆ ಹೊಂದಿದೆ. ದಾದಾ ನನಗೆ ವಿಶ್ವಾಸ ತುಂಬಿದ್ದಲ್ಲದೆ ನನಗಾಗಿ ಕೆಲವು Economics ಪುಸ್ತಕವನ್ನೂ ಓದಿದರು ಮತ್ತು ಹೇಳಿಕೊಟ್ಟರು. ನಾನು ೧೯೬೨ ರಲ್ಲಿ M. A. ನಲ್ಲಿ first class ಬಂದಿದ್ದೆ. ೧೯೬೪ ರಲ್ಲಿ I. A. S. ಸೇರಿದೆ.

ದಾದಾರವರು ಧ್ಯಾನ ಮಾಡುತ್ತಿದ್ದ ವೇಳೆಯಲ್ಲಿ ಕೆಲವೊಮ್ಮೆ ಅವರಿಗೆ ಅದ್ಭುತವಾದ, ಸಂಕೇತಿಕವಾದ ಕನಸುಗಳು ಬೀಳುತ್ತಿದ್ದವು. ಒಮ್ಮೆ ಇನ್ನೂ ಬೆಳಗಾಗಿರಲಿಲ್ಲ. ಇದು ೧೯೬೦ರಲ್ಲಿ ನಡೆದದ್ದು, ನಾನು ಎಂ. ಎ. ಮೊದಲನೇ ವರ್ಷದಲ್ಲಿದ್ದೆ. ದಾದಾರವರಿಗೆ ಸ್ಪಷ್ಟವಾಗಿ ಒಂದು ಧ್ವನಿ ಕೇಳಿಸಿತು. “Anil Gokak M. A. First Class I. A. S.” ಈ ವಿಷಯ ದಾದಾರವರು ನನಗೆ ತಿಳಿಸಿದಾಗ ನನಗೆ ವಿಶ್ವಾಸವಾಗಲಿಲ್ಲ, ಅಸಾಧ್ಯವೆನಿಸಿತು. ಆಗಿನ್ನೂ ನಾನು ಮೊದಲನೇ ವರ್ಷದ ಎಂ. ಎ. ನಲ್ಲಿದ್ದೆ. ಆದರೆ ದಾದಾರವರಿಗೆ ಅವರ ಒಳ ಧ್ವನಿಯಲ್ಲಿ ಪೂರ್ತಿ ನಂಬಿಕೆಯಿತ್ತು. ನಾನು ನನ್ನ ಕೈಯಲ್ಲಿ ಆದಷ್ಟು ಮಾಡುತ್ತಿದ್ದೆ. ದಾದಾರವರ ಕನಸು ನನಸಾಯಿತು.

ಒಮ್ಮೆ ದಾದಾರವರು English Seminar ಸಲುವಾಗಿ ನನ್ನನ್ನ ಕಾಶ್ಮೀರಕ್ಕೆ ಕರೆದುಕೊಂಡು ಹೋಗಿದ್ದರು. ಕಾಶ್ಮೀರದ ಸೌಂದರ್ಯ ಅವರನ್ನು ಮುಗ್ಧರನ್ನಾಗಿಸಿತ್ತು. ಅವರು ಅಲ್ಲೆ ಬರೆದ ಕವಿತೆ ಇನ್ನೂ ನನ್ನ ನೆನಪಿನಲ್ಲಿದೆ.

"ನಭವ ತೆರೆಯಿತು
ಹಿಮವ ಕರಗಿತು
ಓಡಿ ಬಾ ಕಾಶ್ಮೀರಕೆ
ಇಲ್ಲಿ ಜಹಲಮಾ ತೀರಕೆ"

Central Institute ಸಲುವಾಗಿ ದಾದಾ ಬಹಳಷ್ಟು ಕೆಲಸ ಮಾಡಲು ಪ್ರಯತ್ನಿಸಿದ್ದಾರೆ. ಅವರೇ ಅದರ ಸಂಸ್ಥಾಪಕ ನಿರ್ದೇಶಕರಾಗಿದ್ದರು. ಅಲ್ಲಿ ಆಗ (೧೯೫೯-೬೬) ಭಾರತೀಯರಿಗೂ ಇಂಗ್ಲಿಷರಿಗೂ ಬಹಳ ಮತಭೇದ ಇತ್ತು. ಇಂಗ್ಲಿಷ್ ಜನಗಳು Academic Head ಮತ್ತು "Administrative head ಬೇರೆ ಬೇರೆ ಎಂದು ಹೇಳುತ್ತಿದ್ದರು. ಕೊನೆ ನಿರ್ಣಯ ಯಾವಾಗಲೂ ಇಂಗ್ಲಿಷ್ (British) ಜನಗಳದ್ದೇ ಆಗಬೇಕು ಎನ್ನುತ್ತಿದ್ದರು. ಭಾರತೀಯರು ಬರೀ "Adminstritive Head ನ್ನುತ್ತಿದ್ದರು. ಇದು ದಾದಾರವರಿಗೆ ಒಪ್ಪಿಗೆ ಇರಲಿಲ್ಲ. ಎಲ್ಲಾ ತರಹದ ಜವಾಬ್ದಾರಿ Directorದೇ ಇರಬೇಕು ಎಂದು ದಾದಾ ಹೋರಾಡಿದರು. ಮತ್ತು ಕೊನೆಗೆ ಅದನ್ನು ಪಡೆದರು. British ಜನಗಳು ಒಪ್ಪಬೇಕಾಯಿತು. ಮತ್ತು ಪೂರ್ತಿಯಾಗಿ ಸಹಕರಿಸಿದರು. ದಾದಾ ಅಲ್ಲಿ ಭಾಷಾ ಅನುವಾದದ ಒಂದು ಶಾಖೆ ತೆಗೆಯುವುದರಲ್ಲೂ ಯಶಸ್ವಿಯಾದರು.

ದಾದಾ ದೃಢನಿಶ್ಚಿತರು. ಅವರು Deccan Education Society ಯಲ್ಲಿರುವಾಗ ಅವರಿಗೂ ಆಡಳಿತ ಮಂಡಳಿಗೂ ಗಂಭೀರ ಮತಭೇದಗಳುಂಟಾದವು. ಒಂದು ಗುಂಪಿನವರು ದಾದಾರವರನ್ನು



ಶ್ರೀಮತಿ, ಶ್ರೀ ಗೋಕಾಕರು ಮುಂಜಾವಿನ ಛಳಿಗೆಯಲ್ಲಿ

ಹೀಯಾಳಿಸುತ್ತಿದ್ದರು. ಒಮ್ಮೆ ಒಂದು Meeting ನಲ್ಲಿ ಈ ಗುಂಪಿನವರು ತಮ್ಮ ಹದ್ದನ್ನು ಮೀರಿ ವರ್ತಿಸಿದಾಗ ದಾದಾ ತಮ್ಮಲ್ಲಿದ್ದ Agenda ಕಾಗದದ ಮೇಲೆಯೇ ತಮ್ಮ ರಾಜಿನಾಮೆ ಪತ್ರ ಬರೆದು ಇಟ್ಟು ಹೊರಬಂದರು. ಇನ್ನು ಎಂದಿಗೂ ಈ ಸೊಸೈಟಿಗೆ ಬರಬಾರದು ಎಂದು ನಿಶ್ಚಯಿಸಿ ಹೊರ ಬಿದ್ದಿದ್ದರು. ಕರ್ವೆ ಎಂಬ ಮಹನೀಯರು ಎಷ್ಟೋ ಸಮಾದಾನ ಮಾಡಿ ರಾಜಿನಾಮೆ ಹಿಂತೆಗೆದುಕೊಳ್ಳಲು ಕೇಳಿದರೂ ದಾದಾ ಒಪ್ಪಲಿಲ್ಲ. ಒಂದು ವರ್ಷ ಬೇರೆ ಕೆಲಸ ಸಿಗುವ ತನಕ ದಾದಾ ಕಾಯಬೇಕಾಯಿತು ನಿಜ. ಕಡೆಗೆ ಹೈದರಾಬಾದಿನ Osmania University ಯಲ್ಲಿ ಕೆಲಸಕ್ಕೆ ಸೇರಿದರು ದಾದಾ.

ಸ್ವಾತಂತ್ರ ಹೋರಾಟದಲ್ಲಿ ತಮ್ಮದೇ ರೀತಿಯಲ್ಲಿ ಭಾಗವಹಿಸಿದ್ದರು ದಾದಾ. ಅವರು ಸಾಂಗ್ಲಿಯ ವಿಲ್ಲಿಂಗ್ಡನ್ ಕಾಲೇಜಿನಲ್ಲಿದ್ದಾಗ ಪೊಲೀಸ್ ಸೂಪರಿಡೆಂಟರು ವಿದ್ಯಾರ್ಥಿಗಳ ಮೇಲೆ ಗೋಲಿಬಾರ್ ಮಾಡುವವರಿದ್ದರು. ಎಸ್ಪಿಯವರು ಗುಂಡು ಹಾರಿಸಿದ್ದಲ್ಲಿ ಮೊದಲು ತನ್ನ ಮೇಲೆ ಹಾರಿಸಬೇಕು ಎಂದು ದಾದಾ ಮುಂದೆ ನಿಂತರು. - ಪಿ. ಜಿ. ಪಾಟೀಲ್ ಎಂಬ ದಾದಾನ ವಿದ್ಯಾರ್ಥಿ ಚಳುವಳಿಯಲ್ಲಿ ಭಾಗವಹಿಸಿದ್ದಕ್ಕಾಗಿ ಜೇಲಿಗೆ ಹೋಗಬೇಕಾಗಿ ಬಂತು. ಜೇಲಿನಲ್ಲಿ ಆತನ ಅವಶ್ಯಕತೆಗಳೇನೇನು ಎಂದು ವಿಚಾರಿಸಿಕೊಂಡು ಬೀಳ್ಕೊಟ್ಟಿದ್ದರು ದಾದಾ: ಜೇಲಿಗೆ ಪುಸ್ತಕಗಳನ್ನ ಕಳಿಸುತ್ತಿದ್ದರು, ಪತ್ರ ಬರೆಯುತ್ತಿದ್ದರು ಅವರು. ದಾದಾ ತಮ್ಮ ವಿದ್ಯಾರ್ಥಿಗಳಿಗೆ ಸ್ನೇಹಿತ, ಮಾರ್ಗದರ್ಶಕ ಮತ್ತು ತತ್ವಜ್ಞಾನಿಯಾಗಿದ್ದರು.

ದಾದಾನ ಜೀವನದ ಕೊನೆಯ ಹಂತಕ್ಕೆ ಬರುತ್ತೇನೆ. ಕೆಲವು ವಿಷಯ ಮನಸ್ಸಿನಲ್ಲಿ ಹಸಿರಾಗಿ ಉಳಿಯುತ್ತದೆ. ದಾದಾನ ಆರೋಗ್ಯ ಸರಿಯಾಗಿಯೇ ಇರುತ್ತಿತ್ತು. ಆದರೆ ೧೯೮೭ರಲ್ಲಿ ಇದ್ದಕ್ಕಿದ್ದಂತೆ ಅವರು ಬಹಳ ಸೊರಗಿದರು. ನಾನು ತಕ್ಷಣ ವಿಮಾನದಲ್ಲಿ ಬೆಂಗಳೂರಿಗೆ ದಾವಿಸಿದೆ. ಅವರು ಹಾಸಿಗೆ ಹಿಡಿದಿದ್ದರು. ನಡೆಯುವುದೂ ಅಸಾಧ್ಯವಾಗಿತ್ತು. ನಾನು Study Leave ಮೇಲೆ ಬೆಂಗಳೂರಿನಲ್ಲಿ ಒಂದು ವರ್ಷ ಕಳೆಯುವುದೆಂದು ನಿರ್ಣಯಿಸಿದೆ. ಇದು ಅವರಿಗೆ ಬಹಳ ಸಹಾಯವಾಯಿತು. ಭಾರತೀಯ ಜ್ಞಾನಪೀಠದ ಪರಿಶೀಲನೆಗಾಗಿ ದಾದಾರವರ ಕೃತಿಗಳನ್ನು ಕೇಳಿದ್ದರು. ದಾದಾರವರ ಕೃತಿಗಳ ಬಗ್ಗೆ ಒಂದು ಸಣ್ಣ ಪುಸ್ತಿಕೆ ಸಿದ್ಧಮಾಡಿದೆವು. ಆದರೆ ಪಡಬೇಕಾದ ಸಾಹಸ ಅಷ್ಟಿಷ್ಟಲ್ಲ. ಈಗಿನ ಕಾಲದ ಟೈಪಿಸ್ಟರನ್ನ ದೇವರೇ ಕಾಪಾಡಬೇಕು! ಆದರೆ ನನ್ನ ಗೆಳೆಯ ಘೋಶಾಲ್ ಸಹಾಯದಿಂದ ಪುಸ್ತಿಕೆಯ ಕೆಲಸ ಮುಗಿಸುವುದು ಸಾಧ್ಯವಾಯಿತು. ಇಡೀ ಹದಿನೈದು ದಿನ ಬೆಳಿಗ್ಗೆ ಸಾಯಂಕಾಲ ಇದೇ ಕೆಲಸ. ದಾದಾ ೧೯೭೧ ರ ಜ್ಞಾನಪೀಠ ಪ್ರಶಸ್ತಿ ಪಡೆದರು. ಮಾಡಿದ ಕೆಲಸ ಸಾರ್ಥಕವಾಯಿತು ಎಂದು ನನಗನಿಸಿತು.

ಎಲ್ಲೆಡೆಯಲ್ಲೂ ಸತ್ಕಾರಗಳು, ಎಲ್ಲೆಡೆಯಲ್ಲೂ ಸನ್ಮಾನಗಳು! ಕರ್ನಾಟಕದ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ರಾಮೇಗೌಡರವರ ಹೃದಯಸ್ಪರ್ಶಿ ಕಾಗದ ಇಂದಿಗೂ

ಖ್ಯಾತ ಚಿತ್ರಕಾರ ರಾಮ್‌ಕುಮಾರ್ ಜೊತೆ ಮಾತಿನಲ್ಲಿ ಮಗ್ನರಾದ ಗೋಕಾಕರು, ಮುಂಬಯಿಯ ಚೌಪಾಟಿ ಸಮುದ್ರ ತೀರ. ಹಿನ್ನೆಲೆಯಲ್ಲಿ ಅರೆ ನಿರ್ಮಿತ ಬಹುಮಹಡಿ ಕಟ್ಟಡಗಳು.

ನೆನಪಾಗುತ್ತದೆ. ಅವರ ಆಗ್ರಹ, ವಾತ್ಸಲ್ಯ, ಹಾಗೂ ಧಾರವಾಡದ ಜನರ ಆತ್ಮೀಯತೆಯಿಂದ ದಾದಾ ಪುಳುಕಿತಗೊಂಡಿದ್ದರು . ಆದರೆ ಅವರ ಆರೋಗ್ಯ ಇದನ್ನೆಲ್ಲ ತಾಳಲಾರದು ಎನ್ನುವ ಅನುಮಾನ ನನಗಿತ್ತು. ಈ ಮುಪ್ಪಿನಲ್ಲಿ ಅವರು ಧಾರವಾಡಕ್ಕೆ ಹೋಗುವುದು ಉಚಿತವಲ್ಲವೆನಿಸಿದರೂ ಈಗಾಗದಿದ್ದರೆ ಎಂದಿಗೂ ಇಲ್ಲ ಎಂಬ ದ್ವಂದ್ವದಲ್ಲಿ ಅವರು ಹೋಗುವುದೇ ಸರಿ ಎಂದು ನಿರ್ಣಯಿಸಿದೆ.

ಕರ್ನಾಟಕ ಕಾಲೇಜು ದಾದಾನ Alma mater. ಮತ್ತೊಮ್ಮೆ ಕರ್ನಾಟಕ ಕಾಲೇಜು ನೋಡುವ ಉತ್ಸಾಹ ದಾದಾಗೆ. ಅದರಲ್ಲೂ ರೇಲ್ವೆ ನಿಲ್ದಾಣದಿಂದ ಕಾಲೇಜನ್ನ ಕಾಣುವುದೆಂದರೆ ಅವರಿಗೆ ಬಹಳ ಪ್ರೀತಿ. ಧಾರವಾಡದ ಊರು ಮತ್ತು ಕರ್ನಾಟಕ ಕಾಲೇಜು ಎರಡನ್ನೂ ಬೇರೆ ಮಾಡುವುದು ಅಸಾಧ್ಯವಾಗಿತ್ತು ಅವರಿಗೆ. ಅವರು ತಮ್ಮ ಒಂದು ಲೇಖನದಲ್ಲಿ "ಕರ್ನಾಟಕ ಕಾಲೇಜ್ ಇಲ್ಲದ ಧಾರವಾಡ ಎಂತಹುದು?" ಅಂತ ಬರೆದಿದ್ದಾರೆ. ಅಂತೂ ಧಾರವಾಡದಲ್ಲಿ ಎಲ್ಲಾ ಗೆಳೆಯರನ್ನೂ ಬೆಟ್ಟಿಯಾದರು. ನಾವು ಸಮಾರಂಭವೊಂದಕ್ಕಾಗಿ ಹೋಗುತ್ತಿದ್ದ ರಸ್ತೆಯ ಮೇಲೆ ನನಗಾದ ಅನುಭವ ಹೇಳುತ್ತೇನೆ. ಈ ರಸ್ತೆಯನ್ನು ಶುರು ಮಾಡಿದವರೇ ದಾದಾ ಮತ್ತು ಅವರ ವಿದ್ಯಾರ್ಥಿಗಳು. ನಾನು ಕೂಡಾ ವಿದ್ಯಾರ್ಥಿಯಾಗಿದ್ದಾಗ ಆ ರಸ್ತೆ ಮಾಡಲಿಕ್ಕೆ ದುಡಿದಿದ್ದೆ. ಇಂದಿಗೂ ಆ ರಸ್ತೆಗೆ ಗೋಕಾಕ್ Road ಅನ್ನುತ್ತಾರೆ. ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ಅವರ ಒಂದು ಕವನ ಹೀಗಿದೆ.

Of a road, an open road
Of a road is all my song,
the road we made, through sun and shade
And made so nice and long

ಧಾರವಾಡದಿಂದ ಮುಂಬಯಿಗೆ ಹಿಂದಿರುಗಿದೆವು. ದಾದಾ ಬಳಲಿದ್ದರು. ಮನಸ್ಸು ಪುಲಕಿತವಾಗಿದ್ದರೂ ದೇಹ ಬಳಲಿತ್ತು. ಏಪ್ರಿಲ್ ೧೯೯೨. ದಾದಾರವರ ಆರೋಗ್ಯ ಬಹಳ ಕೆಟ್ಟಿತ್ತು. ಡಾಕ್ಟರ್ ತಕ್ಷಣ ಆಸ್ಪತ್ರೆಗೆ ಸೇರಿಸಬೇಕೆಂದರು. ಆದರೆ ದಾದಾರವರು ಹೋಗಲು ಒಪ್ಪಲಿಲ್ಲ. ಅವರಿಗಾಗಿ ಕೊಠಡಿಗಳನ್ನು ಕಾಯ್ದಿರಿಸಿದ್ದರೂ ಹೋಗಲಿಲ್ಲ. ನನಗೆ ಬಹಳ ಮಹತ್ವದ ಕಾರ್ಯದಿಂದಾಗಿ ದೆಹಲಿಗೆ ಹೋಗುವುದಿದ್ದರೂ ಅದನ್ನು ರದ್ದು ಮಾಡಿದೆ. ಡಾಕ್ಟರ್‌ರವರ ಪ್ರಕಾರ ದಾದಾರವರನ್ನು ಇಡೀ ದಿನ ನಿದ್ದೆ ಮಾಡದಿರುವ ಹಾಗೆ ಇಟ್ಟಿರಬೇಕಾಗಿತ್ತು. ಇಲ್ಲವಾದಲ್ಲಿ ಅವರು ಮೂರ್ಛೆ ಹೋಗುತ್ತಾರೆ ಎಂದಿದ್ದರು. ನಾವೆಲ್ಲಾ, ನನ್ನ ತಾಯಿ, ಹೆಂಡತಿ, ಮಗ ಎಲ್ಲಾ ಸ್ವಲ್ಪ ಸ್ವಲ್ಪ ಕಾಲ ಅವರೊಂದಿಗೆ ಮಾತನಾಡಿ ಎಚ್ಚರಿಕೆಯಿಂದ ಇಟ್ಟಿದ್ದೆವು. ಪಿ. ಜಿ. ಪಾಟೀಲ್ ಮತ್ತು ಶ್ರೀ ಪಾಟೀಲ್ ಸಹ ನಮ್ಮ ಜೊತೆ ಇದ್ದರು.

ನಾನೇನು ಕವಿಯಲ್ಲ, ಕವಿತೇನೂ ಬರೆಯುವುದಿಲ್ಲ. ಆದರೆ ಒಮ್ಮೊಮ್ಮೆ ವಿಮಾನದಲ್ಲಿ ಬಾಂಬೆ, ದೆಹಲಿಗೆ ಹೋಗಿ ಬರುತ್ತಿರುವಾಗ ಕೆಲವು ಸಣ್ಣ ಕವಿತೆ ಬರೆಯುತ್ತಿರುತ್ತೇನೆ. ಇದು ದಾದಾರವರಿಗೆ ಗೊತ್ತಿರಲಿಲ್ಲ. ಆದರೆ ಆ ದಿನ ರಾತ್ರಿ ಮಲುಗುವ ಮುನ್ನ ನಾನು ಈ ವಿಷಯ ತಿಳಿಸಿದಾಗ ಅವರಿಗೆ ಆಶ್ಚರ್ಯವೂ ಸಂತೋಷವೂ ಆಯಿತು. ಒಂದೆರೆಡು ಓದಿ ತೋರಿಸಿದೆ. ಒಂದು ಕವಿತೆಯ ಕೊನೆಯಲ್ಲಿ ಹೀಗಿದೆ.

The massage rings and rings
The Poet sings and sings,
Uniting in his rhyme,
The timeless with time.

ಆ ರಾತ್ರಿ ನಾನೀ ಸಾಲುಗಳನ್ನು ಓದಿದೆ. ದಾದಾ ಸಂತೋಷದಿಂದ ಮಲಗಿದರು. ೨೮. ೪. ೯೨. ರ ಆ ರಾತ್ರೆ ಅವರ ಕೊನೇ ರಾತ್ರಿಯಾಗಿರಬಹುದು ಎಂದು ಕನಸು ಮನಸ್ಸಿನಲ್ಲೂ ಎಣಿಸಿರಲಿಲ್ಲ ನಾನು.



ಮದುವೆಯೆಂಬ ನರಕ - ೨

ಸ್ಟ್ರಿಂಡ್‌ಬರ್ಗ್‌ನ ಮದುವೆಗಳು

ಪ್ರಸನ್ನ

ಸ್ಟ್ರಿಂಡ್‌ಬರ್ಗ್ ಸ್ವೀಡನ್ ದೇಶದ ಬಹುದೊಡ್ಡ ಲೇಖಕ. ನೆರೆಯದೇಶ ನಾರ್ವೆಯ ನಾಟಕಕಾರ ಇಬ್ಸನ್ನನಿಗೆ ಸಮಕಾಲೀನ : ಇಂಗ್ಲೆಂಡಿನ ಬರ್ನಾಡ್ ಶಾಗೆ ಕೂಡಾ ಸಮಕಾಲೀನ. ಇಬ್ಸನ್ ಮತ್ತು ಶಾ ಇವರಿಬ್ಬರೂ ಸ್ಟ್ರಿಂಡ್‌ಬರ್ಗ್‌ನಿಗಿಂತ ಹೆಚ್ಚು ವಿಶ್ವವಿಖ್ಯಾತರಾದ ನಾಟಕಕಾರರು. ಆದರೆ ಸ್ಟ್ರಿಂಡ್‌ಬರ್ಗ್ ಇವರಿಬ್ಬರಿಗಿಂತ ಪ್ರತಿಭಾವಂತ ನಾಟಕಕಾರ. ಪ್ರತಿಭೆಯ ಈ ಸಂಗತಿ ಇಬ್ಸನ್ನನ ಅರಿವಿಗೂ ಬಂದಿತ್ತು.

ಭಾರತದಲ್ಲಿ ರವೀಂದ್ರನಾಥ ಟಾಗೋರರಿಗಿರುವ, ರಾಷ್ಟ್ರೀಯ ಲೇಖಕನೆಂಬ ಸಮ್ಮಾನ ಸ್ವೀಡಿಷ್ ಭಾಷೆಯಲ್ಲಿ ಸ್ಟ್ರಿಂಡ್‌ಬರ್ಗ್‌ನಿಗೆ ಸಿಕ್ಕಿದೆ. ಆದರೆ ಸ್ಟ್ರಿಂಡ್‌ಬರ್ಗ್ ಟಾಗೋರರಿಗೆ ತದ್ವಿರುದ್ಧ. ರಾಷ್ಟ್ರೀಯ ಲೇಖಕರ ಸಾಮಾನ್ಯ ಲಕ್ಷಣಗಳೆಂದು ನಾವು ಗ್ರಹಿಸುವ ಉದ್ದಮುಖ, ಅತಿ ಗಾಂಭೀರ್ಯ, ಬಿಳಿಯನಿಳಿದಾದ ಗಡ್ಡ, ಏಕವಾಗಿ ಇಡೀ ದೇಹವನ್ನ ಮುಚ್ಚಬಲ್ಲ ನಿಲುವಂಗಿ ಹಾಗೂ ನುಡಿದ ಪ್ರತಿಯೊಂದು ಮಾತೂ ಮಾಣಿಕ್ಯವೇ ಆಗಿರಬೇಕು ಎನ್ನುವ ವ್ಯರ್ಥ ಹಟ ಸ್ಟ್ರಿಂಡ್‌ಬರ್ಗ್‌ನಿಗಿರಲಿಲ್ಲ.

ಟಾಗೋರ್, ಟಾಲ್‌ಸ್ಟಾಯ್, ಬರ್ನಾಡ್‌ಶಾ, ಕುವೆಂಪು, ಸುಬ್ರಹ್ಮಣ್ಯ ಭಾರತಿ, ವಲ್ಲತ್ತೋಳ್ ಇತ್ಯಾದಿ ರಾಷ್ಟ್ರೀಯ ಲೇಖಕರದ್ದು ಋಷಿಪುಂಗವರ ನಿಲುವು. ರಾಷ್ಟ್ರೀಯ ಲೇಖಕ ಸಣ್ಣಮಾತುಗಳನ್ನ ಆಡಬಾರದು, ಅರ್ಧ ಸತ್ಯಗಳನ್ನ ನುಡಿಯಬಾರದು, ಅಖಂಡ ಸತ್ಯಗಳನ್ನ ಮಾತ್ರ ನುಡಿಯಬೇಕು ಎಂದು ನಾವು ತಿಳಿಯುತ್ತೇವೆ. ಆತನ ಅರಿವಿಗೆ ಬೆತ್ತಲೆ ದೇಹ, ಮತ್ತದರ ಸುತ್ತಲಿರುವ, 'ಮೂಳೆ ಮಾಂಸದ ತಡಿಕೆ'ತಾಕುವಂತಿಲ್ಲ, ಬರೇ ಅನಿರ್ವಚನೀಯ ಆನಂದಗಳು, ಕೃತಿಕಾಪುಂಜಗಳು ಹಾದು ಹೋಗಬೇಕು ಎಂದು ಆಶಿಸುತ್ತೇವೆ. ಸಾಮಾನ್ಯ ಓದುಗರು ಕೂಡಾ, ರಾಷ್ಟ್ರೀಯ ಲೇಖಕರ ಪುಸ್ತಕವನ್ನ ಕೈಗೆತ್ತಿಕೊಳ್ಳುವ ಮೊದಲು, ಸಾಷ್ಟಾಂಗ ನಮಸ್ಕಾರ ಹಾಕಿ, 'ಕೊಂಕುವ ಸಂಚಾರಿ ಭಾವಗಳನ್ನ' ಹದ್ದುಬಸ್ತಿನಲ್ಲಿಟ್ಟುಕೊಂಡು ಆನಂತರ ಹಾಳೆ ತಿರುವುತ್ತಾರೆ.

ಸ್ಟ್ರಿಂಡ್‌ಬರ್ಗನ ಉನ್ಮಾದ

ಸ್ಟ್ರಿಂಡ್‌ಬರ್ಗ್ ಟಾಗೋರರಿಗೆ ತದ್ವಿರುದ್ಧ : ಆತ ಅರೆಹುಚ್ಚ, ಸಿನಿಕ, ಸಿಡುಕ, ಜಗಳಗಂಟ ಹಾಗೂ ವಿಪರೀತದ ಪ್ರತಿಭೆ. ಸ್ಟ್ರಿಂಡ್‌ಬರ್ಗ್ ಮಾಡದ ಕೆಲಸಗಳಿಲ್ಲ, ಕೈಯಾಡಿಸದ ಮಾಧ್ಯಮವಿಲ್ಲ. ಜಿ. ಬಿ. ಜೋಶಿ ಯವರ **ಸತ್ತವರ ನೆರಳು** ನಾಟಕದ **ಹುಚ್ಚರಾಚ್ಯನ** ತರಹ ಜೀವನವಿಡೀ 'ಬೆನ್ನಮೇಲೆ ಉರಿಯುವ ದಂಡಕಾಷ್ಠ ಅಂಟಿಸಿಕೊಂಡು' ನೋವಿನಿಂದ ಓಡಿದವನು ಅವನು. ಆದರೂ ಸ್ವೀಡನ್ನಿನ ಜನತೆ ಹಂಸಕ್ಷೀರ ನ್ಯಾಯ ಮಾಡದೆ, ಆತನ ಅರೆಬರೆ ಕೆಲಸಗಳು, ಅರ್ಥಹೀನ ಅಲೆದಾಟಗಳು, ವ್ಯಕ್ತಿಗತ ಜಗಳಗಳು ಇವುಗಳ ಜೊತೆ ಜೊತೆಗೇ ಆತನ ನಾಟಕಗಳು, ರಂಗಕರ್ಮ, ಕಾದಂಬರಿಗಳು, ಕತೆ, ಆತ್ಮಕತೆ, ವಿಜ್ಞಾನ, ಗೌಡ ಬಂಗಾಲಿ, ಬಂಗಾರ ಮಾಡುವ ಯತ್ನ, ದೇವರುಗಳು ಎಲ್ಲವನ್ನೂ ಸ್ವೀಕರಿಸಿ ಆತನಿಗೆ ರಾಷ್ಟ್ರೀಯ ಲೇಖಕನ ಸಮ್ಮಾನ ನೀಡಿದರು.

ಸತ್ಯದರ್ಶನದ ದಾರಿ ನೋವಿನದಾರಿ, ಅಶಾಂತಿಯ ದಾರಿ. ಸತ್ಯದ ಬೆನ್ನು ಹತ್ತಿದ ವ್ಯಕ್ತಿ, ಸತ್ತನಂತರ ದೇವರ ಪಟವಾಗಬಹುದೋ ಏನೋ, ಆದರೆ ಬದುಕಿದ್ದಾಗ ಮಾತ್ರ ಅತ್ಯಂತ ವಿಹ್ವಲನಾಗಿರುತ್ತಾನೆ: ರಾಮಕೃಷ್ಣ ಪರಮಹಂಸರಂತೆ ಇರುತ್ತಾನೆ. ಬತ್ತಲೆ ಹೆಂಗಸನ್ನ ತಾಯಿ ಎನ್ನುತ್ತಾನೆ, ಕಾಳಿಯನ್ನ ಹೆಂಡತಿಯೆಂದು ಮುದ್ದಾಡುತ್ತಾನೆ, ಕರಿಬೆಕ್ಕಿಗೆ ಪ್ರಸಾದ ಉಣ್ಣಿಸುತ್ತಾನೆ, ವಿಹ್ವಲತೆಯ ಶಿಖರದಲ್ಲಿ ಮೂರ್ಛಿತನಾಗಿ ಮಲಗುತ್ತಾನೆ. ಸ್ಟ್ರಿಂಡ್‌ಬರ್ಗ್ ತನ್ನ ಜೀವಿತದಲ್ಲಿ ಕನಿಷ್ಠ ಮೂರುಬಾರಿಯಾದರೂ ಹುಚ್ಚರ ಆಸ್ಪತ್ರೆಯ ಬಾಗಿಲುಬಡಿದು ಆಶ್ಚರ್ಯಕರ ರೀತಿಯಲ್ಲಿ ಪಾರಾಗಿ ಬಂದವನು. ಆದರೆ ಸ್ಟ್ರಿಂಡ್‌ಬರ್ಗ್‌ನ ನಿಜವಾದ ಉನ್ಮಾದವಿದ್ದದ್ದು ಆತನ ಹೆಂಗಸರುಗಳಲ್ಲಿ ಹಾಗೂ ಹೆಂಡತಿಯರಲ್ಲಿ.

ಸ್ಟ್ರಿಂಡ್‌ಬರ್ಗ್‌ನ ವ್ಯಕ್ತಿತ್ವ ಭಾರತೀಯ ಮನಸ್ಸಿಗೆ ಮನನವಾಗಬೇಕಾದರೆ ನಾವು ಮತ್ತೊಂದು ಸಂಗತಿಯನ್ನ ಗಮನಿಸಬೇಕಾಗುತ್ತದೆ. ಈ ಸಂಗತಿ ಸ್ಟ್ರಿಂಡ್‌ಬರ್ಗ್‌ನಿಗಿಂತ ಹೆಚ್ಚಾಗಿ ಸ್ವೀಡಿಷ್ ಸಮಾಜಕ್ಕೆ ಸಲ್ಲುವ ಸಂಗತಿಗಳು. ಹಾಗೂ ಸ್ವೀಡಿಷ್ ಸಮಾಜದೊಟ್ಟಿಗಿನ ತೌಲನಿಕ ಅರ್ಥದಲ್ಲಿ ಭಾರತೀಯ ಸಮಾಜಕ್ಕೆ ಸಲ್ಲುವ ಸಂಗತಿ. ಈ ಶತಮಾನದ ಆರಂಭಕ್ಕಾಗಲೇ ಸ್ವೀಡನ್ನಿನ ಪ್ರತಿಷ್ಠಿತ ಸಮಾಜ, ಸಾಮಾಜಿಕ ಬದಲಾವಣೆಯ ಹಲವು ಮಜಲುಗಳನ್ನ ದಾಟಿ ಮುಂದೆ ಹೋಗಿತ್ತು : ಮದುವೆಯೆಂಬುದು ಪಾಳಿಯಗಾರಿ ವ್ಯವಸ್ಥೆ ಮಾತ್ರವಾಗಿ ಉಳಿದಿರಲಿಲ್ಲ. ಹೆಂಗಸಿಗೆ ಶಿಕ್ಷಣ ಸಮಾನವಾಗಿ ದಕ್ಕಿತ್ತು. ತನ್ನ ನಾಟಕಗಳಲ್ಲಿ ಸ್ಟ್ರಿಂಡ್‌ಬರ್ಗ್ ಚಿತ್ರಿಸುವ ವರ್ಗದಲ್ಲಿ ಹೆಂಗಸರು ಅಡಿಗೆ ಮಾಡುವುದಿಲ್ಲ, ಗಂಡಸರು ದುಡಿಮೆ ಮಾಡುವುದಿಲ್ಲ: ಇಬ್ಬರೂ ಬುದ್ಧಿವಂತ ವರ್ಗದ ಪ್ರತಿನಿಧಿಗಳೇ ಹೌದು: ಮನೆಗಳಲ್ಲಿ ನೌಕರರು, ಹೊರಗಡೆಗೆ ನೌಕರರು ಅಭ್ಯಾಸವಾಗಿದ್ದವರು. ಹಾಗೆಂದು ಸ್ಟ್ರಿಂಡ್‌ಬರ್ಗ್‌ನ ಪಾತ್ರಗಳು ಆಗರ್ಭ ಶ್ರೀಮಂತರೂ ಅಲ್ಲ: ಅವರುಗಳು ಹೆಚ್ಚಾಗಿ ಲಾಯರುಗಳು, ಡಾಕ್ಟರುಗಳು, ಕ್ಯಾಪ್ಟನ್‌ಗಳು ಇತ್ಯಾದಿ. ಹಾಗಾಗಿ ತಮಗೆ ಅಭ್ಯಾಸಗತವಾಗಿ ಬಂದ ಓದು, ಬರಹ,

ಆರಾಮ ಹಾಗೂ ಚಿಂತನೆಗಳ ಜೀವನವನ್ನ ತಮ್ಮದೇ ಭುಜಬಲದ ಮೇಲೆ ನಿಲ್ಲಿಸುವಷ್ಟು ಶಕ್ತಿ ಅವರಲ್ಲಿಲ್ಲ. ಹಾಗಾಗಿ ಅವರ ಬದುಕಿನ ರೀತಿ ಹೊರನೋಟಕ್ಕೆ ಅದರಲ್ಲೂ ಭಾರತೀಯ ಬಡತನದ ನೋಟಕ್ಕೆ ಅತ್ಯಂತ ಆಕರ್ಷಕವಾಗಿ ಕಾಣುವ, ಆದರೆ ಆಂತರಿಕವಾಗಿ ನರಕ ಸದೃಶವಾದ ತೊಳಲಾಟದಿಂದ ತುಂಬಿರುತ್ತಿತ್ತು.

ಸ್ಟ್ರಿಂಡ್‌ಬರ್ಗನ ಪಾತ್ರಗಳಿಗೆ ದಕ್ಕಿರುವ ಮತ್ತೊಂದು ಗುಣ ಬೋರ್‌ಡಮ್: ಅತೀವ ಬೇಸರ ಹಾಗೂ ನಿರಾಸಕ್ತಿ. ಇದು ಯೂರೋಪಿನ ಎಲ್ಲ ಲೇಖಕರ ಎಲ್ಲ ಪಾತ್ರಗಳ ಸಾಮಾನ್ಯ ಗುಣ. ಸಮಕಾಲೀನ ಜೀವನವನ್ನ ಆಳವಾಗಿ ಕಾಡಿರುವ ಆಧುನಿಕ ಸಮಸ್ಯೆಯಿದು. ನಮ್ಮ ಹೆಂಗಸರು ಈಗಲೂ ಕೆಲಸಮುಗಿಸಿ ಮನೆಯ ಅಂಗಳಕ್ಕೆ ಬಂದು ಕುಳಿತರೆ ಸಾಕು, ಈಗಲೂ, ಇಷ್ಟೆಲ್ಲ ಅವಾಂತರಗಳ ನಡುವೆಯೂ, ಅಲ್ಲೊಂದು ಇಲ್ಲೊಂದು ಹೂವು ಅರಳುತ್ತದೆ, ಕಾಗೆ ಕೂಗುತ್ತದೆ, ದೊಂಬರು ಕುಣಿಯುತ್ತಾರೆ, ನೆರೆಮನೆಯಾಕೆ ಅರಿಶಿನ ಕುಂಕುಮಕ್ಕೆ ಕರೆಯುತ್ತಾರೆ....ಇತ್ಯಾದಿ ಜೀವಂತಿಕೆ ಸಾಧ್ಯವಾಗುತ್ತದೆ. ಅಲ್ಲಿ ಸ್ವೀಡನ್ನಿನಲ್ಲಿ ಇಡೀ ಆರುತಿಂಗಳು ಕತ್ತಲೆ, ಇಡೀ ಆರುತಿಂಗಳು ಚಳಿ; ಕಾಗೆಯೂ ಇಲ್ಲದ, ಗೂಗೆಯೂ ಇಲ್ಲದ, ಅರಿಶಿಣ ಕುಂಕುಮದ ಮಾತೇ ಇರದ ಪರಿಸ್ಥಿತಿ. ಒಂದೊಂದು ಮನೆಯೂ ಒಂದೊಂದು ಪ್ರಂಪಚ. ಒಂದೊಂದು ಮನವೂ ಒಂದೊಂದು ದುಮ್ಮಾನ. ಸ್ಕ್ಯಾಂಡಿನೇವಿಯದ ದೇಶಗಳ ಭೌಗೋಳಿಕ ಪರಿಚಯವಿರುವವರಿಗೆ ನನ್ನ ಮಾತಿನ ಅರ್ಥವಾದೀತು.

ಮದುವೆಯೆಂಬ ಆಕಳಿಕೆ

ಸ್ಟ್ರಿಂಡ್‌ಬರ್ಗ್‌ನ ನಾಟಕಗಳಲ್ಲಿ ಹಾಗೂ ಆತನ ಖಾಸಗಿ ಬದುಕಿನಲ್ಲಿ ಮದುವೆಯೆಂಬುದು ಅವಿರತ ನೋವು ಹಾಗೂ ಅಖಂಡ ಆಕಳಿಕೆಯ ಒಂದು ಸಂಸ್ಥೆ. ಮದುವೆಯೆಂಬ ನೊಗಕ್ಕೆ ಕಟ್ಟಿದ ಗಂಡಸು ಹಾಗೂ ಹೆಂಗಸು, ಬದುಕಿನ ಸಾರ್ಥಕತೆಗಾಗಿ ನೊಗ ಹೊತ್ತ ಜೋಡಿಗಳಲ್ಲ, ಬದಲಿಗೆ ನೊಗ ಬಂಧಿಸಿ ಹಿಡಿದಿರುವ ಅರ್ಥಹೀನ ಇಜ್ಜೋಡಿಗಳು. ಸ್ಟ್ರಿಂಡ್‌ಬರ್ಗ್‌ನ ದರ್ಶನದಲ್ಲಿ ಗಂಡೆತ್ತು ಏರಿಗೆ ಎಳೆಯುತ್ತಿರುತ್ತದೆ, ಹೆಣ್ಣೆಂಬ ಎಮ್ಮೆ ನೀರಿಗೆ ಎಳೆಯುತ್ತಿರುತ್ತದೆ (ಉದಾ :ಲಿಂಕ್ ನಾಟಕ). ಕಡೆಗೊಮ್ಮೆ ಈ ವ್ಯರ್ಥ ಎಳೆದಾಟದಿಂದ ಬಳಲಿದ ಇಜ್ಜೋಡಿಗಳು ಸೋಲೊಪ್ಪಿಕೊಂಡು ಮದುವೆಯೆಂಬ ವಿಧಿಗೆ ತಲೆಬಾಗುತ್ತದೆ; ಅಂದರೆ ಪರಸ್ಪರರನ್ನ ನಿಧಾನವಾಗಿ ಕೊಲ್ಲುತ್ತ, ಬದುಕಿನ ಅಂತ್ಯಕ್ಕಾಗಿ ಕಾಯುತ್ತ, ಸಾವಿಗೆ ಹೆದರುತ್ತಲೇ, ಬದುಕಿಗೆ ಬೆನ್ನು ತಿರುವುತ್ತ, ದಿನ ದೂಡುತ್ತಾರೆ. ಮತ್ತಾವುದೇ ನಾಟಕ ಕಾರನೂ ಸ್ಟ್ರಿಂಡ್ ಬರ್ಗ್‌ನಷ್ಟು ನಿಷ್ಠುರವಾದ ರೀತಿಯಲ್ಲಿ ಗಂಡು ಹೆಣ್ಣಿನ ಸಂಬಂಧವನ್ನ ವಿಶ್ಲೇಷಿಸಿರುವುದನ್ನು ನಾಕಾಣೆ.

ಸ್ಟ್ರಿಂಡ್‌ಬರ್ಗ್‌ನ ಸಮಕಾಲೀನರು ವಾಸ್ತವವಾದಿಗಳು : ಸಮಾಜಸುಧಾರಣೆಯ ಭ್ರಮೆ ಹೊತ್ತು ನಿಂತವರು. ಕನ್ನಡದ ಶ್ರೀರಂಗ, ಕೈಲಾಸಂರನ್ನ ಪ್ರಭಾವಿಸಿದವರು. ಬಡಾಯಿ ಮಾತಿನಿಂದಲೇ ಜಗತ್ತನ್ನ ಬದಲಾಯಿಸಿ ಬಿಡುವ ಹುಂಬ ಉತ್ಸಾಹವಿದ್ದವರು. ಸ್ಟ್ರಿಂಡ್‌ಬರ್ಗ್‌ನಿಗಾದರೋ ನಾಟಕ ರಚನೆ

ಗಂಭೀರವಾದ ಕಾಯಕ. ಸಮಾಜ ಸುಧಾರಣೆಯೆಂಬ ತಲೆಹರಟೆಗೆ ಅಲ್ಲಿ ಸ್ಥಾನವಿರಲಿಲ್ಲ. ಆತ ಎರೆ ಹುಳುವಿನ ಏಕಾಗ್ರತೆಯಿಂದ ತನ್ನದೇ ವ್ಯಕ್ತಿತ್ವದ ಕತ್ತಲೆಯನ್ನ ಕೊರೆಯುತ್ತ ಮುನ್ನಡೆಯುತ್ತಾನೆ. ಕತ್ತಲೆಯನ್ನೆ ತಿನ್ನುತ್ತಾನೆ, ಕತ್ತಲೆಯನ್ನೆ ಕಕ್ಕುತ್ತಾನೆ. ಇಷ್ಟಿಷ್ಟೆ ಮುಂದುವರೆಯುತ್ತಾನೆ. ಈ ರೀತಿಯ ಹಟಮಾರಿತನದಿಂದಾಗಿಯೆ ಸ್ಟ್ರಿಂಡ್‌ಬರ್ಗ್ ಬರ್ನಾಡ್‌ಶಾ, ಇಬ್ಸನ್ ಇತ್ಯಾದಿ ವಿಶ್ವವಿಖ್ಯಾತರಿಗಿಂತ ಭಿನ್ನವಾದ ಹಾಗೂ ಹೆಚ್ಚು ಪ್ರಖರವಾದ ಕಲಾತ್ಮಕತೆಯನ್ನ ಸಾಧಿಸುವುದು. ಕನ್ನಡದಲ್ಲಿ ಸಂಸರು ಸಾಧಿಸಿದಂತೆ.

ಗಂಡು ಪಕ್ಷಪಾತಿ ಸ್ಟ್ರಿಂಡ್‌ಬರ್ಗ್

ಸ್ಟ್ರಿಂಡ್‌ಬರ್ಗ್‌ನಿಗೆ ಹೆಂಗಸರನ್ನ ಕಂಡರಾಗುತ್ತಿರಲಿಲ್ಲ: ಹಾಗೆಂದು ಹಾಪ್ಕಿನ್ಸನ ರೀತಿಯಲ್ಲಿ ಹೆಂಗಸನ್ನ ಬಿಟ್ಟು ಸನ್ಯಾಸಿಯಂತೆ ಬದುಕಲಿಕ್ಕೂ ಬರುತ್ತಿರಲಿಲ್ಲ. ಹೆಂಗಸನ್ನ ಅಪಾರವಾಗಿ ಪ್ರೀತಿಸಿದ ಗಂಡು ಪಕ್ಷಪಾತಿ ಈತ. ಹಸಿ ಹಸಿ ಆತ್ಮಕಥಾನಕಗಳು ಆತನ ನಾಟಕಗಳು. ತನ್ನ ನಾಟಕಗಳಲ್ಲಿ ಅವನು ತನ್ನದೇ ಹೆಣ್ಣು ಪಾತ್ರಗಳ ವಿರುದ್ಧ ಗೆಲ್ಲಲು ಹೆಣಗುತ್ತಾನೆ. ಆತ ನಾಟಕ ಬರೆಯುತ್ತಿರುವುದೇ ಹೆಂಗಸರನ್ನ ಜರೆಯಲಿಕ್ಕಿರಬಹುದೇ ಎಂಬ ಅನುಮಾನ ಬರುವಷ್ಟು ನಿರ್ಲಜ್ಜೆಯಿಂದ ಪಕ್ಷಪಾತಿ ಪಾತ್ರಗಳನ್ನ ಸೃಷ್ಟಿಸುತ್ತಾನೆ ಸ್ಟ್ರಿಂಡ್‌ಬರ್ಗ್. (ಉದಾ : ದಿ ಫಾದರ್). ಆದರೂ ಸ್ಟ್ರಿಂಡ್‌ಬರ್ಗ್‌ನ ನಾಟಕಗಳು ಗೆಲ್ಲುವುದು ಆತನ ಗಂಡಸರ ಚಿತ್ರಣದಿಂದಾಗಿ. ಸ್ಟ್ರಿಂಡ್‌ಬರ್ಗ್‌ನ ಗಂಡಸರು ಆತನದ್ದೇ ಹುಚ್ಚುತನದ ಪ್ರತೀಕಗಳು. ಅವರ ಒಣಗತ್ತು, ಅಳುಬರುಕತನ ಹಾಗೂ ಉನ್ಮತ್ತತೆಯನ್ನು ಅಪ್ಪಟವಾಗಿ ಚಿತ್ರಿಸುವ ಮೂಲಕ ಸ್ಟ್ರಿಂಡ್‌ಬರ್ಗ್ ಬಚಾವಾಗಿ ಬಿಡುತ್ತಾನೆ.

ಸ್ಟ್ರಿಂಡ್‌ಬರ್ಗನ ನಾಯಕರುಗಳದ್ದು ವಿಚಿತ್ರಪಾಕ. ಅವರು ಅತ್ತ ಸಂಪ್ರದಾಯಶರಣರೂ ಹೌದು, ಇತ್ತ ಆಧುನಿಕರೂ ಹೌದು. ತನ್ನ ದ್ವಂದ್ವಾತ್ಮಕ ವ್ಯಕ್ತಿತ್ವದ ದೌರ್ಬಲ್ಯದಿಂದಾಗಿ ಆತ ವಾಸ್ತವ ಪ್ರಪಂಚವನ್ನು ಎದುರಿಸಲಾರ. ಹಾಗಾಗಿ ಸ್ಟ್ರಿಂಡ್‌ಬರ್ಗ್‌ನ ನಾಯಕರುಗಳು ಚರಿತ್ರೆಯನ್ನೆ ಧಿಕ್ಕರಿಸಿ ನಿಂತಿರುವ ಡಾನ್‌ಕ್ವಿಯೋಟೆಗಳು. ಹಾಗಾಗಿ ಅವರ ಬಾಹ್ಯದ ಚಿಪ್ಪು ನೆಗ್ಗು ಬಿದ್ದ ಕವಚಗಳದ್ದಾದರೆ ಅಂತರಂಗವು ಹೆಂಗರುಳು. ತಮ್ಮ ವಿಪರೀತದ ಸೂಕ್ಷ್ಮ ಪ್ರವೃತ್ತಿಯಿಂದಾಗಿ ಇವರು ಭಾವನಾತ್ಮಕವಾಗಿ ನೋವು ಅನುಭವಿಸುತ್ತಲೇ ವೈಯಕ್ತಿಕ ತೀವ್ರತೆಯಿಂದಾಗಿ ಇತರರನ್ನ-ಅಂದರೆ ಹೆಂಗಸನ್ನ, ಅಂದರೆ ಹೆಂಡತಿಯನ್ನ, ಅಥವಾ ಇವೆರಡೂ ಆದವಳನ್ನ ಘಾಸಿಗೊಳಿಸುತ್ತಿರುತ್ತಾರೆ.

ಅವನ ಹೆಂಗಸರು ಇದಕ್ಕೆ ತದ್ವಿರುದ್ಧ. ಅವರ ಬಾಹ್ಯದ ರೂಪ ಸೌಂದರ್ಯದ್ದು: ಅಲಂಕೃತ ಹೆಣ್ಣುತನದ್ದು. ಆದರೆ ಅಂತರಂಗವು ಅಪ್ಪಟ ಪ್ರತೀಕಾರದ್ದು. ಡಾನ್ಸ್ ಅಫ್ ಡೆತ್ ನಾಟಕದ ನಾಯಕಿ ಅಲಿಸ್ ಹಾಗೂ ಆಕೆಯ ಗಂಡ ಕ್ಯಾಪ್ಟನ್ ಈ ರೀತಿಯ ಎರಡೂ ಅತಿರೇಕಕ್ಕೆ ಉತ್ತಮ ಉದಾಹರಣೆಗಳು. ಭಾರತೀಯ ಪಾರಂಪರಿಕ ಅರ್ಥದಲ್ಲಿ ಸಲ್ಲುವ ನಾರಿಮಣಿಯರಲ್ಲ ಸ್ಟ್ರಿಂಡ್‌ಬರ್ಗ್‌ನ

ಹೆಂಗಸು. ಅವರು ಆಧುನಿಕರು. ಚರಿತ್ರೆ ತಮ್ಮ ಬೆನ್ನಿಗೆ ನಿಂತಿರುವ ಅರಿವಿದೆ ಅವರಿಗೆ. ಅಪರಾಧ ಸಾಬೀತಾಗುವವರೆಗೂ ನಿರಪರಾಧಿಗಳು ತಾವು ಎಂಬ ನಿರಾಳ ಮನಸ್ಥಿತಿ ಅವರಿಗೆ ದಕ್ಕಿದೆ.

ಕುಳಿತು ಕಾಯಬಲ್ಲ ರಾಕ್ಷಸಿಯರು

ಸ್ಟ್ರಿಂಡ್‌ಬರ್ಗ್‌ನ ಹೆಂಗಸರಿಗೆ ಸಾಮಾಜಿಕ ನ್ಯಾಯದ ಹಕ್ಕುಗಳು ತಿಳಿದಿದೆ, ಆದರೆ ಸಮಾಜ ಬದಲಾವಣೆಯ ಆದರ್ಶ ಅವರಲ್ಲಿಲ್ಲ. ಚಾರಿತ್ರಿಕವಾಗಿ ತಮಗೆ ದಕ್ಕಿರುವ ಸವಲತ್ತುಗಳನ್ನ ಕುಳಿತಲ್ಲೇ ಅನುಭವಿಸುವ ಭರದಲ್ಲವರು ಕುಟುಂಬ ವ್ಯವಸ್ಥೆಯನ್ನ ಸಾಯಿಸುತ್ತಿರುತ್ತಾರೆ. ಆಕೆ ಬುದ್ಧಿವಂತೆ, ಸುಂದರಿ ಹಾಗೂ ಹಟಮಾರಿ, ಮೈಬಗ್ಗಿಸಿ ದುಡಿಯಲಾರಳು ಹಾಗೂ ತನ್ನ ಅತಿಜಾಣತನದಿಂದಾಗಿ ಆದರ್ಶಗಳನ್ನ ನಂಬಲಾರಳು : ಕುಳಿತು ಕಾಯಬಲ್ಲ ಸುಂದರ ವದನದ ರಾಕ್ಷಸಿ.

ಗಂಡಸು ಕೂಡಾ ಹಾಗೆಯೆ. ಅವನೂ ಕಾಯಕಕ್ಕೆ ಬೆನ್ನು ತಿರುಗಿಸಿದ ಬುದ್ಧಿವಂತ, ಅಹಂಕಾರಿ ಹಾಗೂ ಪ್ರಪಂಚವನ್ನೇ ತನ್ನ ತಲೆಯ ಮೇಲೆ ಹೊತ್ತ ಹರ್ಕ್ಯೂಲಿಸ್ಸನ ಸಂಬಂಧಿ. ಅವನಿಗೆ ಅವನ ಸುತ್ತಲಿನದೆಲ್ಲವೂ ಅವನ ಆಸ್ತಿ. ಅವನ ಪ್ರೀತಿ ಕೂಡಾ ಅಮೂಲ್ಯ ಆಸ್ತಿ: ಆಭರಣ. ತನ್ನ ಹೆಂಡತಿ, ತನ್ನ ಮಗು, ತನ್ನ ಮನೆ, ತನ್ನ ಮಾನ, ತನ್ನ ವರಮಾನ ಇವೆಲ್ಲವನ್ನೂ ಭುಜಕೀರ್ತಿ ಕಿರೀಟಗಳಂತೆ ಹೊತ್ತುನಿಂತ ಹುತಾತ್ಮ ಸ್ಟ್ರಿಂಡ್‌ಬರ್ಗ್‌ನ ಗಂಡಸು.

ದಿ ಫಾದರ್ ನಾಟಕದ ನಾಯಕ ಇಂಥವನು. ಆತನೂ ಕ್ಯಾಪ್ಟನ್. ಸ್ಟ್ರಿಂಡ್‌ಬರ್ಗ್‌ನ ಹೆಚ್ಚಿನ ಗಂಡಸರು ಕ್ಯಾಪ್ಟನ್‌ಗಳು. ತನ್ನದೇ ಆಂತರಿಕ ಸಂದಿಗ್ಧಗಳಲ್ಲಿ ಸಿಕ್ಕು ತೊಳಲಾಡುವ ಕ್ಯಾಪ್ಟನ್ನನಿಗೆ ಕಾಲ್ಕೆಳಗಿನ ಭೂಮಿ ಕಳಚಿ ಹೋಗಿದೆ. ಪ್ರಾಣವೂ ಹಾರಿಹೋಗಲಾರದ ಅನಿವಾರ್ಯತೆಯಿಂದಾಗಿ ಉಳಿದಿದೆ. ನೌಕರಿ ಮುಗಿದಿದೆ, ಆಸ್ತಿ ಮುಗಿದಿದೆ: ಆದರೂ ಯಕ್ಷಗಾನದ ವೇಶ ಮುಗಿದಿಲ್ಲ, ಅಬ್ಬರದ ಸಂಭಾಷಣೆ ಮರೆತಿಲ್ಲ.

ಫಾದರ್ ನಾಟಕದಲ್ಲಿ ಒಂದು ದೃಶ್ಯವಿದೆ. ಗಂಡಹೆಂಡಿರ ಜಗಳ ವಿಪರೀತಕ್ಕೆ ಹೋದಾಗ, ಸಿಟ್ಟುತಾಳಲಾರದ ಕ್ಯಾಪ್ಟನ್ ಹೆಂಡತಿಯ ಮುಖಕ್ಕೆ ಉರಿಯುತ್ತಿರುವ ದೀಪ ರಾಚುತ್ತಾನೆ. ಹೆಂಡತಿ ಕ್ಷಣ ಮಾತ್ರ ವಿಚಲಿತಳಾಗುತ್ತಾಳೆ, ಅನಂತರ ಚಿರತೆಯಂತೆ ಉಪಾಯದಿಂದ ಮುಗಿಬಿದ್ದು ಗಂಡಸಿನ ಆತ್ಮಸ್ಥೈರ್ಯವನ್ನ ನುಂಗಿ ಬಿಡುತ್ತಾಳೆ. ಕ್ಯಾಪ್ಟನ್ ವ್ಯರ್ಥ ಪ್ರಲಾಪಮಾಡುತ್ತ, ತಾನು ಸಲಹಲಾರದ ಮಗಳಿಗಾಗಿ ಹಲುಬುತ್ತ, ಮಗಳು ತನ್ನದೇ ಬೀಜದಿಂದ ಬಂದವಳು ಹೌದೆ ಎಂದು ಅನುಮಾನ ಪಡುತ್ತ ಸಾಯುತ್ತಾನೆ. ನಾಟಕದ ಕಡೆಯಲ್ಲಿ ಹೆಂಡತಿ ಹಾಗೂ ಒಬ್ಬ ಪಾದ್ರಿ ಆತನ ಅಂತ್ಯವನ್ನು ನಿರೀಕ್ಷಿಸುತ್ತ ನಿಲ್ಲುತ್ತಾರೆ.

ಸಭ್ಯಸಮಾಜದ ಮುಖಕ್ಕೆ ರಾಚುವ ಅಸಹ್ಯ ಸತ್ಯವಿದು. ಸಾಹಿತ್ಯ ಓದುವ ಮಧ್ಯಮವರ್ಗಕ್ಕೆ ಇಂತಹ ನಾಟಕ ಓದಿ ಸಂತೋಷವಾಗುವುದು ಕಷ್ಟವೇ. ಇದೇ ಕಾಲಕ್ಕೆ ನಾರ್ವೆದೇಶದ ನಾಟಕದ


Marc Chagall

ನಾಜೂಕಯ್ಯ ಎನ್ನಬಹುದಾದ ಇಬ್ಸನ್, ಇದೇ ವಸ್ತುವನ್ನಾಧರಿಸಿದ ಒಂದು ನಾಟಕ ಬರೆದ : ನಾಟಕದ ಹೆಸರು 'ಡಾಲ್ಸ್‌ಹೌಸ್' ಪ್ರಾಯಶಃ ಪ್ರಪಂಚದ ಎಂಟೋ ಹತ್ತೊ ಅತ್ಯಂತ ಚರ್ಚಿತ ನಾಟಕಗಳಲ್ಲಿ ಇಬ್ಸನ್ನನ ಡಾಲ್ಸ್‌ಹೌಸ್ ಕೂಡಾ ಒಂದು. ಡಾಲ್ಸ್‌ಹೌಸಿನಲ್ಲಿಯೂ 'ಮುಖಕ್ಕೆ ರಾಚುವ' ಒಂದು ದೃಶ್ಯವಿದೆ. ನಾಟಕದ ಕಡೆಯಲ್ಲಿ ಹೆಂಡತಿ ನೋರಾ ಗಂಡನನ್ನ ಬಿಟ್ಟು ನಡೆಯುತ್ತಾಳೆ. ಅವಳು ಮನೆಯಿಂದಾಚೆ ದಾಟಿದಾಗ ಅವಳು ರಾಚಿದ ಬಾಗಿಲಿನ ಸದ್ದು, ಇಡೀ ಪ್ರಪಂಚದಾದ್ಯಂತ ಲಕ್ಷಾಂತರ ಮನೆಗಳಲ್ಲಿ ಪ್ರತಿಧ್ವನಿಸಿತು ಎಂದು ಆಸ್ಥಾನ ವಿಮರ್ಶಕರುಗಳು ಹೊಗಳಿದ್ದಾರೆ. ಇಬ್ಸನ್ನನ ಈ ರೀತಿಯ ಹುಸಿ ಬಂಡಾಯವನ್ನ ಅಪ್ರಾಮಾಣಿಕತೆಯೆಂದೇ ತಿಳಿದಿದ್ದ ಸ್ಟ್ರಿಂಡ್‌ಬರ್ಗ್.

ಇಬ್ಸನ್ ಗಂಡಸು : ತನ್ನ ನಾಟಕಗಳ ಮೂಲಕ, ಗಂಡಸಿನ ಆಳ್ವಿಕೆಯಲ್ಲಿರುವ ಸಭ್ಯ ಮಧ್ಯಮವರ್ಗ ತಾಳಿಕೊಳ್ಳಬಲ್ಲಂತಹ ಮೃದುವಾದ ಏಟು ಕೊಟ್ಟು ವಿಶ್ವವಿಖ್ಯಾತನಾಗುವುದರಲ್ಲಿ ನಿಸ್ಸೀಮ ಇಬ್ಸನ್. ಹೆಂಗಸು ಧಿಕ್ಕರಿಸಿ ನಡೆದಂತೆಯೂ ಇರಬೇಕು, ಗಂಡಸು ನಾಟಕಮಂದಿರದಲ್ಲಿ ಕುಳಿತು, ಸುಖಿಸಲೂ ಸಾಧ್ಯವಾಗಬೇಕು, ಸಾಹಿತಿಗೆ ವಿಶ್ವವಿಖ್ಯಾತಿಯ ಪಟ್ಟವೂ ದಕ್ಕಬೇಕು. ಆ ಕಾಲದ ಹೆಚ್ಚಿನ ಸಮಾಜ ಸುಧಾರಕ ಸಾಹಿತಿಗಳ ಸರ್ಕಸ್ಸು ಈ ರೀತಿಯದು. ಕನ್ನಡದ ಅನಕೃ, ನಾಟಕದ ಕೈಲಾಸಂ, ಶ್ರೀರಂಗ ಈ ಜಾತಿಗೆ ಸೇರುವವರು. ಈಗಲೂ ಸಾಹಿತ್ಯರಚನೆಯಲ್ಲಿ ಹಾಗೂ ಕೃತಿವಿಮರ್ಶೆಯಲ್ಲಿ, ಮೃದುವಾಗಿ ಪೆಟ್ಟುಕೊಡುವ ಸರ್ಕಸ್ ಕಲಾವಿದರುಗಳಿಗೆ ಕಡಿಮೆಯೇನಿಲ್ಲ. ಸ್ಟ್ರಿಂಡ್‌ಬರ್ಗ್ ಇದ್ದದ್ದನ್ನ ಇದ್ದ ಹಾಗೆ ಹೇಳಿದ.

ದುರಂತ ನಾಯಕರು

ಆಧುನಿಕ ನಾಟಕದಲ್ಲಿ 'ದುರಂತ' ಸಾಧ್ಯವಿಲ್ಲ. ಅಂದರೆ ಪಶ್ಚಿಮದ ಅಭಿಜಾತ ಪರಂಪರೆಯಲ್ಲಿ, ಅರಿಸ್ಟಾಟಲ್ ನಮೂದಿಸಿದ ನೆಲೆಯಲ್ಲಿ ದುರಂತ ನಾಟಕ, ದುರಂತ ಪಾತ್ರ ಹಾಗೂ ದುರಂತ ಚಿತ್ರಣ ಸಾಧ್ಯವಿಲ್ಲ. ದುರಂತ ಪಾತ್ರಗಳು ಮಾನವಾತೀತರು, ಅಸಾಧಾರಣ ಎತ್ತರವಿರುವವರು ಹಾಗೂ ತಮ್ಮ ಅತೀತತೆಯಿಂದಾಗಿಯೇ ದುರಂತಕ್ಕೆ ಪಕ್ಕಾಗುವವರು. ಆಧುನಿಕ ಮಾನವ ಸಾಧಾರಣ ಮಾನವ, ಐದೂವರೆ ಅಡಿಗಳ ಎತ್ತರ ಅವನ ವಾಸ್ತವವೂ ಹೌದು, ಪರಿಸರವೂ ಹೌದು, ಪರಿಣಾಮವೂ ಹೌದು. ಹಾಗಾಗಿ ಆಧುನಿಕ ಯೂರೋಪಿಯನ್ ನಾಟಕಕಾರರಿಗೆ ಪಾತ್ರ ರಚನೆಯಲ್ಲಿ ಈ ಕುಬ್ಜತೆಯನ್ನ ಮೀರುವ ಅಪಾರ ಹಂಬಲವಿರುತ್ತದೆ. ಹಾಗೆ ಹಂಬಲಿಸುವ ಹೆಚ್ಚಿನವರ ನಾಟಕಗಳು ತಾಂತ್ರಿಕವಾಗಿ ಸೋಲುತ್ತವೆ ಕೂಡಾ. ಆದರೂ ಅವರ ಆಶಯವೇ ಆ ನಾಟಕಗಳಿಗೆ ಕಲಾತ್ಮಕ ಸತ್ವವನ್ನೂ ನೀಡುತ್ತದೆ.

ಸ್ಟ್ರಿಂಡ್‌ಬರ್ಗ್ ತನ್ನ ಗಂಡಸರಿಗೆ ದುರಂತ ನಾಯಕರ ಪಟ್ಟ ಕಟ್ಟಿಸಲು ಹೆಣಗಿ ಸೋತವನು. ಆದರೆ ಆತ ಪ್ರಾಮಾಣಿಕನಾದ್ದರಿಂದ ಆತ ಹೇಳುವ ಸತ್ಯಗಳು ಸೀಮಿತ ಸತ್ಯಗಳಾದ್ದರಿಂದ, ಹಾಗೂ ತಾನು ಹೇಳುತ್ತಿರುವ ಸತ್ಯಗಳು ಸೀಮಿತವಾದ ಹಾಗೂ ಅಸಹ್ಯವಾದ ಸತ್ಯಗಳು ಎಂದು ಆತ ಒಪ್ಪಿಕೊಳ್ಳುವುದರಿಂದ ಅವನು ಒಳ್ಳೆಯ ಕಲಾವಿದನಾಗುತ್ತಾನೆ. ಭಾರತೀಯರಾದ ನಾವು ಆತನಿಂದ

ಪಾಠ ಕಲಿಯ ಬೇಕಾದರೆ, ಸೀಮಿತ ಸತ್ಯಗಳನ್ನ ಸೀಮಿತ ಸತ್ಯಗಳು ಎಂದು ಒಪ್ಪಿಕೊಳ್ಳಬೇಕು ಹಾಗೂ ನಾವು ಭಾರತೀಯರು ಕೂಡಾ ಸೀಮಿತ ವ್ಯಕ್ತಿತ್ವಗಳು ಎಂದು ಒಪ್ಪಿಕೊಳ್ಳಬೇಕು: ಅಪಾರವಾದ ಹಾಗೂ ಅಸಾಧಾರಣವಾದ ಪರಂಪರೆಯಿರುವವರು, ಆದರೆ ಇಂದು ಅನೈತಿಕವಾದ ನಾಜೂಕಯ್ಯಗಳಾಗಿರುವವರು ನಾವು ಎನ್ನುವುದನ್ನ ಭಾರತೀಯ ಪುರುಷರು ಒಪ್ಪಿಕೊಳ್ಳಬೇಕಾಗುತ್ತದೆ.

ಭಾರತೀಯ ಮಹಿಳೆ ತನ್ನನ್ನ ಹಿಂಸಿಸುತ್ತಿರುವ ಪಾಳೆಯಗಾರಿ ಪರಿಸರದಿಂದ ಪಾರಾಗುತ್ತಲೇ, ಸಮಕಾಲೀನವೂ ಆಕರ್ಷಕವೂ ಆದ, ಆದರೆ ಪ್ರತೀಕಾರದಿಂದ ತುಂಬಿದ ಆಧುನಿಕ ಆಶಯಗಳನ್ನ ತಿರಸ್ಕರಿಸಬೇಕಾಗುತ್ತದೆ.

ದೈವೀಕತೆಯ ಹಂಬಲ

ಸ್ಟ್ರಿಂಡ್‌ಬರ್ಗ್‌ನ ಪ್ರಪಂಚದಲ್ಲಿ ದೇವರಿಲ್ಲ. ಆಧುನಿಕ ಪ್ರಪಂಚದಲ್ಲೂ ದೇವರಿಲ್ಲ. ಆದರೆ ಸ್ಟ್ರಿಂಡ್‌ಬರ್ಗ್‌ನ ನಾಟಕಗಳಲ್ಲಿ ಪಾದ್ರಿಗಳಿದ್ದಾರೆ, ಚರ್ಚುಗಳಿವೆ. ಸ್ಟ್ರಿಂಡ್‌ಬರ್ಗ್‌ನಿಗೆ ದೈವೀಕತೆಯಲ್ಲಿ ಅಪಾರವಾದ ನಂಬಿಕೆಯಿತ್ತು. ಹಾಗಾಗಿ ವಾಸ್ತವವಾದಿ ಚೌಕಟ್ಟಿನಲ್ಲಿ ಬರೆಯುತ್ತಿದ್ದಾಗಲೂ ಸ್ಟ್ರಿಂಡ್‌ಬರ್ಗ್‌ನಿಗೆ ವಾಸ್ತವವನ್ನು ಮೀರುವ ಹಂಬಲವಿತ್ತು. ಪವಾಡಹೀನವಾದ ಸಮಕಾಲೀನತೆ ಅವನ ಪರಿಸರವಾಗಿತ್ತು. ಹಾಗೆಂದೇ ಸ್ಟ್ರಿಂಡ್‌ಬರ್ಗನಿಗೆ ತನ್ನ ಪರಿಸರವನ್ನ ಕಂಡರಾಗುತ್ತಿದ್ದಿಲ್ಲ ತನ್ನದೇ ಜೀವಿತದಲ್ಲಿ, ತನ್ನ ಹಾಗೂ ಸುತ್ತಲ ವ್ಯಕ್ತಿಗಳಲ್ಲಿ ದೈವೀಕತೆಯನ್ನ ಕಾಣುವ ಹಂಬಲವಿತ್ತು ಅವನಿಗೆ. ಪರಿಸ್ಥಿತಿ ಆತನನ್ನ ಸಿನಿಕನನ್ನಾಗಿಸಿದರೆ, ಆಶಯ ಅವನನ್ನ ಹುಚ್ಚಿನಿಂದ ಉಳಿಸಿತ್ತು.

ಈ ವರೆಗೂ ಚರ್ಚಿಸಿರುವ ಆತನ ದಿ **ಫಾದರ್, ಮಿಸ್ ಜೂಲಿ, ಡಾನ್ಸ್ ಆಫ್ ಡೆತ್** ನಾಟಕಗಳು ಪವಾಡಹೀನ ಪ್ರಪಂಚಕ್ಕೆ ಹಾಗೂ ಅನಿರ್ಬಂದಿತ ಸಿನಿಕತೆಗೆ ನಿದರ್ಶನಗಳಾದರೆ, ಇವುಗಳಿಗಿಂತ ಭಿನ್ನವಾದ ಕೃತಿಗಳೂ ಸ್ಟ್ರಿಂಡ್‌ಬರ್ಗ್‌ನಿಂದ ರಚಿತವಾಗಿವೆ. **ಈಸ್ಟರ್** ಅಂತಹ ಒಂದು ನಾಟಕ. ಈಸ್ಟರ್‌ನ ಪೌರಾಣಿಕ ಕಲ್ಪನೆಯೇ, ಒಳ್ಳೆಯದು-ಕೆಟ್ಟದ್ದು, ಕತ್ತಲೆ-ಬೆಳಕು, ಚಳಿಗಾಲ ಹಾಗೂ ವಸಂತಗಳ ನಡುವಿನ ಸಂಕ್ರಮಣದ ಕಲ್ಪನೆ. ಈಸ್ಟರಿನ ಪೌರಾಣಿಕ ಹಿನ್ನೆಲೆ ಹಾಗೂ ಆಧುನಿಕ ಸ್ಟಾಕ್ ಹೋಮಿನ ವಾತಾವರಣವನ್ನ ಸ್ಟ್ರಿಂಡ್‌ಬರ್ಗ್ ಮಿಳಾಯಿಸುತ್ತಾನೆ, ಪಾಪಪ್ರಜ್ಞೆ ಹಾಗೂ ಪುಣ್ಯದ ಕಲ್ಪನೆ, ಚಳಿಗಾಲದ ಕತ್ತಲೆ ಹಾಗೂ ವಸಂತದ ಬೆಳಕು ಇವುಗಳನ್ನೂ ಮಿಳಾಯಿಸುತ್ತಾನೆ. ಆ ನಾಟಕದಲ್ಲಿ ಬರುವ ಎಲಿಯೋನಾರಾ ಎಂಬ ಹುಡುಗಿ ಸಮಕಾಲೀನ ವ್ಯಕ್ತಿಯೂ ಹೌದು, ಪುರಾಣ ಸದೃಶ್ಯಳಾದ ಪುಣ್ಯವಂತಳೂ ಹೌದು. ಜೊತೆಗೆ ಆಕೆಯ ಪುಣ್ಯಕ್ಕೂ ಕಳ್ಳತನದ ಪಾಪಕ್ಕೂ ಇರುವ ಸಂಬಂಧ, ಕ್ರಿಸ್ತನಿಗೂ ಕಳ್ಳನಿಗೂ ಇರುವ, ಒಟ್ಟಿಗೆ ಶಿಲುಬೆಗೇರಬೇಕಾದ ಅನಿವಾರ್ಯ ಸಂಬಂಧ.

ಭಾರತೀಯ ಲೇಖಕ, ಬುದ್ಧಿಜೀವಿ, ತತ್ವಜ್ಞಾನಿ ಹಾಗೂ ವೃತ್ತಿಪರ ಇವರೆಲ್ಲರೂ ಭಾರತೀಯ ಮಧ್ಯಮವರ್ಗದವರು. ಇವರೆಲ್ಲರಿಗೂ ತನ್ನ ವ್ಯಕ್ತಿಗತ ಹಿರಿಮೆಯ ಬಗ್ಗೆ, ತನ್ನ ವರ್ಗದ ಹಿರಿಮೆಯ

ಬಗ್ಗೆ ಹಾಗೂ ಬುದ್ಧಿ ಪ್ರೇರಿತವಾದ ಬ್ರಾಹ್ಮಣಿಕೆಯ ಬಗ್ಗೆ ಗರ್ವವಿದೆ. ಮಧ್ಯಮ ವರ್ಗವನ್ನ ಸೇರಿದ್ದೆ ತಡ ತಾನು ದೇವರ ಮಡಿಲನ್ನ ಸೇರಿಬಿಟ್ಟೆ ಎನ್ನುವ ನಂಬಿಕೆ ಈಗಲೂ ನಮ್ಮಲ್ಲಿ ಉಳಿದಿದೆ. ನಮ್ಮ ಸಾಹಿತ್ಯ ಕೂಡಾ ಇಂತಹ ಭ್ರಮೆಯನ್ನ ಉಳಿಸಿದೆಯೇ ಹೊರತು, ಪೊರೆ ಕಳಚಲು ಹೋಗಿಲ್ಲ. ಮಧ್ಯಮವರ್ಗದಲ್ಲಿರುವ ಕಳ್ಳರು, ಕೊಲೆಗಡುಕರು, ಲಾಭಬಡುಕರು, ವಿಕ್ಷಿಪ್ತಕಾಮಿಗಳು ನಮ್ಮ ಸಾಹಿತ್ಯದಿಂದ ದೂರ ಉಳಿದಿದ್ದಾರೆ. ನಮ್ಮ ಮದುವೆಗಳು ಕೂಡಾ ರಾಮ-ಸೀತೆಯರ ಮದುವೆಗಳೇ ಹೌದು, ಅಥವಾ ಮೈಸೂರು ಮಲ್ಲಿಗೆಯೇ ಹೌದು ಎನ್ನುವ ಭ್ರಮೆ ನಮ್ಮನ್ನ ಆವರಿಸಿದೆ. ಭ್ರಮೆಯ ಪೊರೆ ಹರಿಯಬೇಕು ಆಗ ಮಾತ್ರ ಮಧ್ಯಮವರ್ಗದ ನಡುವೆಯೂ ಸಂತರು ಜನ್ಮತಾಳಿಯಾರು, ಮಧ್ಯಮ ವರ್ಗಕ್ಕೂ ಕೂಡಾ ಸಹಜಪ್ರೀತಿ ಹಾಗೂ ದಾಂಪತ್ಯ ಸಾಧ್ಯವಾದೀತು.

ALLIANCE BUSINESS CREDIT LTD. - YOUR PARTNERS IN PROGRESS

We share in India's march towards the next century by lending our expertise in the areas of :

1. Build, Own, Operate (BOO).
2. Build, Own, Lease, Transfer (BOLT).
3. Build, Own, Operate, Transfer (BOOT).

Our acumen, drawn from a wealth of in-depth knowledge, market-research and a thorough analysis, enables us to give you a clear-cut advantage with a gamust of services like:

- International trading, full-fledged money changing.
- Joint ventures.
- Export and import financing.
- Leasing, project financing, corporate consultancy.
- Global counter-trade arrangements through DCCG, Germany.

Come, share in India's progress. Forge an alliance with us today!

Alliance Business Credit Ltd.
148/178, ATLANTA, 209, NARIMAN POINT,
MUMBAL-400-021.
TEL. : 2027509 / 2853813 / 2844720 / 6459 / 6461/ 2881756 FAX : 022-2852845.

ಕತೆಗಾರನ ಮೊದಲ ಪಾಠಗಳು

-ಎಂ. ಟಿ. ವಾಸುದೇವನ್ ನಾಯರ್

ಅನುವಾದ :ಕೆ. ಕೆ. ನಾಯರ್

ಯುವಕ ಮಿತ್ರಾ,

ನಿಮ್ಮ ಪತ್ರಗಳೆಲ್ಲವನ್ನೂ ಓದಿದೆ. ಐದನೆಯ ಪತ್ರದ ಬಳಿಕ ಇನ್ನೂ ಒಂದಾವರ್ತಿ ಓದಿದೆ. ಐದನೆಯ ಪತ್ರದಲ್ಲಿ ನೀವು ಬರೆದಿದ್ದೀರಿ :-

"ಸಾಮರ್ಥ್ಯವಿರುವವರು ಅನೇಕರಿದ್ದಾರೆ. ಸಾಮರ್ಥ್ಯವಿಲ್ಲದವರೂ ಅನೇಕರಿದ್ದಾರೆ ಹೀಗಿರುವಾಗ ಯಾರಿಂದ ಯಾರನ್ನು ಕಳೆದರೆ ಪೂರ್ಣ ಸಂಖ್ಯೆ ದೊರೆತೀತು?

"ಅನೇಕ ವೇಳೆ ನಾನು ಈ ಗಣಿತ ಕ್ರಿಯೆಯಲ್ಲಿ ನಿರತನಾಗಿರುತ್ತೇನೆ. ತುಂಬು ಆತ್ಮವಿಶ್ವಾಸವಷ್ಟೆ ಈ ಕೂಡಿಸುವ ಹಾಗೂ ಕಳೆಯುವಿಕೆಗಳಲ್ಲಿ ಉಳಿಯುತ್ತದೆ.

"ನೂತನ ಕಥಾ ಸಂಕೇತಗಳ ಕುರಿತು ಹಲವನ್ನೆಲ್ಲ ತಿಳಿದುಕೊಳ್ಳಬೇಕೆಂಬ ಆಸೆಯಿದೆ, ನನಗೆ ತಟ್ಟುವುದು ಮತ್ತೂ ಮತ್ತೂ ತಟ್ಟುವುದು; ಕೊನೆಗೆ ತೆರೆಯಲ್ಪಡುತ್ತದೆ, ಎಂದೇ ನಾನು ತಿಳಿದುಕೊಂಡಿದ್ದೇನೆ. ನಾನು ಮತ್ತೊಮ್ಮೆ ತಟ್ಟುತ್ತಿದ್ದೇನೆ. ಸಾಹಿತ್ಯದ ಗೋಪುರ ಬಾಗಿಲು ತೆರೆಯುವುದಾದರೆ ತೆರೆಯಲಿ .... "

ಮೊದಲಾಗಿ ಹೇಳುತ್ತೇನೆ ಮಿತ್ರಾ, ಸಾಹಿತ್ಯದಲ್ಲಿ ಯಾರು ಯಾರಿಗೂ ಉಪದೇಶ ಕೊಡತಕ್ಕಷ್ಟು ಬೆಳೆದಿಲ್ಲ. ನನಗಿಂತ ಕಿರಿಯನಾದ ನಿಮ್ಮೊಡನೆ ಕೆಲವನ್ನೆಲ್ಲ ಹೇಳಬಹುದಾದ ಒಂದು ಅರ್ಹತೆ ನನಗೆ ವಯಸ್ಸಿನಿಂದ ದೊರೆತ ಸವಲತ್ತಾಗಿರಬಹುದು.

ಕಥಾ ಕ್ಷೇತ್ರವನ್ನು ಪ್ರವೇಶಿಸಲು ಬಯಸುವ ನಿಮ್ಮಂತಹ ಅನೇಕ ಮಂದಿ ಯುವಕ ಮಿತ್ರರ ಪತ್ರಗಳು ನನ್ನ ಮುಂದೆ ಇವೆ. ಒಮ್ಮೆ ಈ ಎಲ್ಲಾ ಗೆಳೆಯರಿಗೂ ಅನ್ವಯಿಸುವ ಹಾಗೆ ಬರೆಯಬೇಕೆಂದು ನಾನು ಅಂದುಕೊಂಡಿದ್ದೇನೆ. ಅದು ಈಗಲೇ ಸಾಗಲಿ.

ವಿಜ್ಞಾನದಲ್ಲಿ ಒಂದು ಪದವಿಯನ್ನೂ ಸರಕಾರಿ ಕಛೇರಿಯೊಂದರಲ್ಲಿ ಒಂದು ಸಣ್ಣ ಮಟ್ಟದ ನೌಕರಿಯನ್ನೂ ಹೊಂದಿರುವ ನೀವು ನೌಕರಿಯ ಮಟ್ಟಿಗೆ ತೀರಾ ಅಸಂತೃಪ್ತಿಯಿಂದಿರುವುದಾಗಿ ಹಿಂದಿನ ಪತ್ರಗಳಲ್ಲಿ ಕಂಡು ಬಂದಿದೆ.

ನಮ್ಮ ಕಾಲ ಘಟ್ಟದಲ್ಲಿ ನಾವೆಲ್ಲರೂ ಅಸಂತೃಪ್ತರೇ. ತಾನು ಮಾಡುವ ಉದ್ಯೋಗದಲ್ಲೂ ತನ್ನ ವರಮಾನದಲ್ಲೂ ಸಮಾಜ ತನಗೆ ನೀಡುತ್ತಿರುವ ಮನ್ನಣೆಯಲ್ಲೂ ಸಂತೃಪ್ತರಾದ ಎಷ್ಟು ಮಂದಿಯನ್ನು ನಾವು ನೋಡಬಲ್ಲೆವು? ಈ ಕಾಲ ಘಟ್ಟದ ಮನುಷ್ಯನ ಸ್ಥಾಯೀಭಾವ ಒಂದೇ-ಅಸಂತೃಪ್ತಿ. ಮನುಷ್ಯನನ್ನು ಅವನ ತನ್ನ ತನದಲ್ಲೆ ಕಾಣಲು ಯತ್ನಿಸಬೇಕಾದ ಕತೆಗಾರನಾಗಲು ಆಶಿಸುವ ನೀವು ಇದನ್ನು ಗಮನಿಸಬೇಕು.

ನಿಮ್ಮ ಮೊದಲ ಪತ್ರದಲ್ಲಿ, ಬರೆದದ್ದು ಪ್ರಕಟಗೊಳ್ಳಲು ಪಡುತ್ತಿರುವ ಪಾಡುಗಳ ಬಗ್ಗೆ ವಿವರಿಸಿದ್ದೀರಿ. ಪ್ರತಿಯೊಬ್ಬ ಬರಹಗಾರನ ಸಾಹಿತ್ಯ ಜೀವನದ ಮೊದಲ ಪುಟಗಳನ್ನು ಮಗುಚಿ ನೋಡಿದರೆ ನೀವು ಬರೆದಂಥ ಬವಣೆಗಳು ಕಂಡುಬರುತ್ತವೆ. ಸಾಹಿತ್ಯದ ಮಟ್ಟಿಗೆ ಹೇಳುವುದಾದರೆ ಬಾಯಲ್ಲಿ ಬೆಳ್ಳಿ ಚಮಚ ಸಮೇತ ಹುಟ್ಟುವವರು ವಿರಳ; ತೀರಾವಿರಳ. ಅಂಥವರು ಅದೃಷ್ಟವಂತರು! ಆದರೆ ಅವರಿಗಿಲ್ಲದ ಒಂದು ಹೆಚ್ಚುಗಾರಿಕೆ ಇತರರಿಗಿದೆ. ಅವರು ಹಾದು ಬಂದ ಪರೀಕ್ಷೆಗಳೂ ಕಹಿ ಅನುಭವಗಳೂ ಅವರಿಗೆ ಬಲವೀಯುತ್ತವೆ. ಹಾಗಾಗಿ ಅದಮ್ಯವಾದ ಆತ್ಮವಿಶ್ವಾಸದಿಂದ ಅನುಗ್ರಹೀತರಾಗಿರುತ್ತಾರೆ ಅವರು. ದಳ್ಳುರಿಯನ್ನು ಹಾದು ಬಂದ ಅವರು ಸುಡು ಬಿಸಿಲಿನಲ್ಲಿ ಬಾಡಲಾರರು.

ಗೋಲ್ಡ್‌ಸ್ಮಿತ್‌ನ ಜೀವನಕತೆಯನ್ನು ಓದಿ ನೋಡಿ. ಆತ ತನ್ನ ಕವಿತೆಗಳನ್ನು ಜುಜುಬಿ ಕಾಸುಗಳಿಗೆ, ಬೀದಿಯ ಹಾಡುಗಾರ ಬಿಕ್ಷುಕರಿಗೆ ಮಾರಿ, ರಾತ್ರಿ ಅವರ ತಂಗುದಾಣಗಳ ಹತ್ತಿರ ಹೋಗಿ ಅವಿತಿರುತ್ತಿದ್ದ, ತನ್ನ ಸಾಲುಗಳನ್ನು ಅವರು ಹಾಡುವುದನ್ನು ಆಲಿಸಲಿಕ್ಕೆ! ಎರ್‌ಸ್ಕಿನ್‌ಕಾಲ್ಡ್‌ವೆಲ್ 'ಅನುಭವವೆಂದು ಕರೆದುಕೊಳ್ಳಿ' ಎಂಬ ಪುಸ್ತಕದಲ್ಲಿ ತನ್ನ ಆದ್ಯಕಾಲದ ಕಹಿ ಅನುಭವಗಳನ್ನು ನಗುವೂ ಅಳುವೂ ಬೆರೆತ ಭಾಷೆಯಲ್ಲಿ ವಿವರಿಸಿರುವನು. ಆಧುನಿಕ ಯುವ ಕಥೆಗಾರನಲ್ಲಿ ಅಗ್ರಗಣ್ಯನಾದ ಟ್ರೂಮನ್ ಕಪೋಟಿ ತನ್ನ ಹೆಸರು ಮುದ್ರಿಸಿದ್ದನ್ನು ನೋಡಲು ಹೆಣಗಾಡಿದ್ದು ದಾಖಲಿಸಿದ್ದನ್ನು ಓದಿದಾಗ ಅನ್ನಿಸಿತ್ತು : "ದೇವರೆ, ಇದು ನನ್ನದ್ದೇ ಕತೆ!"

ಮಲಯಾಳಂನಲ್ಲೂ ಸ್ಥಿತಿ ಇಂಥದ್ದೇ. ಬಷೀರ್, ಕೇಶವದೇವ್ ಮುಂತಾದವರೆಲ್ಲರ ಸತ್ವವೂ ಅವರ ಜೀವಿತಾನುಭವಗಳೇ. ಬಷೀರ್‌ರ 'ಜೀವನದ ನೆರಳ ಗುರುತುಗಳು' ಹಾಗೂ 'ಹಸಿವು' ಕೃತಿಗಳ ಮುನ್ನುಡಿಗಳನ್ನು ವೃತ್ತಿಯಾಗಿ ಸಾಹಿತ್ಯವನ್ನು ಒಪ್ಪಿಕೊಳ್ಳಲು ಹಾತೊರೆವವರೆಲ್ಲರೂ ಓದಬೇಕೆಂಬ ಅಭಿಪ್ರಾಯವಿದೆ ನನಗೆ.

ಅರ್ಥಾತ್ ನಿಮ್ಮ ಬವಣೆಗಳ ಕಥೆ ನನಗೆ ಚೆನ್ನಾಗಿ ಅರ್ಥವಾಗುತ್ತದೆ.

ಬಾಯಲ್ಲಿ ಬೆಳ್ಳಿ ಚಮಚ ಸಮೇತ ಹುಟ್ಟಿದವರೆಲ್ಲರ ಕತೆಯೂ ಇದೇನೇ. ಅಂಥವರಿಗೆ ಅದೊಂದು ಅಲಂಕಾರವೇ ಸರಿ. ಅವರಿಗೆ ಕುಟುಂಬ ಕಕ್ಷೆಯಿಂದ ಪ್ರೋತ್ಸಾಹ ಲಭಿಸೀತು. ನನ್ನ ಹಿರಿಯ ಅಣ್ಣನ ಮಗ ಬಾಬು ಒಬ್ಬ ಶಾಲಾ ವಿದ್ಯಾರ್ಥಿ. ಅವನೊಂದು ಕತೆ ಬರೆದ. ಎಲ್ಲರೂ ಓದುವವರೇ. ಮನೆಗೆ ಬರುವವರಿಗೆಲ್ಲ ನಾವದನ್ನು ಹೇಳುತ್ತೇವೆ. ಯಾಕೆಂದರೆ ಈಗ ಸ್ಥಿತಿಗತಿಗಳು ಬದಲಾಗಿವೆ. ಸಾಹಿತ್ಯ ನಮ್ಮಲ್ಲಿ ಒಬ್ಬಾತನ ವೃತ್ತಿ ಎಂಬುದಾಗಿ ಕುಟುಂಬ ಕಕ್ಷೆಯಲ್ಲಿ ಎಲ್ಲರೂ ಇಷ್ಟರಲ್ಲೆ ಅಂಗೀಕರಿಸಿರುವರು. ಮುಂಚೆ ಹೀಗಿರಲಿಲ್ಲ. ಎಳವೆಯಲ್ಲಿ ನಾನು ಬರೆಯತೊಡಗಿದಾಗ 'ಪಾಠಗಳನ್ನು ಅಭ್ಯಾಸ ಮಾಡಬೇಕಾದ ಹೊತ್ತಿನಲ್ಲಿ ಏನೇನೋ ಗೀಚಿ ಹಾಕುತ್ತ ಹೈದ ಹಾಳಾಗುತ್ತಿರುವುದರ' ಕುರಿತು ಅಮ್ಮ ಅವ್ಯಾಹತವಾಗಿ ಗೊಣಗುತ್ತಲೇ ಇದ್ದರು. ಕಾಲೇಜು ವಿದ್ಯಾರ್ಥಿಯಾಗಿ, ಮಾಸಿಕ, ಪಾಕ್ಷಿಕಗಳಲ್ಲೆಲ್ಲ ನಾನು ಏನಾದರೂ ಬರೆಯುತ್ತಿದ್ದಾಗ ತಂದೆಯವರು ಹೇಳುತ್ತಿರುವುದನ್ನು ನಾನು ಅನೇಕ ಬಾರಿ ಕೇಳಿದ್ದೆ : "ಭಕ್ತಿವಿಷಯದತ್ತ ಅವನ ಮನಸ್ಸು ಹರೀತಿಲ್ಲವಲ್ಲ. ಕಂಡ ಕಂಡ ಹೆಣ್ಣು ಗಂಡುಗಳ ಪುಂಡ ತನವೆ ತಾನೆ ಅವನು ಬರೆಯೋದು?"

ಇದು ಪ್ರೋತ್ಸಾಹ ! ಅಪ್ಪಟ ಹಳ್ಳಿ ರೈತರ ಕುಟುಂಬದಿಂದ ಇದಕ್ಕಿಂತ ಹೆಚ್ಚು ಪ್ರೋತ್ಸಾಹ ನಿರೀಕ್ಷಿಸುವುದಲ್ಲವೆ ತಪ್ಪು?

ಲೇಖನ, ಕಥೆ, ಅಲ್ಪ ಪ್ರಮಾಣದಲ್ಲಿ ಕವಿತೆ -ಎಲ್ಲವನ್ನೂ ನಿಗದಿತವಾಗಿ ಪತ್ರಿಕೆಗಳಿಗೆ ಕಳುಹಿಸುತ್ತಲೇ ಇದ್ದೆ. ಯಾವುದೂ ಪ್ರಕಟವಾಗುತ್ತಿರಲಿಲ್ಲ. ಕಳುಹಿಸಲು ಮುಕ್ಕಾಲು ಆಣೆಯ ಅಂಚೆಚೀಟಿ ಹಚ್ಚಬೇಕು. ಮುಕ್ಕಾಲು ಆಣೆ ಇಲ್ಲ. ಹಳೆಯ ಲಕೋಟೆಗಳನ್ನು ಉಲ್ಟಾ ಮಡಚಿ ಅನ್ನದಿಂದ ಅಂಟಿಸಿ ಕಾಲಿ ಲಕೋಟೆಯನ್ನು ತಯಾರಿಸಬಹುದು. ಆದರೆ, ಮುಕ್ಕಾಲಾಣೆಗೆ ಅಮ್ಮನ ಪೆಟ್ಟಿಗೆ ತಡಕಾಡಬೇಕು. ಕೀಲಿಕೈ ಇರಿಸುವ ಸ್ಥಳ ನಿತ್ಯವೂ ಬದಲಾಯಿಸುತ್ತಿರುವುದರಿಂದ ಒಬ್ಬ ಪತ್ತೆದಾರನ ಪರಿಣತಿ ಬೇಕು, ಅದನ್ನು ಪತ್ತೆ ಹಚ್ಚಲು.

ಅಸಹನೀಯವಾದುದು ಬರೆಹ ಕಳುಹಿಸಿದ ನಂತರದ ಕಾಯುವಿಕೆ. ಮನಸ್ಸಿನಲ್ಲಿ ಲೆಕ್ಕ ಹಾಕುತ್ತೇನೆ : ಕೂಡಲೆ ಪ್ರಕಟಿಸಿದರೆ ಮುಂದಿನ ಸಂಚಿಕೆಯಲ್ಲಿ. ಅದು ಅಸಂಭವ. ಆದುದರಿಂದ ಅದರ ನಂತರದ ಸಂಚಿಕೆಯಲ್ಲಿ ಬರಬಹುದು. ಆದರೂ ಮುಂದಿನ ವಾರದಿಂದ, ಪತ್ರಿಕೆ ಬರಲಿರುವ ವಾರದಂದು ಹೊತ್ತಿಗೆ ಮೊದಲೇ ಪೋಸ್ಟ್ ಆಫೀಸ್‌ಗೆ ತಲುಪಿರುತ್ತೇನೆ. ನನ್ನ ಹೆಸರಿಗೆ ಏನನ್ನಾದರೂ ಪೋಸ್ಟ್‌ಮಾಸ್ಟರ್ ಕರೆದುಕೊಡುವಾಗ ಒಂದು ಸಂತಸವಿರುತ್ತದೆ. ಅದಕ್ಕೋಸುಗ ಎಲ್ಲಾ ಉಚಿತ ಕ್ಯಾಟ್‌ಲೋಗ್ ಹಂಚಿಕೆದಾರರಿಗೂ ಬರೆದು ಕೇಳಿಕೊಳ್ಳುತ್ತಿದ್ದೆ. ಆಭರಣಗಳ ಅಂಗಡಿಯವರೂ, ಔಷಧಿಯಂಗಡಿಯವರೇ ಮುಂತಾದವರು ಎಷ್ಟೊಂದು ಉದಾರ ವರ್ತನೆಯವರು!

ನಮ್ಮ ಮನೆಗೆ ಒಂದು ವಾರಪತ್ರಿಕೆ - ಕೇರಳ ಪತ್ರಿಕೆ -ಖಾಯಂ ಬರುತ್ತದೆ. ಅದನ್ನು ರ್‍ಯಾಪರ್ ಹರಿದು ನೋಡಬಹುದು. ಆದರೂ ಮೊದಲೇ ನೇರವಾಗಿ ಅನುಕ್ರಮಣಿಕೆಯನ್ನು ನೋಡುವುದಿಲ್ಲ. ನೋಡಿದ ತತ್‌ಕ್ಷಣವೆ ನಿರೀಕ್ಷೆಗಳು ಕುಸಿದು ಬೀಳುತ್ತವೆ. ಒಂದೊಂದೇ ಪುಟಗಳನ್ನು ಮಗಚುತ್ತೇನೆ. ಕೊನೆಗೆ ಹತಾಶನಾಗಿ ಮರಳಿ ಬರುತ್ತೇನೆ :ಸತ್ತ ಮನಸ್ಸಿನಲ್ಲಿ ಮುಂದಿನವಾರ ಎಂಬ ಜೀವವನ್ನು ಬಲವಂತ ಹೇರುತ್ತ.

ನನ್ನ ಮೊದಲ ಕಥಾಸಂಕಲನದ ಹೊಸ ಆವೃತ್ತಿ ಎರಡು ವರ್ಷಗಳ ಹಿಂದೆ ಪ್ರಕಟಿಸುವಾಗ ನಾನು ಈ ಗಲಿಬಿಲಿಯನ್ನೆಲ್ಲ ಮುನ್ನುಡಿಯಾಗಿ ಬರೆದಿದ್ದೆ. ಬಹುಶಃ ನೀವು ನೋಡಿರಬಹುದು. ಆದುದರಿಂದ ವಿವರಿಸುತ್ತಾ ಇಲ್ಲ.

ಮೂರುವರ್ಷ ಅಂಚೆ ಕಛೇರಿಯ ವರಾಂಡದಲ್ಲಿ ಕಾಲಿಗೆ 'ಆಣಿ'ಯಿರುವ ಅಂಚೆ ಪೇದೆ ಕಾಲೆಳೆಯುತ್ತಾ ನಡೆದು ಬರುವುದನ್ನು ಕಾಯುತ್ತಾ ಸಂಜೆಹೊತ್ತು ನಿಂತುಕೊಂಡಿದ್ದೆ. ಕೊನೆಗೆ ಒಂದು ಲೇಖನ ಅಚ್ಚಿಸಿದ್ದು ಕಂಡೆ - '೪೭ ರಲ್ಲಿ ಒಂದು ದಿನ. ಜೀವನ ಸಾರ್ಥಕವಾಯ್ತೆಂದೇ ಅನ್ನಿಸಿತು ಅಂದು. ನನ್ನ ಅತ್ತಿಗೆಯೊಡನೆ ಮಾತ್ರ ಹೇಳಿ ಆಕೆಗೆ ಅದನ್ನು ತೋರಿಸಿದ್ದೆ. ಆಕೆ ಅಭಿನಂದಿಸಿದ್ದರು ಕೂಡ. ಆ ಬಳಿಕವೂ ಐದಾರು ತಿಂಗಳು ಕಳೆದಿತ್ತು ಮೊದಲ ಕಥೆಗೆ ಮುಕ್ತಿ ದೊರೆಯಲು.' ೪೮-ರಿಂದ ೫೩ರ ತನಕ ಅವಿರತವಾಗಿ ಈ ಕಾದಿರುವಿಕೆ ಸಂಗ್ರಾಮ ಮುಂದುವರೆದಿತ್ತು.

ಯಾರೂ ನನಗಾಗಿ ಶಿಫಾರಸ್ಸು ಹೇಳುವವರಿರಲಿಲ್ಲ. ಯಾರನ್ನೂ ಸಮೀಪಿಸಲೂ ಇಲ್ಲ. ಸಂಪಾದಕರುಗಳ ಹೆಸರು ಕೂಡ ಕುಗ್ರಾಮದಲ್ಲಿ ವಾಸಿಸುವ ನನಗೆ ಗೊತ್ತಿಲ್ಲ. ಹಾಗಾಗಿ ವೈಯುಕ್ತಿಕ ನೆಲೆಯಲ್ಲಿ ಒಂದು ಪತ್ರ ಬರೆಯುವುದೂ ಸಾಧ್ಯವಿರಲಿಲ್ಲ. ಹೆಸರಾಂತ ಸಾಹಿತಿಗಳ ಪರಿಚಯವೂ ಇರಲಿಲ್ಲ.

ಕತೆಗಳನ್ನು ಬರೆಯುತ್ತಾ ಇದ್ದು ಯಾವುದಕ್ಕಾದರೂ ಕಳುಹಿಸುತ್ತಾ ಇದ್ದೆ. ಕೆಲವು ಬರುತ್ತವೆ, ಕೆಲವು ಮಾಯವಾಗುತ್ತವೆ.

'೫೩ ರನ್ನು ಒಂದು ತಿರುವಾಗಿ ನಾನು ಸೂಚಿಸಲು ಕಾರಣವಿದೆ. 'ಜಯ ಕೇರಳಂ' ಪತ್ರಿಕೆ 'ಮಂತ್ರವಾದಿ' ಎಂಬ ಕತೆಗೆ ಮೊತ್ತಮೊದಲು ಹತ್ತು ರೂಪಾಯಿ ಗೌರವ ಧನ ಕಳಿಸಿಕೊಟ್ಟಿತ್ತು. ಕಾಲೇಜು ಹಾಸ್ಟೆಲ್‌ನ ಹೊರಗೆ ಹೋಗಿ ಒಂದು ಲೋಟ ಚಹಾ ಕುಡಿಯಲು ಉಪಾಯ ಯೋಚಿಸುತ್ತಿರುವಾಗ ಬಾಗಿಲು ತಟ್ಟಿದ್ದು ಕೇಳಿಸಿತು. ಅಂಚೆ ಪೇದೆ ಫ್ರಾನ್ಸಿಸ್. ಮನಿಯಾರ್ಡರ್! ಅದನ್ನು ಸಹಿ ಹಾಕಿ ಪಡೆದಾಗ ಸಂತೋಷದಿಂದ ನನಗೆ ಅಳಬೇಕೆನಿಸಿತು. ರೂಂಮೇಟ್ ಅಯ್ಯರ್‌ಗೆ ಆ ಭಾವದ ನೆಲೆ ಅರ್ಥವಾಗಲಿಲ್ಲ. ಶ್ರೀಮಂತ ವ್ಯಾಪಾರಿಯೊಬ್ಬನ ಮಗನಾದ ಆತನಿಗೆ ಹತ್ತುರೂಪಾಯಿ ಒಂದು ಚಿಕ್ಕ ಸಂಗತಿಯೇ. ಫೀಸ್, ಡ್ಯೂಸ್-ಎಲ್ಲವನ್ನೂ ತಿಂಗಳಲ್ಲಿ ಅರವತ್ತು

ರೂಪಾಯಿಯೊಳಗೆ ನಿಭಾಯಿಸಬೇಕಾದ ನನಗೆ ಹತ್ತು ರೂಪಾಯಿ ಒಂದು ನಿಧಿಯಾಗಿತ್ತು. ನನ್ನ ಹೆಚ್ಚಿನ ಕಥೆಗಳನ್ನು ಪ್ರಕಟಿಸಿರುವ ಪತ್ರಿಕೆ ಎಂಬುದರಿಂದಷ್ಟೇ ಅಲ್ಲ, ನನಗೆ ಮೊದಲು ಹಣ ಕೊಟ್ಟು ಮನ್ನಣೆ ನೀಡಿದ್ದಕ್ಕಾಗಿ ಕೂಡ 'ಜಯ ಕೇರಳಂ'ಗೆ ನಾನು ಎಂದೆಂದೂ ಋಣಿಯಾಗಿದ್ದೇನೆ.

ಇವನ್ನೆಲ್ಲ ಹೇಳಿದ್ದು, ಗೆಳೆಯಾ, ನನ್ನ ಆತ್ಮಕತೆ ಹೇಳಲಿಕ್ಕಾಗಿ ಅಲ್ಲ. (ನನ್ನ ಆತ್ಮಕಥೆ ನನ್ನ ಎಲ್ಲಾ ಕಥೆಗಳನ್ನು ಒಟ್ಟಾಗಿರಿಸಿದರೆ ಪೂರ್ಣವಾಗುತ್ತದೆ. ಆದುದರಿಂದ ಆ ಸಮಸ್ಯೆ ಇಲ್ಲಿ ಏಳುವುದಿಲ್ಲ) ಮೊದಮೊದಲಿನ ನೋವು, ಅಸಹಾಯಕತೆಗಳು ನಿಮ್ಮದಷ್ಟೇ ಅಲ್ಲ, ನನ್ನದೂ ಹೌದು.

ಪ್ರೋತ್ಸಾಹ ಬೇರೆಯಾರಿಂದಲಾದರೂ ಸಿಕ್ಕುತ್ತದೆ ಎಂದು ನಿರೀಕ್ಷಿಸಬೇಡಿ. ಮನೆಯಲ್ಲಿ, ವಿದ್ಯಾಲಯದಲ್ಲಿ, ಮಿತ್ರರೆಡೆಯಲ್ಲಿ -ಎಲ್ಲೆಡೆಯಲ್ಲೂ ನಿಮ್ಮ ಚಟುವಟಿಕೆ ಗಣನೆಗೆ ಬಾರದೆ ಹೋಗಬಹುದು.

'ವಿಷಾದಿಸುತ್ತಾ' ಮರಳಿಸಲ್ಪಡುವ ಕಾಗದಗಳು ಒಂದಷ್ಟು ನಿಮ್ಮ ಕೈ ಸೇರುವಷ್ಟರಲ್ಲೇ ನೀವು ಬಾಡಿ ಕರಕಾಗಿ ಬಿಡುವುದಾದರೆ ಸಾಹಿತ್ಯ ನಿಮಗೆ ಹೇಳಿಸಿದ್ದಲ್ಲ. 'ನಾನು ಮರಣ ಶಯ್ಯೆಯಲ್ಲಿ ಬಿದ್ದುಕೊಂಡಿದ್ದೇನೆ. ಸಾಯುವ ಮೊದಲು ಇದೊಮ್ಮೆ ಮುದ್ರಣಗೊಂಡದ್ದನ್ನು ನೋಡಬೇಕೆಂಬ ಅಭಿಲಾಷೆಯಿದೆ ನನಗೆ' ಎಂಬ ಪತ್ರ ಹಾಗೂ ಜತೆಗಿದ್ದ ಸಾಹಿತ್ಯವನ್ನು ಖ್ಯಾತ ಸಂಪಾದಕರೊಬ್ಬರು ನನಗೆ ತೋರಿಸಿದ್ದರು. ಅದು ಪ್ರಕಟವಾಯ್ತೆ ಎಂದು ಗೊತ್ತಿಲ್ಲ. ಚೆನ್ನಾಗಿಲ್ಲವಾದರೆ, ಒಂದು ಅಂತಿಮಾಭಿಲಾಷೆ ಎಂಬುದಕ್ಕಾಗಿ ಮಾತ್ರ ಅದನ್ನು ಪ್ರಕಟಿಸಬೇಕಿಲ್ಲ; ನ್ಯಾಯ ನಿಷ್ಠನಾದ ಯಾವ ಸಂಪಾದಕನೂ ಪ್ರಕಟಿಸಿಯಾನೆಂದು ಅನ್ನಿಸುವುದೂ ಇಲ್ಲ. ಸಹಾನುಭೂತಿಯ ಹೆಸರಿನಲ್ಲೂ ಬಲವಾದ ಶಿಫಾರಸ್ಸಿನ ಬಲದಿಂದಲೂ ಪ್ರಕಟಿಸಲ್ಪಡುವುದರಿಂದ ಅದನ್ನು ಬರೆದಾತನಿಗಾಗಲೀ ಆತನ ಸಾಹಿತ್ಯ ಜೀವನಕ್ಕಾಗಲೀ ಮಹತ್ವ ಪ್ರಾಪ್ತವಾಗಲಾರದು.

ತಟ್ಟುವುದು, ಪುನಃ ಪುನಃ ತಟ್ಟುವುದು ಎಂಬ ನಿರ್ಧಾರಕ್ಕೆ ಬಂದ ಬಗ್ಗೆ ನಿಮ್ಮನ್ನು ನಾನು ಅಭಿನಂದಿಸುತ್ತೇನೆ. ವಿಲಿಯಂ ಫಾಕ್ನಾರ್ ಹೇಳಿರುವುದು "ನೂರು ಶತಾಂಶ ಸಾಮರ್ಥ್ಯ, ನೂರು ಶತಾಂಶ ಪರಿಶ್ರಮ" ಎಂದು. ಸಾಮರ್ಥ್ಯದಲ್ಲಿ ನಂಬಿಕೆ ಹಾಗೂ ದಣಿವರಿಯದ ಪರಿಶ್ರಮಗಳಷ್ಟೇ ಬರಹಗಾರನಿಗೆ ಮೊದಲ ಹಂತದಿಂದಲೂ ಆಸರೆಗಳಾಗಿರುತ್ತವೆ. "ಯಾರೂ ನನ್ನನ್ನು ಮೇಲೆತ್ತುತ್ತಾ ಇಲ್ಲ, ಯಾರೂ ನನಗೆ ಪ್ರೋತ್ಸಾಹ ಕೊಡುತ್ತಾ ಇಲ್ಲ" ಎಂಬ ರೋದನ ಯಾರನ್ನೂ ಎಲ್ಲೂ ತಲುಪಿಸುವುದಿಲ್ಲ. ಮೊದಲನೆಯದಾಗಿ ಒಂದು ಆತ್ಮಶೋಧನೆ ಮಾಡಿಕೊಳ್ಳಿ. ಸಾಹಿತ್ಯವನ್ನು ಒಂದು ಗಂಭೀರ ಸಂಗತಿಯಾಗಿ ಪರಿಗಣಿಸಲು, ಅದರ ಅನುಗ್ರಹ ಮತ್ತು ಶಾಪವನ್ನು ಸ್ವೀಕರಿಸಲು ನೀವು ನಿರ್ಧರಿಸಿರುವಿರಾ? ಹೌದು ಎಂದೇ ಉತ್ತರವಾಗಿದ್ದಲ್ಲಿ ಅದನ್ನು ಒಂದು ಸವಾಲಿನಂತೆ ಒಪ್ಪಿಕೊಂಡು ಪ್ರವರ್ತಿಸುವುದಷ್ಟೇ ನಿಮಗೆ ಸಾಧ್ಯ. ಅವಗಣನೆ, ಸೋಲು ಹಾಗೂ ಇನ್ನಿತರ ನೂರು,

ನೂರು ಅಡೆತಡೆಗಳನ್ನು ಒದ್ದು ದೂರಮಾಡುತ್ತ ಈ ಪ್ರಯಾಣದಲ್ಲಿ ನೀವು ತಲುಪಬೇಕಾದಲ್ಲಿ ತಲುಪುವಿರಿ; ನಿಮ್ಮಲ್ಲಿ ಸಾಮರ್ಥ್ಯವಿದ್ದಲ್ಲಿ.

ನೂತನ ಕಥಾ ಸಂಕೇತಗಳ ಕುರಿತು ಸ್ಪಷ್ಟವಾದ ಸಲಹೆಗಳನ್ನು ನೀಡಲು ಯಾರಿಗೂ ಸಾಧ್ಯವಾಗದು;ಸಾಮಾನ್ಯವಾಗಿ ಕಥೆ, ಕವಿತೆ, ಕಾದಂಬರಿಗಳಿಗೆ ಸಂಬಂಧಿಸಿದ ಗ್ರಹಿಕೆಗಳೂ ಅವುಗಳ ಸಾಂಕೇತಿಕ ಮೌಲ್ಯಗಳೂ ಬದಲಾಗುತ್ತಲೇ ಇವೆ.

ನಿಮಗೆ ಸುಪರಿಚಿತವಾದ ಜೀವನ ವಲಯಗಳಿಂದ ಸಾಹಿತ್ಯ ಸೃಷ್ಟಿಸಲು ಯತ್ನಿಸಿರಿ. ಸ್ಥಳ, ಕಾಲ ಮತ್ತು ಜೀವನಗಳನ್ನು ಹತ್ತಿರದಿಂದ ಅರಿತುಕೊಳ್ಳಲು ನಿಮಗೆ ಸಾಧ್ಯವಾಗುವುದಾದರೆ ಸೃಷ್ಟಿಕಾರ್ಯ ಸುಖಕರವಾಗಿರುತ್ತದೆ. ಸುಪರಿಚಿತವಲ್ಲದ ಜೀವನವಲಯಗಳನ್ನು ಸೃಷ್ಟಿಸಲು ಸಾಧ್ಯವಿಲ್ಲವೆ? ಸಾಧ್ಯ, ಅಪಾರ ಪ್ರಭಾವಶಾಲಿಯಾಗಿರುವ ಪ್ರತಿಭೆಯ ತುಂಬು ಅನುಗ್ರಹವಿದ್ದರೆ ಮಾತ್ರ ಸಾಧ್ಯ. ಅರ್ಥಾತ್ 'ರೆಡ್ ಬಾಡ್ಜ್ ಆಫ್ ಕರೇಜ್' ಯುದ್ಧ ಕಾಣದೆಯೇ ಬರೆಯಲು ಓರ್ವ ಸ್ಟೀಫನ್ ಕ್ರಯನ್‌ನೇ ಬೇಕಾಗುತ್ತದೆ. ವಿಶ್ವ ಸಾಹಿತ್ಯದ ಪ್ರತಿಯೊಬ್ಬ ಮಹಾರಥಿಯೂ ತನ್ನದ್ದೇ ಆದ ಒಂದು ಕಿರು ಸಾಮ್ರಾಜ್ಯದ ಅಧಿಪತಿಯಾಗಿರುವುದನ್ನು ಗಮನಿಸಬಹುದು. ಫಾಕ್ನಾರ್‌ಗೆ ಮಿನ್ನಿಸಿಪ್ಪಿಯ ಆಕ್ಸ್‌ಫರ್ಡ್ ಪರಿಸರವಾಗಿದ್ದರೆ, ಕಾನ್‌ರಾಡ್‌ಗೆ ಪೊಲಿನೇಷ್ಯನ್ ದ್ವೀಪಗಳು ಆ ಸಾಮ್ರಾಜ್ಯ. ಸುಪರಿಚಿತವಾದ ಜೀವನ ಕ್ಷೇತ್ರವನ್ನು ಮಾತುಗಳ ಮೂಲಕ ನೀವು ಆವಿಷ್ಕರಿಸುವಾಗ ಜೀವಂತ ಮನುಷ್ಯರನ್ನು ಕಾಣುತ್ತೀರಿ. ನೀವು ವಿವರಿಸುವ ಸ್ಥಳದ ಒಂದೊಂದು ಗೆರೆ ಹಾಗೂ ವರ್ಣಿಸುವ ಕೋಣೆಯ ಮೂಲೆಯಲ್ಲಿ ತೊನೆದಾಡುವ ಜೇಡನ ಬಲೆ ಕೂಡ ನಿಮಗೆ ಕಾಣಿಸುತ್ತವೆ.

ಸಣ್ಣ ಕತೆಗೆ ಇಂತಿಷ್ಟು ಕಥಾವಸ್ತು, ಕಾದಂಬರಿಗೆ ಇಂತಿಷ್ಟು ಕಥಾವಸ್ತು, ಕಾದಂಬರಿಯಾಗಿದ್ದರೆ ಮುಖ್ಯ ಕಥಾಪಾತ್ರಗಳ ಆರೋಹಣ, ಅವರೋಹಣ ಕ್ರಮಗಳಲ್ಲಿ ಇಂತಿಷ್ಟು ಬೆಳವಣಿಗೆ ಎಂಬಂಥಾ ಗ್ರಹಿಕೆಗಳೆಲ್ಲ ಈಗ ಬದಲಾಗಿವೆ; ಇಲ್ಲವಾದರೆ ಬದಲಾಗಬೇಕು. ನೂತನ ಕಥೆ ಎಂಬುದೊಂದಿಲ್ಲ. ನೂತನ ಕಥೆ (ನಯೀಕಹಾನಿ) ಹಿಂದಿಯರಿಗೆ, ಕಳೆದ ಎರಡು ಮೂರು ವರ್ಷಗಳಿಂದ ಚರ್ಚಾವಸ್ತುವಾಗಿದೆ. ಮಲಯಾಳದಲ್ಲಿ ಅದು ಇನ್ನೂ ಒಂದು ಸಂಘಟಿತ ಚರ್ಚಾ ವಸ್ತು ಆಗಿಲ್ಲ, ಒಳ್ಳೆಯದು. ಕಥೆ ಯಾವತ್ತೂ ಹೊಸತೇ. ಪ್ರತಿಯೊಂದು ಕಾಲಘಟ್ಟದಲ್ಲೂ ಜೀವನ ಅಥವಾ ಮನುಷ್ಯಪ್ರಕೃತಿ, ಬದಲಾಗುವುದರೊಂದಿಗೆ ಕಲಾರೂಪಗಳೂ ಬದಲಾಗುತ್ತವೆ.

ಆಧುನಿಕ ಸಾಹಿತ್ಯದ, ಮುಖ್ಯವಾಗಿ ಕಥಾ ಸಾಹಿತ್ಯದ ಸಿರಾಕೇಂದ್ರ ಅಮೇರಿಕವೇ. ಅಲ್ಲಿ ಹತ್ತೊಂಬತ್ತನೆ ಶತಮಾನದ ಸಂಕೇತಗಳು ೧೯೨೦ರಲ್ಲಿ ಸ್ಕಾಟ್‌ಫಿಟ್ಸ್ ಜೆರಾಲ್ಡ್‌ನ ಹಾಗೂ ಸಂಗಡಿಗರ ಕೃತಿಗಳಲ್ಲಿ ಕಾಣಿಸುವುದಿಲ್ಲ. ಒಂದನೇ ಜಾಗತಿಕ ಮಹಾಯುದ್ಧದ ನಡುಕ ಬಡಿದ ಜಗತ್ತಿನ ಹೃದಯದ ನೋವು ಅವರನ್ನು ಕಾಡುತ್ತಿದ್ದುವು. ಸೆಂಟಿಮೆಂಟುಗಳು ಅವರನ್ನು ಯಾವತ್ತೂ ಬಿಟ್ಟುಬಿಡಲಿಲ್ಲ. ನಾಲ್ವತ್ತಕ್ಕೆ ತಲುಪುವಷ್ಟರಲ್ಲಿ ಹೆಮಿಂಗ್‌ವೆ ಮತ್ತು ಫಾಕ್ನಾರ್

ಅಜಯ್ಯರಾದರು. ಎರಡು ಮಹಾಯುದ್ಧಗಳು ಸಂಭವಿಸಿದ್ದ ಹಿನ್ನೆಲೆ. ಕನಸುಗಳು ಕುಸಿದು ಬಿದ್ದಿದ್ದುವು. ಯುದ್ಧದ ಬಳಿಕ ಸ್ವದೇಶವನ್ನು ತಲಪಿದ ಪೀಳಿಗೆ ಕಳೆದುಕೊಂಡ ಆತ್ಮಗಳಾಗಿ ಮಾರ್ಪಟ್ಟವು. ಮನುಷ್ಯನ ಅಸಹಾಯಕತೆ ಮತ್ತು ಮರಣ ಅವರ ಆತ್ಮಗಳಲ್ಲಿ ಅರಿವಿಲ್ಲದ ಅಸ್ವಾಸ್ಥ್ಯವನ್ನು ಹಬ್ಬಿಸಿತು. ಶೈಲಿಯೇ ಮಾರ್ಪಟ್ಟಿರುವುದು ನಮಗೆ ಕಾಣಿಸುತ್ತದೆ. ಧ್ವಂಸದ ಮಧ್ಯದಲ್ಲಿ ನಿಂತುಕೊಂಡು, ಮೃದು ಭಾವನೆಗಳನ್ನೂ ಸೆಂಟಿಮೆಂಟಲಿಸಮನ್ನೂ ದೂರ ಸರಿಸಿ ಮನುಷ್ಯನ ಅವಿನಾಶಿ ಎಂಬ ಆಶಯವನ್ನು ದೃಢೀಕರಿಸಲಿಕ್ಕಾಗಿ ಒರಟರೂ ಬಲಿಷ್ಠರೂ ಆದ ಕಥಾಪಾತ್ರಗಳನ್ನು ಸೃಷ್ಟಿಸಲು ಅವರು ಯತ್ನಿಸಿದರು. ಹೊಸ ತಲೆಮಾರಿನವರನ್ನು ನೋಡಿರಲ್ಲ. ಅವರ ವಸ್ತುಗಳು ಬದಲಾಗಿವೆ, ಸಂಕೇತಗಳು ಕ್ಲಾಸಿಕ್‌ಗಳೊಂದಿಗೆ ತುಲನೆ ಮಾಡಿದಾಗ ಬುಡಮೇಲಾಗಿರುತ್ತವೆ. ಕಾರಣ, ನಮ್ಮ ಕಾಲಘಟ್ಟದ ಜೀವನ ಮೌಲ್ಯಗಳು ಸಂಪೂರ್ಣ ಧ್ವಂಸವಾಗಿರುವುದೇ - ಹೊಸತೊಂದು ಜೀವನವನ್ನು ಸೃಷ್ಟಿಸಲು ಹಾತೊರೆಯುವ ಧ್ಯೇಯವಾದಿ ಹೋಗಿ ಸಿಲುಕುವುದು ಸಾವಿರ ಪರಾವಲಂಬನೆಗಳಿರುವ ಆಕ್ಟೋಪ್ಸ್ ಕೈಗಳಲ್ಲಿ. (ಎ ನ್ಯೂ ಲೈಫ್ -ಬರ್ನಾಡ್ ಮಲಾಮುಡ್) ಸಾಮೂಹಿಕ ಹಾಗೂ ಸದಾಚಾರಪರವಾದ ಎಲ್ಲಾ ಮೌಲ್ಯಗಳನ್ನೂ ಒದ್ದು ತುಳಿಯಲು ತಯಾರಿರುವವನಿಗೆ ಮೇಲೆ ಯಾವತ್ತೂ ಸ್ಥಳವಿರುತ್ತದೆ. (ಸಮೀಪ ಕಾಲದಲ್ಲಿ ಹೊರಬಿದ್ದ ಎಲ್ಲಾ ಮುಖ್ಯಕಾದಂಬರಿಗಳದ್ದೂ ವಸ್ತು ಇದೇನೇ. ರೂಂ ಅಟ್‌ದ ಟೋಪ್, ಸಾಟರ್‌ಡೇ ನೈಟ್ ಆ್ಯಂಡ್ ಸಂಡೇ ಮಾರ್ನಿಂಗ್, ಮೂವೀಗೋವರ್, ದಿಸ್ ಸ್ಪೋರ್ಟಿಂಗ್ ಲೈಫ್ ಮುಂತಾದ ಎಷ್ಟೊಂದು ಕೃತಿಗಳು). ಭಾಷೆ ಬದಲಾಗಿದೆ. ಮಾತುಗಳು ಕೂಡ ಬದಲಾಗಿರುತ್ತವೆ. ನಾರದ ಕಡೆಗಿರುವ ಮನುಷ್ಯನ ಪ್ರಯಾಣವನ್ನು ತಿದ್ದಲಾಗದ ವಾಸ್ತವಿಕತೆ ಎಂದು ಒಪ್ಪಿಕೊಂಡು ಒಂದು ಗುಂಪಿನ ಬರಹಗಾರರು ಸಿಟ್ಟೂ (ಏಂಗ್ರಿ ಯಂಗ್ ಮೆನ್) ಅಸಹಾಯಕತೆಯೂ (ಬೀಟ್ ಜನರೇಶನ್) ಬೆರೆತ ಧ್ವನಿಯಲ್ಲಿ ಧ್ವಂಸದ ಸಂತತಿಗಳ ಕಥೆ ಹೇಳುವಾಗ, ತಾಳತಪ್ಪಿದ ಈ ಜಗತ್ತಿನ ಕೋಲಾಹಲಗಳ ನಡುವೆ ಆಧ್ಯಾತ್ಮಿಕತೆಯ ಏಕಾಂತ ದ್ವೀಪಗಳನ್ನು (ಸ್ಪಿರಿಚ್ಚಲ್ ಐಸೋಲೇಶನ್) ಕಂಡು ಹಿಡಿಯಲು ಯತ್ನಿಸಿದ್ದಾರೆ, ಬೇರೆ ಕೆಲವರು (ಕಾರ್ಸನ್ ಮೇಕ್ ಕಳೇರ್ಸ್‌ನ ಕಥೆಗಳನ್ನೂ ಕಾದಂಬರಿಗಳನ್ನೂ ನೋಡಿ). ಭವಿಷ್ಯದ ಬಗೆಗಿನ ನಿರೀಕ್ಷೆಗಳ ಶ್ಮಶಾನಪುಷ್ಪಗಳಷ್ಟೇ ಆಧುನಿಕ ಮನುಷ್ಯನಿಗೆ ಕಾಣಿಸುತ್ತವೆ. ಭೂತಕಾಲದಲ್ಲೂ ಕೂಡ, ಮೆಲುಕಾಡತಕ್ಕ ಸವಿಯಾದದ್ದು ಯಾವುದೂ ಇಲ್ಲ. ಅವನೊಬ್ಬ ಹೇಡಿ; ಸಂಶಯಪಿಶಾಚಿ; ಅಸ್ವತಂತ್ರ. ಅವನನ್ನು ಸೃಷ್ಟಿಸಲು ಸರಳುಗಳಲ್ಲಿ ಪ್ರತಿಮೆಯ ಸರಳರೇಖೆಗಳಿಂದಲೂ ವಕ್ರರೇಖೆಗಳಿಂದಲೂ ಕೊರೆಯಿರದ ಆಕಾರ ನೀಡಿದರಷ್ಟೇ ಸಾಲದು. ಪಿಕಾಸೋನ 'ಮಿನೋಟೋರ್'ನ ಹಾಗೆ ವಿಕೃತ ಹಾಗೂ ಸಂಕೀರ್ಣ ಅವನ ರೂಪು. ಅದಕ್ಕನುಗುಣವಾದ ಬದಲಾವಣೆಗಳನ್ನು ಸಾಹಿತ್ಯರೂಪಗಳಲ್ಲೂ ನಾವು ಕಾಣುತ್ತೇವೆ. ವಸ್ತುಗಳು ಅವಕ್ಕೆ ಅತ್ಯಂತ ಅನುರೂಪವಾದ ಸಂಕೇತಗಳನ್ನು ತಾಳುತ್ತವೆ.

ನಿಮ್ಮಲ್ಲಿ ಒಂದು ಕಥೆ ಹೇಳಲಿಕ್ಕಿದ್ದರೆ, ಆ ಕಥೆ ಓದುಗನ ಹೃದಯದೊಂದಿಗೆ ಆತ್ಮ ಸಂವೇದನೆ ನಡೆಸಲು ಅತ್ಯಂತ ಸೂಕ್ತವಾದ ರೂಪದಲ್ಲಿ, ಶೈಲಿಯಲ್ಲಿ ಅದನ್ನು ಬರೆಯಿರಿ. ಆ ಕಥೆ ಜೀವಿಸಲು ಅರ್ಹವಾಗಿದ್ದಲ್ಲಿ ನಿಮ್ಮ ಮಾನಸಿಕ ಪ್ರಕ್ರಿಯೆಗಳೆಡೆಯಲ್ಲಿ ಸೂಕ್ತ ರೂಪ ತಾಳದೆ ಇರಲಾರದು.

"ಆ ದಿನವೂ ಸೂರ್ಯ ಭಗವಂತ ಉದಯಾಚಲದ ಮೇಲೆ ಪ್ರತ್ಯಕ್ಷವಾದಾಗ ಪಕ್ಷಿಗಳು ಕಳಕೂಜನಗೈದವು" ಎಂದು ನಾವು ಯಾರೂ ಬರೆಯುವುದಿಲ್ಲ. ಯಾಕೆಂದರೆ ಈ ಸೂರ್ಯ ಭಗವಂತ ಕಳೆದ ಶತಮಾನದವನು. ಕಳಕೂಜನಗೈಯುವ ಪಕ್ಷಿಗಳನ್ನೂ ಇವತ್ತು ನಾವು ಆಲಿಸುವುದಿಲ್ಲ....

ನಾನು ಇನ್ನಷ್ಟು ವಿಸ್ತರಿಸುವುದಿಲ್ಲ. ನಿಮ್ಮ ನೋವುಗಳು, ಕಷ್ಟಕಾರ್ಪಣ್ಯಗಳು, ಸೋಲುಗಳು ಭ್ರಮನಿರಸನಗಳು -ಎಲ್ಲವೂ ಬೆಲೆಬಾಳುವ ಗಳಿಕೆಗಳಾಗಿವೆ ನಿಮಗೆ. ಮನುಷ್ಯ ಎಂಬ ಸಂಕೀರ್ಣಸೃಷ್ಟಿಯ ಆಳದ ಚಲನೆಗಳನ್ನೂ ತಾಳಲಯಗಳನ್ನೂ ಕಾಣಲಿಕ್ಕೇ ಸಾಹಿತಿ ಯತ್ನಿಸುತ್ತಾನೆ. ಕತೆಗಾರ ಬರೆಯುವುದು ಮನುಷ್ಯನ ಜೀವನದ, ಒಂದು ಭಾವದ, ಒಂದು ನಿಮಿಷದ ಕಥೆಯನ್ನು.

ಪುಟ್ಟ ಹಕ್ಕಿಗೂ ಒಂದು ಮನೆ ಇದೆ !

ನಿಸರ್ಗ ಬದುಕಿನ ಪಾಠ ಕಲಿಸುತ್ತದೆ.
ಅದರಲ್ಲೊಂದನ್ನು ನಾವೂ ಆಯ್ದುಕೊಂಡಿದ್ದೇವೆ.
ಅದೇ ನಮ್ಮ

ಗೃಹ ನಿರ್ಮಾಣ ಸಾಲ ಯೋಜನೆ

ಮನೆ ಮಂದಿಗೆ ನೆಮ್ಮದಿ- ಭದ್ರತೆ ಒದಗಿಸುವ 'ಮನೆ' ಬಾಳಿನ ಪ್ರಥಮ ಆದ್ಯತೆ. ಇರಲೊಂದು ಮನೆ ಬೇಕು; ಅದು ಸ್ವಂತದ್ದೇ ಆಗಿರಬೇಕು; ಇದು ಪ್ರತಿಯೊಬ್ಬರ ಕನಸು. ನಿಮಗೂ ನಿಮ್ಮದೇ ಆದ ಒಂದು ಚಿಕ್ಕ ಚೊಕ್ಕ ಮನೆ ಬೇಕು ... ಅಲ್ಲವೇ? ಈ ಬಗ್ಗೆ ನಾವೂ ಯೋಚಿಸಿದ್ದೇವೆ. ಸದಾ ಜಾಗೃತವಾದ ಅನಂತ ಪ್ರಕೃತಿಯಂತೆ. ಅದಕ್ಕಾಗಿಯೇ ನಮ್ಮ ಈ ಗೃಹನಿರ್ಮಾಣ ಸಾಲ ಯೋಜನೆ. ಸ್ವಂತ ಮನೆ ಬೇಕೆಂಬ ನಿಮ್ಮ ಬಯಕೆಗೆ ಮೂರ್ತರೂಪ ನೀಡುವ ಸರಳ, ಸುಲಭ ವಿಧಾನ.

ಸಿಂಡಿಕೇಟ್ ಬ್ಯಾಂಕ್

ಒಂದು ಪ್ರಬಂಧ

ಬಿ. ಎಸ್. ವೆಂಕಟಲಕ್ಷ್ಮಿ

ಮಹಾಲಯ ಅಮಾವಾಸ್ಯೆ ಪ್ರತಿ ವರ್ಷ ಹತ್ತಿರವಾಗುತ್ತಿದ್ದಂತೆಯೇ ಅನಿವಾರ್ಯವಾಗಿಯೇ ನನಗೆ ನರಸಿ ನೆನಪಾಗುತ್ತಾಳೆ. ಪಿತೃಗಳಿಗೆ ಎಡೆ ಇಡುವ ಸಂದರ್ಭದಲ್ಲಿ ತಾನು ತಯಾರಿಸುತ್ತಿದ್ದ ವಡೆ ಕಜ್ಜಾಯಾನ ಕಾಗದದಲ್ಲಿ ಸುತ್ತಿಕೊಂಡು ಬಂದು ನಮ್ಮನ್ನೆಲ್ಲ ಪ್ರೀತಿಯಿಂದ ಹತ್ತಿರಕ್ಕೆ ಕರೆದು ಅವನ್ನು ಅಕ್ಕರೆಯಿಂದ ಹಂಚುತ್ತಿದ್ದ ಮನೆಯವರಿಗೆಲ್ಲ ಏಕರೀತಿಯಾಗಿ ಆತ್ಮೀಯಳಾಗಿದ್ದ ವ್ಯಕ್ತಿ. ನಾವಿದ್ದ ರಸ್ತೆಯ ತುದಿಯಲ್ಲೆ ಅವಳ ಮನೆ. ಅಮಾವಾಸ್ಯೆಯ ಮರುದಿನ ಬೆಳಗಾಗುತ್ತಿದ್ದ ಹಾಗೇ ಗೇಟಿನ ಬಳಿ ನಿಂತು ಬಗ್ಗಿ ನೋಡಿದರೆ ಸಾಕು ಬಣ್ಣ ಬಣ್ಣದ ಸೀರೆಯನ್ನು ಮೊಣಕಾಲು ಕಾಣುವಂತೆ ಉಟ್ಟು, ಸೀರೆಗೆ ಯಾವ ರೀತಿಯಲ್ಲೂ ಒಪ್ಪದಿದ್ದ ಯಾವುದೋ ಬಣ್ಣದ ದೊಗಲೆ ಕುಪ್ಪಸ ತೊಟ್ಟು ದಪ್ಪನೆಯ ಒರಟಾದ ಎಕ್ಕಡ ಮೆಟ್ಟಿ ಜಿಡ್ಡಿನ ಪೊಟ್ಟಣವನ್ನು ಹಿಡಿದು ಬರುತ್ತಿದ್ದ ನರಸಿ. ಅವಳು ತಂದು ಕೊಡುತ್ತಿದ್ದ ಈ ತಿಂಡಿ ತಿನ್ನುವಾಗ ನನಗೆ ಅದರ ರುಚಿ ಬಾಯಲ್ಲಿ ನೀರೂರಿಸುತ್ತಿತ್ತಷ್ಟೇ ಅಲ್ಲ ಅಪರೂಪದ ಥ್ರಿಲ್ ಸಿಗುತ್ತಿತ್ತು. ಶೂದ್ರ ಜಾತಿಯವಳಾದ ನರಸಿ ಬ್ರಾಹ್ಮಣರ ಮಗಳಾದ ನಾನು ಅವಳು ಮಾಡಿದ್ದ ತಿಂಡಿ ತಿಂದಾಗ ಮನಸ್ಸು ಅದ್ಯಾವುದೋ ಹೆಚ್ಚುಗಾರಿಕೆಯಿಂದ ಉಬ್ಬುತ್ತಿತ್ತು. ಸೀಮೋಲ್ಲಂಘನ ಮಾಡಿದ ಖುಷಿ. ನಿಯಮಗಳನ್ನು ಸಡಿಲಿಸಿದ ಆನಂದ. ಮಾನಸಿಕವಾಗಿ ಎಷ್ಟೋ ಇಂಚುಗಳಷ್ಟು ಎತ್ತರಕ್ಕೆ ಬೆಳೆದಂತೆ. ಹೃದಯವನ್ನು ಅಗಲವಾಗಿಸಿಕೊಂಡಂತೆ. ಮಡಿವಂತಿಕೆ ಕೊಡಹಿಕೊಂಡಂತೆ.

ಅಂಗಳಕ್ಕೆಲ್ಲ ಮುಸ್ಸಂಜೆ ಹೊಚ್ಚಿಕೊಂಡಾಗ ಬೀದಿಯಲ್ಲಿ ಆಟವಾಡುತ್ತಿದ್ದ ನನ್ನನ್ನು ಮನೆಯೊಳಗೆ ಎಳೆದುಕೊಂಡು ಹೋಗುತ್ತಿದ್ದ ಅಮ್ಮ ಕತ್ತಲಾದ ಮೇಲೂ ನಿರ್ಭಯವಾಗಿ ಓಡಾಡಲು ಬಿಡುತ್ತಿದ್ದುದು ಈ ನರಸಿಯೊಂದಿಗೆ ಮಾತ್ರ. ಮಲ್ಲೇಶ್ವರದ ಸ್ಯಾಂಕಿ ಕೆರೆಯ ಬದಿಗಿದ್ದ ಮುನೇಶ್ವರನ ಗುಡಿಗೆ ಹೋದದ್ದು ಅವಳ ಜತೆಯಲ್ಲೇ. ಕಾರ್ಪೊರೇಶನ್ ಕಂಟ್ರಾಕ್ಟ್ ಮಾಡುತ್ತಿದ್ದ ನರಸಿಯ ಮಗ ಸಕಾಲಕ್ಕೆ ಬಿಲ್‌ಗಳು ಪಾವತಿಯಾಗದೆ ನಿರ್ಗತಿಕನಾದಾಗ ಸಾಲಗಾರರಿಗೆ ಬೆದರಿ ಹೇಳದೆ ಕೇಳದೆ ತಲೆತಪ್ಪಿಸಿಕೊಂಡು ಓಡಿಹೋಗಿದ್ದ ಎಂದು ತಿಳಿದದ್ದು ಎಷ್ಟೋ ಕಾಲದ ನಂತರ. ಗುಡಿಯಲ್ಲಿ ಮುನೀಶ್ವರನನ್ನು ಮೈ ಮೇಲೆ ಬರಿಸಿಕೊಳ್ಳೋ ಹೆಂಗಸಿನ ಬಳಿಗೆ ನರಸಿ ಶಾಸ್ತ್ರ ಕೇಳೋಕೇಂತ ದುಗುಡದಿಂದ ಧಾವಿಸುತ್ತಿದ್ದಾಗಲೆಲ್ಲ ನಾನೂ ಸವಾರಿ ಹೊರಡುತ್ತಿದ್ದೆ. ಆ ಹೆಂಗಸಿದ್ದ ಜಾಗವನ್ನು ಅವಳ "ಭಕ್ತರು" ಗುಡಿಯೆಂದು ಕರೆಯುತ್ತಿದ್ದರೂ ಅದೊಂದು ಪುಟ್ಟ ಗುಡಿಸಲೇ. ದೇವರು ಹೆಣ್ಣಿನ

ಮೈ ಮೇಲೆ ಬರಲು ಪೂಜೆಯೇ ಪ್ರಶಸ್ತವಾಗಿತ್ತೇನೋ !ಗುಡಿಸಿಲಿನ ಕತ್ತಲನ್ನು ಮೆಲ್ಲಗೆ ನಿವಾರಿಸುತ್ತ ಮಂದವಾಗಿ ಅದನ್ನು ಬೆಳಗಿಸುತ್ತಿದ್ದ ಸೀಮೇಎಣ್ಣೆ ಬುಡ್ಡಿ ದೀಪ ಗೋಡೆಯ ಬದಿಯಲ್ಲಿ ನೆಟ್ಟಗೆ ನಿಲ್ಲಿಸಲಾಗಿದ್ದ ಕರಿಕಲ್ಲಿನ ಮೂರ್ತಿಯನ್ನು ನನಗೆ ಕಾಣಿಸುತ್ತಿತ್ತು. ಎಣ್ಣೆಯಿಂದ ಕಮಟು ಹಿಡಿದಿದ್ದ ವಿಗ್ರಹಕ್ಕೆ ಕೆಂಪನೆಯ ದಾಸವಾಳದ ಅಲಂಕಾರ. ದಟ್ಟ ಗುಲಾಬಿ ಬಣ್ಣದ, ಕೆಂಪು ಕಂಚಿ ಕುಂಕುಮದ ಪೂಜೆ. ಅಷ್ಟೇ ಕಮಟಾದ ಹಣತೆಯಲ್ಲಿ ನಿಶ್ಶಬ್ದವಾಗಿ ಉರಿಯುತ್ತಿದ್ದ ದೀಪ, ಅದರ ಮುಂದೆ ನೂಲಿನ ಸೀರೆಯುಟ್ಟ ತಲೆಯ ಮೇಲೆ ಸೆರಗನ್ನು ಹೊಚ್ಚಿ ಕೈಲೊಂದು ಎಲೆ ತುಂಬಿದ ಸಂಚಿಯನ್ನು ಹಿಡಿದು ಕೂತಿರುತ್ತಿದ್ದ ಹೆಂಗಸನ್ನು ಥರಥರ ನಡುಗುತ್ತಲೇ ನಾನು ದಿಟ್ಟಿಸಿದರೂ ಜತೆಯಲ್ಲಿ ನರಸಿ ಇರುವಾಗ ಆ ಹೆಂಗಸಿನಿಂದ ಯಾವ ಅಪಾಯವೂ ಇಲ್ಲ ಅನ್ನಿಸುತ್ತಿತ್ತು. ಆ ಹೆಂಗಸಿನ ಪುಟ್ಟ ಹಣೆಯ ತುಂಬಾ ನನಗೆದ್ದು ಕಾಣಿಸುತ್ತಿದ್ದುದು ದೊಡ್ಡ ಕಾಸಿನಗಲದ ಅಂಗಾರ. ಪಟ್ಟೆ ಪಟ್ಟೆಯಾಗಿ ಎಳೆದಿದ್ದ ವಿಭೂತಿ. ಕಣ್ಮುಚ್ಚಿ ಅದೇನನ್ನೋ ಮೈ ಮೈ ಪಠಿಸುತ್ತಿದ್ದ ಅವಳನ್ನು ಅಗಲವಾಗಿ ಕಣ್ಣು ಬಿಟ್ಟು ನೋಡಲೂ ನನಗೆ ದಿಗಿಲು. ಜೀವಾನ ಬಿಗಿಹಿಡಿದುಕೊಂಡಂತೆ ಕಳ್ಳಗಣ್ಣಿನಿಂದ ಅವಳತ್ತ ನೋಡಿದಾಗ ಗುಡಿಸಲಿನಲ್ಲಿ ನರಸಿಯಂತೆಯೇ ಮೂರ್‍ನಾಲ್ಕು ಹೆಂಗಸರು, ಜತೆಗೆ ಕೆಲವರು ಗಂಡಸರು ಕಾಣಿಸುತ್ತಿದ್ದರು. ಚಿಂತೆ ಕವಿದಿದ್ದ ಮುಖಗಳು. ಪದ್ಮಾಸನ ಹಾಕಿ ಕೂತಿದ್ದರೂ ಮುದುರಿ ಕೂತಂತಿದ್ದ, ಹತಾಶೆ ನೋವು ವಿನಮ್ರ ಭಾವದಿಂದ ಕೈ ಮುಗಿಯುತ್ತ, ಆಗಾಗ್ಗೆ ಅಂಗೈನ ಹೊಸೆಯುತ್ತ ಯಾವುದೋ ನಿರೀಕ್ಷೆಯಲ್ಲಿ, ಪರಿಹಾರದ ಭರವಸೆಯಲ್ಲಿ ಕೂತವರು. ಮುನೇಶ್ವರನನ್ನು ಮೇಲೇರಿಸಿಕೊಂಡ ಹೆಂಗಸು ಗುಡಿಸಿಲನ್ನೇ ನಡುಗಿಸುವಷ್ಟು ಗಟ್ಟಿ ದನಿಯಲ್ಲಿ ಹೂಂಕರಿಸಿ ಸುತ್ತಲಿದ್ದವರತ್ತ ಕಣ್ಣು ಹಾಯಿಸಿದಾಗ ನಾನು ನರಸಿಗೆ ಮತ್ತಷ್ಟು ಅತುಕೊಳ್ಳುತ್ತಿದ್ದೆ. "ದೇವರು" ನರಸಿಗೂ ಅದೇನನ್ನೋ ಹೇಳುತ್ತಿತ್ತು. ಅಪ್ಪಣೆ ಕೊಡಿಸುತ್ತಿತ್ತು. ಮಗ ಮತ್ತೆ ತನಗೆ ದಕ್ಕೇಬಿಟ್ಟನೇನೋ ಎಂಬ ಗತ್ತಿನಲ್ಲಿ ನರಸಿ ನನ್ನನ್ನೆಳೆದುಕೊಂಡು ಬಂದು ಮನೆಗೆ ತಲುಪಿಸಿ ಹೊರಡುತ್ತಿದ್ದಳು. ಹೀಗೇ ಅವಳ ಜತೆಯೇ ಹೋದದ್ದು ಮಾರಮ್ಮನ ಗುಡಿಗೆ -ನನಗೋ, ನನ್ನ ತಂಗಿ ತಮ್ಮನಿಗೋ ಧಢಾರವಾಗಿ "ಮೈ ಇಳಿದ ಮೇಲೆ ", ಬೇವಿನ ಸೊಪ್ಪುಹಾಕಿ ಕುದಿಸಿದ ನೀರಿನಲ್ಲಿ ನಮಗೆ ಸ್ನಾನ ಮಾಡಿಸಿ ಮಾರಮ್ಮಂಗೆ ಅನ್ನ ಮೊಸರು ಹೂ ಕಾಯಿ ಒಪ್ಪಿಸಲು ಅಮ್ಮ ನರಸಿಯೊಂದಿಗೆ ನಮ್ಮನ್ನು ಕಳಿಸುತ್ತಿದ್ದಾಗ.

ಈ ನರಸಿಗೆ ಬಸ್ಸಿನ ಹಂಗೇ ಇರಲಿಲ್ಲ. ಮನೆಗೆ ಮಡಿಕೆ ಕುಡಿಕೆ, ಸೊರಕೆ ಕುಡ್ಲು ಇಂಥವೆಲ್ಲ ಬೇಕಾದಾಗ ಮಲ್ಲೇಶ್ವರದಿಂದ ಸಿಟಿ ಮಾರ್ಕೆಟ್ಟಿಗೆ ಅದು ತನ್ನ ಮನೆಯ ಮುಂದಿನ ರಸ್ತೆಯಲ್ಲೇ ಇದೆ ಎನ್ನುವ ಹಾಗೆ ನಡೆದೇ ಹೊರಟು ಬಿಡುತ್ತಿದ್ದಳು. ಸಂಬಂಧಿಗಳು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ನರಳುತ್ತಿದ್ದಾಗ, "ನಿಟ್ಟೂರು ಆಸ್ಪತ್ರೆ ತಾವಕ್ಕೆ ಓಗ್ಬರ್ತೀನಿ" ಅಂತಂದು ಅಲ್ಲಿಗೂ ಪಾದ ಯಾತ್ರೆ. ಅವಳ ಜನ ಹುಚ್ಚಾಸ್ಪತ್ರೆ (ಈಗಿನ ನಿಮ್ಹಾನ್ಸ್) ಯಲ್ಲಿದ್ದರೆ ನಮ್ಮ ಅನುಮಯ್ಯ ಮೆಟ್ಟಲು ಆಸ್ಪತ್ರೆಯಾಗವ್ನೆ (ಮೆಂಟಲ್ ಹಾಸ್ಪಿಟಲ್)ಎನ್ನುತ್ತಾ ಅಲ್ಲಿಗೇ ನಿಸೂರಾಗಿ ಧಾವಿಸುತ್ತಿದ್ದಳು. ಸುಭಾಷ್ ನಗರದ ಪಕ್ಕದಲ್ಲಿ ಡ್ರಾಮಾ ಕಂಪೆನಿ ಮೊಕ್ಕಾಂ ಮಾಡ್ತಿದ್ದಾಗ ಕುರ್ಚಿಗಳ ಸಾಲುಗಳ ನಂತರ

ಥಿಯೇಟರಿನ ತೀರಾ ಹಿಂಭಾಗದಲ್ಲಿ ಇಳಿಜಾರಾಗಿ ಹಾಸಿರುತ್ತಿದ್ದ ಗ್ಗಾಪೆಯ ಮೇಲೆ ನಾನು ಅವಳ ಜತೆ ಕೂತು ರಾಜಾ ವಿಕ್ರಮ ನಾಟಕದಲ್ಲಿ ಹಂಸ ಮುತ್ತಿನ ಹಾರ ನುಂಗಿ ವಿಕ್ರಮನಿಗೆ ಪೇಚಾಟ ತಂದಿತ್ತಾಗ ಧಾರಾಕಾರವಾಗಿ ಕಣ್ಣೀರು ಸುರಿಸಿದ್ದೆ; "ಶನಿ ಮಹಾತ್ಮೆ"ಯಲ್ಲಿ ಕಾಗೆಯ ಮೇಲೆ ಕೂತ ಶನಿ ಮಹಾರಾಜನನ್ನು ಸ್ಟೇಜಿನ ಮೇಲ್ಭಾಗದಲ್ಲಿ ಆಕಾಶದಲ್ಲಿ ಸರಿದು ಹೋಗುವೋಪಾದಿಯಲ್ಲಿ ತೋರಿಸಿದಾಗ ಅಚ್ಚರಿಯಿಂದ ಚಪ್ಪಾಳೆ ತಟ್ಟಿದ್ದೆ. ನರಸಿ ಎಂದೂ ನರಳಲೇ ಇಲ್ಲ. ಜನಗಣತಿಯವರೋ ಮತ್ತ್ಯಾರೋ ಮನೆ ಬಾಗಿಲಿಗೆ ಬಂದು ಅವಳ ವಯಸ್ಸನ್ನು ಕೇಳಿದಾಗ ಅವಳು ಖಚಿತವಾಗಿ "ಅರವತ್ತು"ಎಂದಾಗ ಸರ್ಕಾರಿ ಸೇವೆಯಿಂದ ರಿಟೈರ್ ಆಗಿದ್ದ, ಎಂದೋ ಅರವತ್ತನ್ನು ದಾಟಿದ್ದ ಅವಳ ಗಂಡುಮಕ್ಕಳಿಬ್ಬರು ಮುಸಿ ಮುಸಿ ನಗುತ್ತಿದ್ದರು.

ಮೊನ್ನೆ ಮತ್ತೆ ನರಸಿಯ ಪ್ರಸ್ತಾಪ ಮಾಡಿದೆ, ನನ್ನ ಮಿಡಲ್ ಸ್ಕೂಲ್ ಕ್ಲಾಸ್ ಮೇಟ್ ಅಲಮೇಲುವಿನೊಂದಿಗೆ. ನಂಗ್ಯಾಕೋ ಆದಿನ ಮನಸ್ಸು ತೀರಾ ರೋಸಿತ್ತು. ವೈಧಿಕ ಜಾತಿಯ ಛತ್ರಿಯಡಿಯಲ್ಲಿ ನಿಲ್ಲುತ್ತಾ ತಾವು ಅದನ್ನು ಮೀರಿದವರು ಎಂದೆಷ್ಟೇ ಮೆರೆದರೂ ಪರೋಕ್ಷವಾಗಿ ಅದನ್ನು ಪೋಷಿಸುವ ಭಂಡ ಸಮಯ ಸಾಧಕರನ್ನು ಬಯಲಿಗೆಳೆಯುವ ಸಂದರ್ಭದಲ್ಲಿ ಅದೇ ಸಮಯಕ್ಕೆ ನಾನು ಅದಕ್ಕಾಗಿ ಬರೆದ ಹೃದಯವಂತ ಬ್ರಾಹ್ಮಣನೊಬ್ಬನನ್ನು ಒಳಗೊಂಡ ಒಂದು ಲೇಖನವನ್ನು ಮ್ಯಾಗ್‌ಜಿನ್ನೊಂದು ತನ್ನ ಮುಟ್ಟುಗೋಲಿನಿಂದ ಹೊಡೆದಿತ್ತು. ಬಳಕೆಗೆ ಅನರ್ಹ ಎಂಬಂತೆ ಲೇಖನ ಪಕ್ಕಕ್ಕೆ ತಳ್ಳಲ್ಪಟ್ಟಾಗ ಧಿಡೀರನೆ ನಾನೂ ಬ್ರಾಹ್ಮಣಳೆಂಬ ಪ್ರಜ್ಞೆ ನನ್ನನ್ನು ಹಿಂಸಿಸಿ, ಇಡೀ ದಿನ ಕಾಡಲು ತೊಡಗಿತ್ತು. ಜಾತಿಯ ಪಿಂಡ ನನ್ನೊಳಗೆ ಭೂತಾಕಾರವಾಗಿ ಬೆಳೆದು ಹೊಟ್ಟೆ ಉಬ್ಬರಿಸಿಕೊಳ್ಳುತ್ತಿದೆ ಎಂಬ ಭಯ ಬಡಿದುಕೊಂಡಿತ್ತು. ನನ್ನ ಕ್ರಿಯೆಗಳೆಲ್ಲ ಅನುಮಾನದ ನೋಟಕ್ಕೆ ಸಿಕ್ಕಿ ಬರವಣಿಗೆಯ ಶಕ್ತಿಯೇ ಮುಗಿದು ನನ್ನ ಕೈ ಸೋತು ಹೋದರೆ ಎಂಬ ಭೀತಿ ಮನಸ್ಸನ್ನು ಹಿಸುಕತೊಡಗಿದಾಗ ...... ಎಂದೋ ಸತ್ತ ನರಸಿಯ ಸಹವಾಸದಲ್ಲಿ ನಾನು ಪಡೆಯುತ್ತಿದ್ದ ಸಾಂತ್ವನ ನನಗೆಷ್ಟೋ ಕಾಲದ ನಂತರ ಮತ್ತೆ ಅಗತ್ಯವಾಗಿತ್ತು. ಅಯ್ಯಂಗಾರಿ ಅಲಮೇಲು ತನ್ನ ಮೆಲುದನಿಯ ಮೂಲಕವೇ ನನ್ನ ಮೈದಡವಿ ಹೇಳಿದಳು: "ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿದ ನಾವು ಈ ಪಾಪಕೂಪದಿಂದ ತಪ್ಪಿಸಿಕೊಳ್ಳುವ ಹಾಗೇ ಇಲ್ಲ ..... ".

ಪೂರ್ವಾಗ್ರಹವಿಲ್ಲದೆಯೇ ಮುಕ್ತವಾಗಿ ಮೇಲ್ಮುಖನಾಗೇ ಬೆಳೆಯಲು ಹಂಬಲಿಸುವ ನನ್ನಂಥವಳ ಮನಸ್ಸು. ನರಸಿ ಜೊತೆಯಲ್ಲಿನ ಒಡನಾಟವನ್ನು ಕುರಿತು ನಾನು ಬ್ರಾಹ್ಮಣಳ ನೆಲೆಯಿಂದ ಹೇಳುತ್ತಿಲ್ಲ. ಅದನ್ನು ಪ್ರಸ್ತಾವನೆಯಾಗಿ ತೆಗೆದುಕೊಂಡಿರುವುದಕ್ಕೆ ಕಾರಣ ತಂದೆ ಸತ್ತು ಅತಂತ್ರ ಸ್ಥಿತಿಯಲ್ಲಿದ್ದಾಗ ಹತ್ತಾರು ನರಸಿಗಳು ನಮ್ಮ ನೈತಿಕ ಬೆಂಬಲಿಗರಾಗಿ ನೆಟ್ಟಗೆ ನಿಲ್ಲಿಸಿದ್ದಕ್ಕಾಗಿ ಅವರಿಗೆ ನನ್ನ ಬಾಯಿ ಮಾತಿನ ಋಣ ತೀರಿಸುವ ಸಲುವಾಗಿ. ನನ್ನ ಮನೆಯವರು ಪರಾವಲಂಬಿಗಳಾಗುವ ಸ್ಥಿತಿಯಲ್ಲಿದ್ದಾಗ ನಾವು ಅವರಿಗೆಲ್ಲಿ ಜೋತು ಬೀಳುತ್ತೇವೋ ಎಂಬ ಭಯದಿಂದ ಅಯ್ಯಗಳು, ಐತಾಳರು ದೂರ ಉಳಿದಾಗ ನರಸಿಗಳು ಮಾತ್ರ ನಮಗಂಟಿ ನಿಂತಿದ್ದರು.

ನೆನಪಿನ ಬೊಕ್ಕಸದ ತುಂಬಾ ವೈಯಕ್ತಿಕ ಅನುಭವಗಳು. ಬಾಲ್ಯದಿಂದ ಯವ್ವನಕ್ಕೆ ಬಂದಾಗ ಮೊದಲ ಬಾರಿಗೆ ನನ್ನನ್ನು ಕಾಡಿದ್ದು ಜಾತಿ ಭೂತ. ಸುಮಾರು ಹದಿನೆಂಟು ವರ್ಷಕ್ಕೇ ಉದ್ಯೋಗ ಹಿಡಿಯ ಬೇಕಾದಾಗ ಸರ್ಕಾರಿ ಇಲಾಖೆಯೊಂದರಲ್ಲಿ ಕಂಡಂಥ, ನನ್ನನ್ನು ಇಪ್ಪತ್ತು ವರ್ಷಗಳುದ್ದಕ್ಕೂ ದಿಗಿಲುಗೊಳಿಸುತ್ತಲೇ ಹೋದ ಅದರ ಕುರೂಪದ ಅನಂತಮುಖಗಳು. ಮಂತ್ರಿಗಳು ಬದಲಾಗುತ್ತಿದ್ದಂತೆಯೇ ಸ್ಥಾನಪಲ್ಲಟಗೊಳ್ಳುತ್ತಿದ್ದ ಇಲಾಖೆಯ ಮುಖ್ಯಾಧಿಕಾರಿಗಳು. ಅವರು ಬದಲಾಗುತ್ತಿದ್ದಂತೆಯೇ ತಾವು ನಿಂತಿದ್ದ ಸಾಲಿನಿಂದ ಮತ್ತೊಂದು ಸಾಲಿಗೆ ಸದ್ದಿಲ್ಲದೆ ಸರಿದು ತಮ್ಮ ತಮ್ಮ ಜಾತಿಗಳನ್ನು ಪ್ರದರ್ಶಿಸುತ್ತಿದ್ದ ಬಾಲಬಡುಕರು. ಲಿಂಗಾಯಿತ ನಿಜಲಿಂಗಪ್ಪ, ಆತನ ಸ್ಥಾನಕ್ಕೆ ವೀರೇಂದ್ರ ಪಾಟೀಲ, ಸಮಾಧಾನದಿಂದ ಹಾಯ್‌ಗೆರೆದ ಲಿಂಗವಂತರು; ಬ್ರಾಹ್ಮಣ ಗುಂಡೂರಾಯ, ಹವ್ಯಕ ಹೆಗಡೆ, ಬೀಗಿನಿಂತ ಬ್ರಾಹ್ಮಣರು, ಅಲ್ಪಸಂಖ್ಯಾತ ಅರಸು, ತಾವೆಲ್ಲಿ ಸಲ್ಲುವವರೆಂದು ತಿಳಿಯದೆ ತ್ರಿಶಂಕುಗಳಂತೆ ಜೋತಾಡಿದ ಅತಂತ್ರಗೊಂಡ ಪ್ರಮುಖ ಜಾತಿವಂತರು. ಇಲಾಖೆಯ ಮುಖ್ಯಸ್ಥನೊಬ್ಬನ ನೇರ ಉಸ್ತುವಾರಿಯಲ್ಲಿ ಕೆಲಸ ಮಾಡಬೇಕಾಗಿದ್ದ ನನ್ನನ್ನು ಆ ಸ್ಥಾನಕ್ಕೆ ಬಂದ ಬ್ರಾಹ್ಮಣನೊಬ್ಬ ಕರೆಸಿ ಹೇಳಿದ್ದ : "ನೋಡಿ, ಈಗ ನಿಮ್ಮನ್ನು ಬೇರೆಯೂರಿಗೆ ವರ್ಗ ಮಾಡಲೇ ಬೇಕಾಗಿದೆ. ಇಲ್ಲದಿದ್ರೆ ನಾನು ಬ್ರಾಹ್ಮಣಳಿಗೆ ಸಪೋರ್ಟ್ ಮಾಡಿದೆ ಅಂತ ಮಿಕ್ಕವರು ಭಾವಿಸಿ ನನಗೂ ಸಂಚಕಾರ ಬರಬಹುದು" ಅಪ್ಪ ಸತ್ತು ಕಲವೇ ದಿನಗಳಾಗಿದ್ದವು. ಬರುತ್ತಿದ್ದ ಚಿಕ್ಕ ವೇತನದಲ್ಲಿ ನಾನು ಬೇರೆಯೂರಲ್ಲಿ ಮನೆ ಮಾಡಿದರೆ ಬೆಂಗಳೂರಿನ ಸಂಸಾರಕ್ಕೆ ಖೋತಾ ಆಗುತ್ತಿತ್ತು. ಆದರೆ ಈ ಮಾನವೀಯ ಸಮಸ್ಯೆಯನ್ನು ಮೇಲಧಿಕಾರಿಯ ಬ್ರಾಹ್ಮಣ ಮನಸ್ಸು ಅರ್ಥಮಾಡಿಕೊಳ್ಳದಾಗಿತ್ತು. ಅವನಿಗೆ ತನ್ನ ಕುರ್ಚಿ ಮಾತ್ರ ಮುಖ್ಯವಾಗಿತ್ತು.

ಮಲ್ಲೇಶ್ವರದಲ್ಲಿ ಮುನೇಶ್ವರನ, ಮಾರಮ್ಮನ ಗುಡಿಗಳ ಪರಿಚಯವಿದ್ದ ನಾನು ವಿವಾಹವಾಗಿ ದೊಡ್ಡ ಗಣೇಶನಿರುವ ಬಸವನಗುಡಿಯ ಅತ್ತೆಯ ಮನೆಗೆ ಬಂದಾಗ, ಮನೆಯಲ್ಲಾಗುತ್ತಿದ್ದ ಸ್ವರ್ಣಗೌರಿ ಮಂಗಳಗೌರಿ ವ್ರತಗಳು, ತಿಥಿ ಏಕಾದಶಿಗಳು, ಅರ್ಚನೆ ಅಷ್ಟೋತ್ತರ ಇವೆಲ್ಲ ಒಮ್ಮೆಲೇ ನನ್ನನ್ನು ಗಾಬರಿಗೊಳಿಸಿದ್ದವು. ಗಣೇಶನ ನೈವೇದ್ಯಕ್ಕಿಡಬೇಕಾದ ಅನ್ನ ಪೂರ್ತಿಯಾಗಿ ಬೆಂದಿಲ್ಲದೆ ಅದಾಗದ ಹೊರತು ಆಫೀಸಿಗೆ ಹೋಗಬೇಕಾಗಿದ್ದ ನನಗೆ ಊಟಕ್ಕೆ ಹಾಕಲು ಸಾಧ್ಯವಿಲ್ಲ ಎಂಬ ಪರಿಸ್ಥಿತಿ ಉಂಟಾದಾಗ, ಉಣ್ಣದೇ ಹೋದರೂ ಇಡೀ ದಿನ ಹೊಟೇಲಿನಲ್ಲಿ ಕಂಠಪೂರ್ತಿ ಹೊಡೆಯುತ್ತೇನೆ ಎಂಬ ಅಪವಾದ ಹೇರಲ್ಪಟ್ಟಾಗ ಹಸಿಬಿಸಿಯನ್ನು ಅರ್ಧಂಬರ್ಧ ಉಂಡು ಓಡಿಯೂ ಕಚೇರಿಯಲ್ಲಿ ವಾರ್ನಿಂಗ್, ಮೆಮೋ ಇವನ್ನು ಎದುರಿಸುತ್ತಿದ್ದೆ. ನಾನು ಹುಟ್ಟಿದ ಜಾತಿ ನನ್ನಲ್ಲಿ ಕ್ರಮೇಣ ಜಿಗುಪ್ಸೆ ತುಂಬಿಸುತ್ತಲೇ ಹೋಯಿತು. ಮನಸ್ಸು ನಿರಾಸೆಯ ಪಾಕದಲ್ಲೇ ಗಟ್ಟಿಗೊಳ್ಳುತ್ತಾ ಬಂತು. ಗಂಡನನ್ನು ಹೊರಡಿಸಿಕೊಂಡು ಅತ್ತೆ ಮನೆಯಿಂದ ಹೊರಬಂದ ನಾನು ಮತ್ತೆ ಸ್ವಚ್ಛ ಗಾಳಿಯನ್ನು ಸೇವಿಸಿದೆ.

ನಾನೀಗ ನಾನಾ ಜಾತಿಗಳು ಒಟ್ಟಿಗೇ ವಾಸಿಸುತ್ತಿರುವ, ವರ್ಷಗಳ ಇತಿಹಾಸವಿರುವ ಹಳ್ಳಿಯೊಂದಕ್ಕೆ ಅಂಟಿದಂತಿರುವ ಬಡಾವಣೆಯೊಂದರ ನಿವಾಸಿ. ಓಲಗ, ಡೋಲು ಇವಕ್ಕೆ ತಮ್ಮ ಕಿವಿಯನ್ನು

ಹೊಂದಿಸಿಕೊಂಡ, ಬಸವನಗುಡಿಯ ಜನ "ಶೂದ್ರ ವಾದ್ಯ" ವೆಂದು ಕರೆಯುವ ತಮ್ಮಟೆಯ ಸದ್ದು ಈಗ ಸದಾ ನನ್ನ ಮನೆಯ ಪಕ್ಕದಲ್ಲೇ - ಬಳಿಯಿರುವ ಗ್ರಾಮದೇವತೆ ಮುತ್ಯಾಲಮ್ಮನ ಪಲ್ಲಕ್ಕಿ, ಬಾಲಕಿಯರ ಮೈನೆರೆತ, ಗರ್ಭಿಣಿಯರ ಸೀಮಂತ ಹೆಣಗಳ ಮೆರವಣಿಗೆ - ಇವೆಲ್ಲವುಗಳ ಹಿನ್ನೆಲೆಗೂ ಇಲ್ಲಿ ತಮ್ಮಟೆಯದೇ ವಾದ್ಯ ಸಂಗೀತ. ಆದರೂ ಬ್ರಾಹ್ಮಣಿಕೆಯ ಸೀತೆಯಿಂದ ಮುಕ್ತಳಾದೆ ಎಂದು ಮುದಗೊಂಡಿದ್ದ ನನ್ನ ಮನಸ್ಸು ಬ್ರಾಹ್ಮಣಿಕೆಯಂತೆಯೇ ಕುರೂಪಗೊಂಡ ಹಿಂದೂತ್ವದ ಧಾಳಿ ಕ್ರಮೇಣ ನನ್ನ ಹೊಸ ಪರಿಸರದ ಸುತ್ತಲೂ ಕವಿದುಕೊಳ್ಳುತ್ತಿದೆಯೇನೋ ಎಂಬ ಭೀತಿಯಿಂದ ಮುದುಡಿಕೊಂಡಿದ್ದು - ಅಯೋಧ್ಯೆಯ ಗಲಭೆಯ ಸಂದರ್ಭದಲ್ಲಿ...... ಹಳ್ಳಿಯ ರಾಮದೇವರ ಗುಡಿಯ ಮುಂದೆ ಚಡ್ಡಿ ಹಾಕಿದ್ದ ಐದಾರು ಪಡ್ಡೆ ಹುಡುಗರು, ಕೇಸರಿ ಬಣ್ಣದ ಬಾವುಟ ಹಿಡಿದುಕೊಂಡು ಪುಟ್ಟ ಪ್ರದಕ್ಷಿಣೆ ಹಾಕುತ್ತಿದ್ದಾಗ; ಕಳೆದ ತಿಂಗಳು ಧಿಡೀರನೆ ಹಳ್ಳಿಯ ಸುತ್ತಮುತ್ತಲಿನ ಒಂದೆರಡು ರಸ್ತೆಗಳಲ್ಲಿನ ಲೈಟ್ ಕಂಬಗಳು, ಟೆಲಿಫೋನ್ ಕಂಬಗಳ ಆಸರೆ ಪಡೆದು ತೂಗಾಡಿದ ಕೇಸರಿ ಬಂಟಿಂಗ್ಸ್ ಕೆಳಗೆ ಢಮಢಮ ಡ್ರಂ ಬಾರಿಸುತ್ತಲಿದ್ದವರ ಹಿಂದುಗಡೆ ಬಿಳಿ ಶರ್ಟ್ ಕಾಕಿ ಚಡ್ಡಿ, ಓರೆ ಟೋಪಿ ಧರಿಸಿದವರು ಬಿಗಿ ಮುಖ ಹೊತ್ತು ರಸ್ತೆಗಳಲ್ಲಿ " ರೂಟ್ ಮಾರ್ಚ್" ಮಾಡಿದಾಗ; ಕನ್ನಡಾಭಿಮಾನಿಗಳ ಗುಂಪೊಂದು ಹಳ್ಳಿಯ ಚೌಕದಲ್ಲಿ ಆಕಾಶದೆತ್ತರಕ್ಕೆ ನೆಟ್ಟ ಸ್ಥಂಭದ ತುದಿಯಲ್ಲಿ ಹಳದಿ ಕೆಂಪು ಬಾವುಟ ಸಿಕ್ಕಿಸಿದಾಗ ಹಳ್ಳಿಯಲ್ಲಿ ತಲೆತಲೆಮಾರಿನಿಂದ ನೆಲೆಸಿರುವ ತಮಿಳರು, ತಿಗಳರು, ದರ್ಜಿಗಳು, ಸೆಟ್ಟಿಗಳು, ಮುಸಲ್ಮಾನರು, ಮಲೆಯಾಳಿಗಳು ಅದನ್ನೇ ದಿಟ್ಟಿಸಿ ನೋಡುತ್ತಾ ಓಡಾಡಿದಾಗ.

ಪ್ರಬಂಧದ ತುದಿಯಲ್ಲಿ ನನ್ನಲ್ಲಿ ಮೊಳಗುತ್ತಿರುವ ಒಂದೇ ಆಶಯ ನಿರಾಳವಾದ ನಿರ್ಮಲ ಮನಸ್ಸು ನನ್ನಲ್ಲಿ ಸದಾ ಜಾಗೃತವಾಗಿಯೇ ಉಳಿದಿರಲಿ ಎಂದು. ಏಕಾಕಿಯಾಗಿ ಸುತ್ತಲಿನ ಪರಿಸರವನ್ನು ಬದಲಿಸುವ ಅಥವಾ ಸೌಹಾರ್ದವನ್ನು ಕಾಪಾಡುವ ಶಕ್ತಿ ನನಗಿಲ್ಲದಿದ್ದರೂ ಕಡೆಯಪಕ್ಷ ಮನೆಯ ನಾಲ್ಕು ಗೋಡೆಗಳ ಮಧ್ಯೆ ಇದ್ದುಕೊಂಡು ನನಗೆ ಅತ್ಯಂತ ಆಪ್ತವಾದ ಸಾಹಿತ್ಯವನ್ನು ಓದುವಲ್ಲಿಯಾದರೂ ಹೃದಯ ವೈಶಾಲ್ಯವನ್ನು ಇಂದಿನಂತೆಯೇ ಉಳಿಸಿಕೊಳ್ಳಬೇಕೆಂಬುದು. ಹೀಗಾದಾಗ ಮಾತ್ರ ನಾನು ಪ್ರತಿಭಾಳ ಬಾಲ್ಯದ ದಿನಗಳನ್ನು ಕುರಿತು ಓದಿ ನಕ್ಕು ಹೊಟ್ಟೆ ಹುಣ್ಣಾಗಿಸಿಕೊಂಡಂತೆಯೇ ಸಿದ್ಧಲಿಂಗಯ್ಯನವರ ಚಿಕ್ಕಂದಿನ ಬದುಕನ್ನು ಓದಿ ಮರುಗುವುದು ಸಾಧ್ಯ; ಎಕ್ಕುಂಡಿಯವರ ಮಾರ್ಕ್ಸ್ - ಮಧ್ವ ಸಿದ್ಧಾಂತವನ್ನು ಓದಿಕೊಳ್ಳುವಂತೆಯೇ, ಪರಮಹಂಸರನ್ನು ಕುರಿತ ಕುವೆಂಪು ವಿಚಾರಧಾರೆಯನ್ನು ಅರಸಿಕೊಳ್ಳುವುದು ಸಾಧ್ಯ. ಅನಂತಮೂರ್ತಿಯವರ ಸಂಸ್ಕಾರ ವನ್ನು ಮೆಚ್ಚಿಕೊಂಡಂತೆಯೇ ಲಂಕೇಶರ ಅವ್ವ ನನ್ನು ಕಂಡು ನಿಬ್ಬೆರಗಾಗಿ ನಿಲ್ಲುವುದು ಸಾಧ್ಯ. ಸಾರಾ, ವೈದೇಹಿ ಇಬ್ಬರನ್ನೂ ಏಕಕಾಲಕ್ಕೆ ಹೆಮ್ಮೆಯಿಂದ ಓದಿನ ತೆಕ್ಕೆಗೆ ಬರಮಾಡಿಕೊಳ್ಳುವುದು ಸಾಧ್ಯ.

ತಿಂಗಳ ಕವಿತೆ

ವೀಚಿ

ಶಾ. ಬಾಲುರಾವ್

ಪ್ರತಿಭಾ ನಂದಕುಮಾರ್

ಅರಿವು ಬೆರೆಯುವ ಜಾಣ್ಮೆ

ಕನವರಿಕೆ ಬಾಲ್ಯ ಮುಟ್ಟಿದ್ದು ಮಜಭೂತು
ಕುಣಿತವೆಲ್ಲ ನೃತ್ಯವಾದ ಹರೆಯ.
ಮೈಯೆಲ್ಲ ಕಿವಿ, ಕಾಲು ಕಣ್ಣು
ಮನಸು ಗಂಡೂ ಹೆಣ್ಣು ಆದ ಪರಿಯ

ಋತುಮತಿ ಋತು ವಸಂತ ಸಮ್ಮುಖಿ
ತಳತಳಿಸಿ ತಳಿರ ಹೆಂಗರುಳು
ಹಸುರು ವಸನದ ಒಪ್ಪ ಓರಣ ಹೊಂಬಿಸಿಲ
ಹೂ ಮುಡಿ ಒನಪು ಒಯ್ಯಾರ ಹೆರಳು

ಅದಿರೆ ದನ ಓಡುವ ಉನ್ಮತ್ತಕಾಲ
ಕೈಗೆ ವಿಟುಕದ ಅದರ ತಾಳ ಲಯ
ತನ್ನ ಗುಂಗಿನ ತನ್ನ ಛಂದಗತಿ ಗಂಧವತಿ
ಆಕಾಶ ಭೂಮಿಯಲಿ ಹೆಜ್ಜೆ ಸ್ಫುರಣ.

ಒಲವ ಅಭಯಾರಣ್ಯದಲ್ಲು ಹೊತ್ತಿದ ಬೆಂಕಿ
ಜೀವ ಜಾತ ಬೆಂದು ತುಳುಕುವಳಲು

ಅಕ್ಕ ಅಲ್ಲಮ ಬಸವ ದೀಪ್ತಿಯಾಧಿಕ್ಯಕ್ಕೆ
ಎಷ್ಟು ಹೆಣಗಿದರು ಇದ್ದಲ್ಲೆ ಇರವು!

ಮೈಯಿ ಮಾಂಸದ ಹದ ತುಟಿ ಮೆದು
ವೆದೆಯುಬ್ಬಿ ನೊಂದು ಸುಖ ಶಂಖವೂದಿ
ತಿರುತಿರುಗಿ ನೋಡಿದರು ತೀರದಿಹ ನಡುವ
ಸೌಂದರ್ಯ ನಾರಿ
ಬಲೆ ಬೀಸದಿರು ವೈಯಾರ ವರ್ತುಲ
ವೇದಿಕೆಯೇರಿ
ಗಂಡುಗಳು ತಡೆಯಲಾರೊ !

ಸೃಷ್ಟಿಯನುಪಮ ಭಾಗ್ಯ
ಲೋಕದೆದೆ ಬೆಚ್ಚಗಾಗಿಸಿ
ಹಡೆದು ಸಲಹಿ ಸಂಗಾತಿಯಾಗಿ
ನೆರೆದ ಮೈನವಿರೆ
ಮಿಗಿಲಾದ ಮೋಹಕತೆ ಎಂದಲ್ಲಿ ನೀನೇ
ಚಿರ ಅನಂತದ ತಾಯಿ ಬೇರು ನೀನು.

ಅಖಂಡತೆಯಲ್ಲಿ ಅನಂತತೆ ಅರಸಿ
ಅನಂತತೆಯಲ್ಲಿ ಅಖಂಡ ಶಿಶುವಾದ
ಕಸುವಿನ ಪುರುಷ
ಸಶರೀರ ಸ್ವರ್ಗದಶರೀರ ಆನಂದವೇ
ಆಯಸ್ಕಾಂತದೊಲವಾಗಿ ಸುಳಿಯದಿರು
ತಡೆಯಲಾರೊ ಹೆಣ್ಣು !

ಸ್ವತಂತ್ರ ತಾನೇ ತಾನು ಹಬ್ಬಿರುವುದಾಕಾಶ
ಪರಸ್ಪರಾಕರ್ಷಣೆ ಘರ್ಷಣೆಯ ದೀಕ್ಷೆ
ಎದೆಯೇರಿ ಎದೆಯಿಳಿಸುವವಿನಾ
ಪುರುಷ ಪ್ರಕೃತಿ ಸದಾ
ಮದುಮಕ್ಕಳು.

ಮೀನ ನಡುವನು ಹಿಡಿದು ಕಲಿಸಬೇಕೇ
ಈಜು
ಆಡುವುವು ಅಲ್ಲಲ್ಲಿ ಹೂವು ದುಂಬಿ
ವ್ಯಕ್ತ ಅವ್ಯಕ್ತದಲಿ ಚೆಲುವ ಕಾರ್ಯಾಗಾರ
ಅನಿಲ ಜಲಘನ ನಿಬಿಡ ರೂಪ ನಂಬಿ

ದಂಗಾಗಿ ಭೂದೇವಿ ಇಂಬು ತುಂಬಾಗಿ
ರಂಗು ರಂಗಿನ ಜೀವ ಕೌಶಲಗಳು
ರೋಮ ರೋಮಗಳಲ್ಲಿ ಜ್ಯೋತಿ ಕಣ್ಣನು
ತೆರೆದೊ
ಅರಿವು ಬೆರೆಯುವ ಜಾಣ್ಮೆ
ಪ್ರೇಮ ಗತಿಗೆ.

ಕವಿತೆ

ಅಂತರಂಗದ ಹಾಡು
ಕವಿತೆ
ಧ್ಯಾನ
ಬಾಳ ಖೇಚರಕೆತ್ತಿ ಪುಷ್ಪಕಾಸನದಲ್ಲಿ
ಕೂರಿಸಿ
ಒಳಗುಹೆಗೆ ಧುಮುಕಿ
ಪ್ರಕೃತಿಯಾಳ ನಿರಾಳ ಮೈತೊಳೆದು
ಹುಟ್ಟು ಸಾವಿನ ಗಾಣದಲಿ ನುರಿವ ಬೀಜ

ಎಣ್ಣೆ ಜ್ಯೋತಿಗೆ
ಹಿಂಡಿ ಗಿಡದ ಪಾತಿಗೆ
ಕಣ್ಮುಂದೆಯೇ
ದಿನದ ಅಮ್ಮನ ಕಿರುಚೋಲಿಯಲಿ
ಮುದ್ದು ರವಿಯವತಾರ !

ಈ ಅಯಾಚಿತ ಬದುಕ
ಸೆರೆ ವಿಮೋಚನೆಗಾಗಿ
ಹಿಮಾಲಯ ನೆತ್ತಿಯಲಿ ಕೂತ
ಮಾನವತೆ

ಸಾಗರದ ವಿಸ್ತಾರ
ಬಾನಿನ ಅಪಾರ
ಎತ್ತಲೂ ಸುತ್ತಲೂ
ಇರುಳ ತಲೆ ಬಾಗಿಲಿನ ಅಗುಳಿ ಬಿಚ್ಚಿ
ನಗುವ
ಜಗದ ಗೋಲದ ಮೇಲೆ ಮಿಗುವ ಅಲುಗುವ
ಚಂದ್ರ
ಜೀವ ಸುತ್ತಳತೆ ಸುತ್ತಿ ಬಂದರು ಕೂಡ
ಮನದ ಆಳಕ್ಕಿನ್ನು ಇಳಿಯಬೇಕು

ವೀಚಿ

ಅಕರಾಳ-ವಿಕರಾಳ

(ಸಂಸ್ಕೃತದ ಸುಭಾಷಿತ)

ಅಜಾಗಲಸ್ತ ಸ್ತನ ಉಷ್ಟ್ರಪೃಷ್ಠಂ
ನಾನಾಂತರೇ ರೋಮ ಅಥ ಅಂಡಯುಗ್ಮಂ
ವೃಥಾ ಸೃಜನ ಸಾಯಣ ಮಾಯಸೋಚ
ಪೂಜಾಂ ನ ಲೇಭೇ ಭುವಿ ಪದ್ಮಸಂಭ.

ಅಕರಾಳ-ವಿಕರಾಳಗಳು

ಸಂಸ್ಕೃತದ ಸುಭಾಷಿತ ವೊಂದರ ವಿಸ್ತೃತ ರೂಪ.

ಬ್ರಹ್ಮ ಸೃಷ್ಟಿಯಲಿ
ನಮಗಿಷ್ಟವಾಗುವ
ಹೂ ಹೆಣ್ಣು, ಚಂದ್ರತಾರೆಯರಷ್ಟೇ ಅಲ್ಲ
ಹಾಡು ಹಗಲೇ ದಿಗಿಲು ಹುಟ್ಟಿಸುವ
ಅಕರಾಳ, ವಿಕರಾಳಗಳು ಸಹ
ನೂರಾರು :
ಆಡ ಗಂಟಲಿನಂತೆ ಜೋತು ಬಿದ್ದ ಮಾಲೆ
ಯಾವ ಪುರುಷಾರ್ಥಕ್ಕೆಂದು ತಿಳಿಯದ
ಒಂಟೆಯ ಡುಬ್ಬ
ಕೂದಲ ಕಾಡೋ ಎಂಬಂಥ
ಪೊಟರೆ ಮೂಗು
ಗಂಟೆ ನಾಲಗೆಯಂತೆ ಅತ್ತಿತ್ತ ನೇತಾಡುವ
ಮುದಿತರಡು
ಕಂತೆ ಕಂತೆ ನಿರರ್ಥಕ ಬರೆಹಗಳ
ಈ ನಾಯಣ್ಣ, ಮಾಯಣ್ಣಗಳು.

ಪ್ರೇಮ ಕಲಿಸಿದ ಪಾಠ

ಕೈ ಕೈ
ಮೈ ಮೈ
ಮೈ ಮೇಲೆ ಕೈ
ಕೈ ತುಂಬ ಮೈ
ಇಮ್ಮೈ ಒಮ್ಮೈ

ಕತ್ತಲ ಕೋಣೆಯಲ್ಲಿ
ಬೆತ್ತಲ ಬದುಕು
-ದಿಟ್ಟ ರಾತ್ರಿ
ಬೆಳಗಾಗ ಕಣ್ಣು ಬಿಟ್ಟಾಕ್ಷಣ
ನೀನು ಸೀರೆ, ನಾನು ಪಂಚೆ
ಎಳೆದು ಕೊಳ್ಳುವ
-ಹೇಡಿ ಹಗಲು.

ಶಾ. ಬಾಲುರಾವ್

ಎಲ್ಲ ಮುಗಿದಿದ್ದರೂ, ಇನ್ನೂ.....

ಉತ್ತಿ ಬಿತ್ತಿ ಬೆಳೆದು ಕಟಾವಾಗಿ
ಎಲ್ಲ ಮುಗಿದಿದ್ದರೂ ಇನ್ನೂ ಫಲವತ್ತಾಗಿದ್ದೆ
ನಾನೇನು ಮಾಡಲಿ?

ಮುಂಗಾರಿನ ಹೊಳೆಯಂತೆ ಉಕ್ಕುವ
ನನ್ನನ್ನು ಅವರು ಲೀಟರುಗಳಲ್ಲಿ ಅಳೆಯುತ್ತಿದ್ದರು
ಕೆಲವರು ಬೇಲಿ ಕಟ್ಟಲು ಇನ್ನು ಕೆಲವರು
ಬಾಟಲಿಯಲ್ಲಿ ತುಂಬಿ ಬಿರಡೆ ಹಾಕಲೆತ್ನಿಸುತ್ತಿದ್ದರು.

ನನ್ನ ಅಡಿಗೆಯ ರಹಸ್ಯದ ಹಾಗೆ ನನ್ನ
ಕವನಗಳೂ ಅವರಿಗೆ ಅರ್ಥವಾಗುವುದಿಲ್ಲ.
ಅದಕ್ಕೇ ಮೊಸರಿನಲ್ಲಿ ಕಲ್ಲು ಹುಡುಕುತ್ತಾರೆ
ಅಥವಾ ಬಳಸಿದ ಸಾಮಾನುಗಳನ್ನು, ವಿಧಾನವನ್ನು
ಪತ್ತೆ ಹಚ್ಚಲು ತೊಡಗುತ್ತಾರೆ.

ನನ್ನ ರಾತ್ರಿಗಳಲ್ಲಿ ಪಿಸುಗುಡುವ
ಧ್ವನಿಗಳನ್ನು ಹಿಡಿದಿಡುವ ಹಠದಲ್ಲಿ
ಅವರು ನನ್ನ ಕಿವಿ ಕತ್ತರಿಸಿದರು
ಕಾಲಿಗೆ ಗೂಟ ಬಡಿದು ತುಟಿ ಹೊಲಿದು
ನಡೆ ನುಡಿ ತಿದ್ದಲು ಬಯಸಿದರು

ನಾನು ನೋಡಿದ ಕಡೆಯಲ್ಲೆಲ್ಲ
ಸದೃಢ ಸುಂದರ ಗಂಡಸರು
ತಾವು ರುಚಿ ನೋಡಿದ ಹೆಣ್ಣುಗಳ ವರ್ಣನೆಯಲ್ಲಿದ್ದರು.

ಅವರ ಮಾತುಗಳ ಬಲೆಯಲ್ಲಿ
ನನ್ನ ವಿಧಿ ನಿರ್ಣಯವಾಗುತ್ತಿತ್ತು.

ಹೊರಗೆ ಜಿಗಿದ ಅಪರಾಧಕ್ಕಾಗಿ
ನನಗೆ ಕಡಲಲ್ಲಿ ಮುಳುಗುವ ಶಿಕ್ಷೆಯಾಯಿತು

ಆದರೆ ತಿಮಿಂಗಿಲಗಳ ಕಟಕಟೆಯೇನೂ
ದುರ್ಬಲವಾಗಿರಲಿಲ್ಲ

ಒಂದೇ ಸಮಾಧಾನವೆಂದರೆ
ನೆಲದ ಜನ
ಜಲದೊಳಗೆ ಬರುವುದಿಲ್ಲ

ಪ್ರತಿಭಾ ನಂದಕುಮಾರ್

ಪುಸ್ತಕ
ಪುಸ್ತಕ

ಪಂಪಿಸಿ, ಪ್ರಾರ್ಥಿಸಿ

ಡಿ.ವಿ. ಗುಂಡಪ್ಪ

ಬಾಳಿಗೊಂದು ನಂಬಿಕೆ ಎಂಬುದು ಡಿ.ವಿ.ಜಿ ಯವರ ಒಂದು ಕಿರು ಪುಸ್ತಕ. ಬಾಳಿಗೊಂದು ನಂಬಿಕೆ ಪುಸ್ತಕದ ಮೊದಲ ಪ್ರಕಾಶಕರು ಮೈಸೂರಿನ ವಯಸ್ಕರ ಶಿಕ್ಷಣ ಸಮಿತಿ (೧೯೫೦) ಆನಂತರದಲ್ಲಿ ಕಾವ್ಯಾಲಯ ಪ್ರಕಾಶನದವರು ಹಲವಾರು ಆವೃತ್ತಿಗಳನ್ನ ಹೊರ ತಂದಿದ್ದಾರೆ. ಇಲ್ಲಿ ನಾವು ಪ್ರಕಟಿಸುತ್ತಿರುವ ಭಾಗ, ವಿಜ್ಞಾನದ ಮಿತಿಗಳನ್ನ ಸರಳವಾಗಿ, ಆದರೆ ಸಾಂದ್ರವಾಗಿ ವಿಶ್ಲೇಷಿಸುವ ಮಹತ್ವದ ಲೇಖನ.

ವಿಜ್ಞಾನಕ್ಕಿರುವ ಮಿತಿ

ವಿಜ್ಞಾನದಿಂದ ಎಲ್ಲವೂ ಸಾಧ್ಯವೆಂದು ಯಾರೂ ಹೇಳುವುದಿಲ್ಲ. ವಿಜ್ಞಾನಕ್ಕೆ ಮಿಂಚಿದ ಪ್ರಶ್ನೆಗಳು ನಮ್ಮ ಜೀವನದಲ್ಲಿ ಸಾವಿರ ಇವೆಯೆಂಬುದು ನಿಜ. ಜೀವತತ್ತ್ವ ಮನಸ್ತತ್ತ್ವಗಳ ಮರ್ಮವನ್ನು ವಿಜ್ಞಾನವು ಸೋಕಲಾಗಿಲ್ಲ. ಜಗನ್ಮೂಲವನ್ನು ಅದೇನೂ ಕಂಡಿಲ್ಲ. ಇಷ್ಟೆಲ್ಲಾ ವಿಜ್ಞಾನವೃದ್ಧಿ ಮಾಡಿಕೊಂಡಿರುವ ಯೂರೋಪಿಗೆ ಭಯಂಕರ ಯುದ್ಧವನ್ನೂ ನರಹತ್ಯೆಯನ್ನೂ ತಪ್ಪಿಸುವುದು ಸಾಧ್ಯವಾಗಿಲ್ಲ. ಬರಿಯ ವಿಜ್ಞಾನವೊಂದು ಮಾತ್ರವೇ ಪ್ರಬಲಿಸಿದರೆ ಸಾಲದು ಎಂಬುದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಹಾಗೆಯೇ ವಿಜ್ಞಾನವನ್ನು ಬಿಟ್ಟರೂ ನಮ್ಮ ಜೀವನ ಚೆನ್ನಾಗಿ ಸಾಗಲಾರದು ಎಂಬುದನ್ನು ಎಲ್ಲರೂ ಒಪ್ಪಿಕೊಳ್ಳಬೇಕು.

ವಿಜ್ಞಾನ ಒಂದು ಆಯುಧದಂತೆ, ಅಥವಾ ಹಣದಂತೆ. ಆಯುಧವನ್ನು ಪ್ರಾಣಸಂರಕ್ಷಣೆಗಾದರೂ ಉಪಯೋಗಿಸಬಹುದು; ಕೊಲೆಪಾತಕಕ್ಕಾದರೂ ಉಪಯೋಗಿಸಬಹುದು. ಆಯುಧದಲ್ಲಿ ತಪ್ಪೂ

ಇಲ್ಲ, ಸರಿಯೂ ಇಲ್ಲ. ತಪ್ಪು ಸರಿಗಳು ಆಯುಧ ಹಿಡಿದವನ ಮನಸ್ಸಿನವು. ಹಣದ ಮಾತೂ ಅಷ್ಟೇ. ಅದು ಪರೋಪಕಾರಕ್ಕೂ ಆಗುತ್ತದೆ, ಹಿಂಸೆಗೂ ಆಗುತ್ತದೆ. ಹಣ ಒಳ್ಳೆಯದೋ, ಕೆಟ್ಟದ್ದೋ ಹಣವಂತನ ನೀತಿ ವಿವೇಕದಂತೆ ಇರುತ್ತದೆ. ವಿಜ್ಞಾನಶಕ್ತಿಯೂ ಅಷ್ಟೇ.

ದುಷ್ಟರು ಐಶ್ವರ್ಯವನ್ನು ದುರುಪಯೋಗ ಮಾಡಿಯಾರೆಂಬ ಕಾರಣದಿಂದ ಯಾರೂ ದಾರಿದ್ರ್ಯವನ್ನು ಬೇಡುವುದಿಲ್ಲ. ಯುರೋಪಿಯನ್ನರ ಯುದ್ಧದ ಕಾರಣದಿಂದ ನಾವು ವಿಜ್ಞಾನಶಕ್ತಿ ನಮಗೆ ಬೇಡವೆನ್ನತಕ್ಕದ್ದಲ್ಲ.

ಶಕ್ತಿಯಿಲ್ಲದವರ ಒಳ್ಳೆಯತನ ಬರಿಯ ಪೇಚಾಟ. ತಾಯಿಗೆ ಮಗುವಿನಲ್ಲಿ ಪ್ರೀತಿ ಸಹಜವಾಗಿರುತ್ತದಷ್ಟೆ? ಆದರೆ ಮಗುವಿಗೆ ರೋಗ ಬಂದಿರುವಾಗ ತಾಯಿ ಅಳುತ್ತ ಕೂತರೆ ವಾಸಿಯಾಗುತ್ತದೆಯೆ? ತಾಯಿಯ ಪ್ರೀತಿಯು ಆಗ ಬರಿಯ ಕಣ್ಣೀರಾಗಬಾರದು, ಅದು ಶಕ್ತನಾದ ವೈದ್ಯನನ್ನು ಕರೆತರುವ ಧೈರ್ಯವಿವೇಕವಾಗಬೇಕು. ಕಾಯಿಲೆಯನ್ನು ಗುಣಮಾಡುವುದು ತಾಯಿಯ ಪೇಚಾಟವಲ್ಲ, ವೈದ್ಯನ ವಿಜ್ಞಾನಶಕ್ತಿ. ನಮ್ಮ ಎಲ್ಲ ಕಷ್ಟಗಳ ವಿಚಾರವೂ ಹಾಗೆಯೇ. ಅವುಗಳ ನಿವಾರಣೆಗೆ ಮೊದಲು ಬೇಕಾದದ್ದು ನಮ್ಮ ವಿವೇಕದ ಪ್ರಯತ್ನ. ದೈವಕೃಪೆಯ ಮಾತು ಆಮೇಲೆ. ಕಷ್ಟ ಹೇಗೆ ಹುಟ್ಟಿತು, ಅದಕ್ಕೆ ಯಾವ ಪ್ರತಿಕ್ರಿಯೆ ಸರಿ, ಎಂಬುದನ್ನು ಹುಡುಕಿ ಹೇಳುವುದು ವಿಜ್ಞಾನ ಶೋಧನೆ. ನಮ್ಮ ಜೀವನದ ಎಲ್ಲಾ ಪ್ರಶ್ನೆಗಳನ್ನೂ ವಿಜ್ಞಾನದ ರೀತಿಯಲ್ಲಿ ಯೋಚಿಸಿ ವಿಮರ್ಶೆಮಾಡಿಕೊಳ್ಳಬೇಕು.

ಅಬಿಸೀನಿಯಾ ದೇಶದ ಹೆಸರು ೨೦-೨೫ ವರ್ಷಗಳಿಂದೀಚೆಗೆ ಇಂಡಿಯದಲ್ಲಿ ಕೂಡ ಎಲ್ಲರಿಗೂ ತಿಳಿದಿದೆ. ಆ ದೇಶ ಆಫ್ರಿಕಾ ಭೂಖಂಡದಲ್ಲಿದೆ. ಅಲ್ಲಿಯ ಜನರು ಮಿಶ್ರವರ್ಣದವರು; ಬಹುಮಟ್ಟಿಗೆ ಕ್ರಿಶ್ಚಿಯನರು. ಅವರ ಸ್ವಭಾವದ ಒಳ್ಳೆಯತನವೂ, ಸ್ವದೇಶ ಪ್ರೀತಿಯೂ ಯಾವ ಜನಾಂಗದ್ದಕ್ಕಿಂತಲೂ ಕಡಮೆಯಾದದ್ದಲ್ಲ. ಅವರು ಧೈರ್ಯಸಾಹಸಿಗಳೂ ಹೌದು. ಆದರೆ ವಿಜ್ಞಾನದ ಸಹಾಯ ಮಾತ್ರ ಅವರಿಗೆ ಹೆಚ್ಚಾಗಿ ಇರಲಿಲ್ಲ. ೧೯೩೫ನೆಯ ಅಕ್ಟೋಬರ್ ೩ರಲ್ಲಿ ಇಟಲೀ ದೇಶದ ಸೈನ್ಯವು ಮುಸ್ಸೋಲಿನಿಯ ಆಧಿಪತ್ಯದಲ್ಲಿ ಅಬಿಸೀನಿಯಾದ ಮೇಲೆ ನುಗ್ಗಿತು. ಆ ದೇಶವನ್ನು ಜಯಿಸುವುದಕ್ಕೆ ನಾಲ್ಕು ಲಕ್ಷದಷ್ಟು ಸೈನ್ಯವು ನಾಲ್ಕು ವರ್ಷದಷ್ಟು ಕಾಲ ಕಾದಬೇಕಾದೀತೆಂದು ಮುಸ್ಸೋಲಿನಿಯ ಯುದ್ಧಪ್ರವೀಣರು ಹೇಳುತ್ತಿದ್ದರು. ಆದರೆ ಇಟಲಿಯ ಚಿಲ್ಲರೆ ಸೈನ್ಯಗಳಿಂದಲೇ ಏಳು ತಿಂಗಳೊಳಗಾಗಿ-೧೯೩೬ನೆಯ ಮೇ ೫ ರಲ್ಲಿ-ಅಬಿಸೀನಿಯ ರಾಜ್ಯ ಇಟಲಿಯ ಪಾಲಾಯಿತು. ಇಟಲಿಗಿದ್ದ ಬಲವು ವಿಜ್ಞಾನಬಲ,-ಮೋಟಾರುಗಳು, ಏರೋಪ್ಲೇನುಗಳು, ಸೈನ್ಯ ವ್ಯೂಹದ ಚಮತ್ಕಾರ. ಅಬಿಸೀನಿಯದವರಿಗೆ ಸ್ವಾಭಾವಿಕವಾದ ಸಂರಕ್ಷಣೆಗಳು ಎಷ್ಟೋ ಇದ್ದವು-ಬೆಟ್ಟಕಾಡುಗಳು, ಏರುತಗ್ಗು ನೆಲ, ಸಂಚಾರಕ್ಕೆ ಕಷ್ಟವಾದ ಸನ್ನಿವೇಶ. ಆದರೆ ಈ ಅನುಕೂಲತೆಗಳೂ, ಅಬಿಸೀನಿಯನ್ನರ

ಶೌರ್ಯಸಾಹಸಗಳೂ ಮುಸ್ಸೋಲಿನಿಯ ಮೋಟಾರು, ಏರೋಪ್ಲೇನುಗಳ ಹೊಡೆತದ ಮುಂದೆ ಎಷ್ಟು ಮಾತ್ರವೂ ಸಾರ್ಥಕವಾಗದೆ ಹೋದುವು. ಅದು ಇಂಡಿಯಾ ದೇಶಕ್ಕೆ ದೊಡ್ಡ ಪಾಠ.

ಪ್ಲೇಗು, ಕಾಲರಾ ಇಂಥಾ ಸೋಂಕುರೋಗದ ಸೂಚನೆ ಪರಂಗಿಯವರ ಊರಿನಲ್ಲಿ ಎಲ್ಲಾದರೂ ಕಾಣಿಸಿಕೊಂಡರೆ ಕೂಡಲೆ ಅವರು ಅಲ್ಲಿಗೆ ಜನಾರೋಗ್ಯದ (ಹೆಲ್ತ್) ಅಧಿಕಾರಿಯನ್ನು ಬರಮಾಡಿ, ಜನರಿಗೆ ಚುಚ್ಚುಮದ್ದು (ಇನಾಕ್ಯುಲೇಷನ್) ಹಾಕಿಸಿ, ಮನೆಗಳನ್ನು ಶುದ್ಧಿಮಾಡಿಸಿ, ಮುಂಜಾಗ್ರತೆಯಿಂದ ರೋಗವನ್ನು ತಡೆಯುತ್ತಾರೆ. ನಮ್ಮೂರಿನಲ್ಲಿ ಹಾಗೆ ಕಾಣಿಸಿದರೆ ಮನೆಯ ರೊಚ್ಚನ್ನು ಹಾಗೆಯೇ ಬಿಟ್ಟು, ವೈದ್ಯರ ಹೆಸರನ್ನು ಕೂಡ ನೆನೆಯದೆ, ಮೊದಲು ಮಾರಮ್ಮನಿಗೆ ಹರಕೆ ಹೊರುತ್ತೇವೆ. ಎರಡು ಜನಾಂಗಗಳಿಗೂ ಇರುವ ಈ ದೊಡ್ಡ ವ್ಯತ್ಯಾಸ ನಮ್ಮ ಗಮನದಲ್ಲಿರಬೇಕಾದದ್ದು. ಮಾರಮ್ಮನ ಪೂಜೆಯನ್ನು ಬೇಕಾದ ಹಾಗೆ ಮಾಡೋಣ. ಆದರೆ ಅದರ ಜೊತೆಯಲ್ಲಿಯೇ ವಿಜ್ಞಾನದ ಸಹಾಯವನ್ನು ತಪ್ಪದೆ ತೆಗೆದುಕೊಳ್ಳೋಣ.

"ಪಂಪಿಸಿ"- ಪ್ರಾರ್ಥಿಸಿ

ಹಲವು ಮಂದಿ ಇಂಗ್ಲಿಷ್ ಜನರು ಹಡಗಿನಲ್ಲಿ ಪ್ರಯಾಣ ಮಾಡುತ್ತಿದ್ದರಂತೆ. ಆಗ ಬಿರುಗಾಳಿಯೆದ್ದು, ಸಮುದ್ರ ಕೆರಳಿ, ಅಲೆಗಳ ಹೊಡೆತ ಜೋರಾಯಿತು. ಹಡಗಿನೊಳಗೆ ನೀರು ತುಂಬಿಕೊಂಡುಬಂತು. ಜನ ಹೆದರಿ ದಿಕ್ಕು ತೋರದೆ ಕಡೆಗೆ, ಹಡಗಿನ ಕೋಣೆಯಲ್ಲಿದ್ದ ಪಾದರಿಯ ಬಳಿ ಹೋಗಿ ಸಂಗತಿಯನ್ನು ಆತನಿಗೆ ತಿಳಿಸಿದರಂತೆ. ಆತ-ಆ ಕ್ರೈಸ್ತಗುರುವು -"ಹಾಗೆಯೆ? ಏನು ಮಾಡೋಣ!" ಎಂದು ಕೇಳಿದನಂತೆ. ಅವರು "ದೇವರಿಗೆ ಪ್ರಾರ್ಥನೆ ಮಾಡೋಣ, ಬನ್ನಿ; ನೀವು ನಮ್ಮನ್ನು ನಡಸಿ" ಎಂದರು. ಆತನು "ಓಹೋ? ಅಷ್ಟಕ್ಕೆ ಬಂತೆ ನಿರಾಶೆ" ಎಂದನಂತೆ. ಅವರ ಕೂಗಾಟ ಇನ್ನೂ ಹೆಚ್ಚಲು, ಆತ "ಹಾಗಾದರೆ ಪ್ರಾರ್ಥನೆ ಮಾಡಿರಿ; ಆದರೆ ಪಂಪು (ನೀರೆತ್ತುವ ನಾಳ) ಹೊಡೆಯುತ್ತ ಪ್ರಾರ್ಥನೆ ಮಾಡಿರಿ(Pump and Pray), ಪಂಪು ಮಾತ್ರ ಕೈಬಿಡಬೇಡಿ" ಎಂದು ಸಾರಿದನಂತೆ. ಇದು ಬರಿಯ ಕಥೆ ಇರಬಹುದು. ಆದರೆ ಅದು ಇಂಗ್ಲಿಷ್ ಜನದ ಮನೋಭಾವವನ್ನು ತೋರಿಸುತ್ತದೆ. ಅವರ ಸೂತ್ರ (God helps those who help themselves) "ಯಾರು ತಮಗೆ ತಾವು ಸಹಾಯ ಮಾಡಿಕೊಳ್ಳುತ್ತಾರೋ ಅಂಥವರಿಗೆ ದೇವರು ಸಹಾಯ ವಾಗುತ್ತಾನೆ" ಎಂದು. ದೈವಸಹಾಯವಿಲ್ಲದೆ ಜಯವಿಲ್ಲ ಎಂಬುದು ನಿಜ. ಅದರ ಜೊತೆಗೆ ಸ್ವಪ್ರಯತ್ನವಿಲ್ಲದೆ ದೈವಸಹಾಯವಿಲ್ಲ ಎಂಬುದೂ ನಿಜ. ಮನುಷ್ಯನಿಗೆ ದೇವರು ಬುದ್ಧಿಸಾಮರ್ಥ್ಯಗಳನ್ನು ಒಂದಷ್ಟು ಕೊಟ್ಟಿದ್ದಾನೆ. ಅದರಿಂದ ಮನುಷ್ಯನ ಮೇಲೆ ಕರ್ತವ್ಯದ ಜವಾಬ್ದಾರಿ ಅಷ್ಟಿಷ್ಟು ಹೊತ್ತಿದೆ. ತನ್ನ ಆ ಕರ್ತವ್ಯದ ಹೊರೆಯನ್ನು ಅವರು ದೇವರ ಹೆಗಲಿಗೆ ಹಿಂತಿರುಗಿಸುವುದು ದೈವವಿಧೇಯತೆಯಲ್ಲ. ತನ್ನ ಭಾರವನ್ನು ತಾನು ಹೊತ್ತು, ಮಿಕ್ಕದ್ದನ್ನು ದೈವಕ್ಕೆ ಒಪ್ಪಿಸಬೇಕು.

ವಿಜ್ಞಾನಶಾಸ್ತ್ರಗಳು ದಿನೇದಿನೇ ಬೆಳೆಯುತ್ತಲೇ ಇವೆ. ಅವುಗಳಿಂದ ನಮ್ಮ ಜೀವನದಲ್ಲಿ ಇನ್ನೂ ಏನೇನು ಬದಲಾವಣೆಗಳು ನಡೆಯುವುದೋ ಊಹಿಸುವುದು ಕೂಡ ಅಸಾಧ್ಯವಾಗಿದೆ. ಈಚಿನ ಯುದ್ಧದಿಂದ ಲೋಕಕ್ಕೆ ಅಪಾರ ನಷ್ಟವುಂಟಾಗಿದ್ದರೂ, ಅದು ವಿಜ್ಞಾನದ ಅಭಿವೃದ್ಧಿಗೆ ಮಾತ್ರ ಪ್ರೋತ್ಸಾಹಕವಾಗಿದೆ. ಯುದ್ಧದ ಉಪಯೋಗಕ್ಕಾಗಿ ನೂರಾರು ಹೊಸ ಹೊಸ ಪರೀಕ್ಷೆಗಳೂ ಹೊಸಹೊಸ ಸಂಧಾನಗಳೂ ಆಗುತ್ತಿವೆ. ಯುದ್ಧಾನಂತರದ ಪ್ರಪಂಚದಲ್ಲಿ ವಿಜ್ಞಾನದ ಅದ್ಭುತಗಳು ನಮ್ಮ ಬದುಕನ್ನು ಇನ್ನೂ ಹೆಚ್ಚು ಹೆಚ್ಚಾಗಿ ಆಳುವುವೆಂಬುದಕ್ಕೆ-ಕಾಡುವುವೆಂಬುದಕ್ಕೂ-ಸಂದೇಹವಿಲ್ಲ.

ಆದರೂ

ಈ ಮಾತನ್ನು ಹೇಳುವಾಗ ಸಂಗಡಲೇ ಇನ್ನೂ ಒಂದು ಮಾತನ್ನು ನೆನಪಿಗೆ ತಂದುಕೊಳ್ಳಬೇಕಾಗಿದೆ. ವಿಜ್ಞಾನ ಸಾಧಿಸಬಹುದಾದದ್ದು ಅಪಾರವಾಗಿ ಕಂಡರೂ, ನಿಜವಾಗಿ ಅದಕ್ಕೂ ಪಾರವುಂಟು. ವಿಜ್ಞಾನದ ವ್ಯಾಪಾರವೇನಿದ್ದರೂ ನಮ್ಮ ಬಾಹ್ಯಪ್ರಪಂಚದಲ್ಲಿಯೇ ಹೆಚ್ಚಾಗಿ ನಡೆಯತಕ್ಕದ್ದು. ಕಣ್ಣು ಕಿವಿ ಮೊದಲಾದ ಇಂದ್ರಿಯಗಳಿಗೆ ಗೋಚರವಾಗುವ ಕಡೆಯೇ ಅದರ ಅಧಿಕಾರ. ಈ ಇಂದ್ರಿಯಗಳ ಹಿಡಿತಕ್ಕೆ ಸಿಕ್ಕಲಾರದ್ದು ನಮ್ಮ ಅಂತಃ ಪ್ರಪಂಚ. ನಮ್ಮ ಅಂತರಂಗ ಕಾರ್ಯಗಳನ್ನು ಊಹಿಸಬಹುದೇ ವಿನಾ, (ಮೈಕ್ರೋಸ್ಕೋಪ್) ದುರ್ಬಿನ್ನಿನಲ್ಲಿ ಪರೀಕ್ಷಿಸುವುದೂ ತಕ್ಕಡಿಯಲ್ಲಿ ತೂಗಿಸುವುದೂ ಸಾಧ್ಯವಿಲ್ಲ. ತಲೆಯನ್ನು ಒಡೆದು ನೋಡಿದಾಗ ಅಲ್ಲಿ ಮನೋಬುದ್ಧಿಗಳಿರುವುದಿಲ್ಲ; ಮನೋಬುದ್ಧಿಗಳು ಕಾರ್ಯ ಮಾಡುತ್ತಿರುವಾಗ ಅದನ್ನು ತೋರಿಸಬಲ್ಲ ಕನ್ನಡಕದ (ಪಾರದರ್ಶಕ) ಯಂತ್ರವಿಲ್ಲ. ಹೀಗೆ ಒಬ್ಬ ಮನುಷ್ಯನ ಹೃದಯವ್ಯಾಪಾರವೇನಿದ್ದರೂ ಇನ್ನೊಬ್ಬನಿಗೆ ಕೇವಲ ಊಹೆ ಅನುಮಾನಗಳ ವಿಷಯವೇ ಹೊರತು ಪ್ರತ್ಯಕ್ಷ ಪ್ರಮಾಣದ್ದಲ್ಲ. ಅದೇ ಹೀಗಿರುವಾಗ ಇನ್ನು ನಮ್ಮ ಜೀವಮೂಲದ ಮತ್ತು ಆಜನ್ಮಸಿದ್ಧ ವಾಸನೆಗಳ ವಿಚಾರವೇನು? ವಿಜ್ಞಾನ ಅಲ್ಲಿಗೆಲ್ಲಾ ತನ್ನ ಅಧಿಕಾರವನ್ನು ವಿಸ್ತರಿಸುವ ಸೂಚನೆ ಇದುವರೆಗೆ ತೋರಿಬಂದಿಲ್ಲ.

ವಿಜ್ಞಾನ ಯುಗದ ಮೊದಮೊದಲಿನಲ್ಲಿ ವಿಜ್ಞಾನಕ್ಕೆ ದೊರೆತ ಕೆಲವು ಜಯಗಳನ್ನು ನೋಡಿ, ಕೆಲಮಂದಿ "ವಿಜ್ಞಾನಕ್ಕೆ ಅಸಾಧ್ಯವಾದದ್ದು ಜಗತ್ತಿನಲ್ಲಿ ಏನೂ ಇರಲಾರದ್ದು" ಎಂದು ಅಂದುಕೊಂಡರು. ಆದರೆ ಕಳೆದ ೫೦-೬೦ ವರ್ಷಗಳಲ್ಲಿ ವಿಜ್ಞಾನ ಅಂಥಾ ಅತ್ಯಾಶೆಯನ್ನು ಇಟ್ಟುಕೊಳ್ಳತಕ್ಕದ್ದಲ್ಲವೆಂದು ಸಿದ್ಧವಾಗಿದೆ. ವಿಜ್ಞಾನವು ಬಿಡಿಸಲಾಗದ ಒಗಟುಗಳು,-ವಿಜ್ಞಾನದ ಕೈ ಎಟಕಿಸಿಕೊಳ್ಳಲಾಗದ ವಾಸ್ತವಾಂಶಗಳು-ಜಗತ್ತಿನಲ್ಲಿ ಉಂಟೆಂಬುದನ್ನು ಮಹಾ ಪ್ರಸಿದ್ಧರಾದ ವೈಜ್ಞಾನಿಕರು ಈಗ ಒಪ್ಪಿಕೊಂಡಿದ್ದಾರೆ. ಆತ್ಮ, ದೈವ, ಕರ್ಮ-ಇಂಥಾ ವಿಚಾರಗಳಲ್ಲಿ ವಿಜ್ಞಾನ ಯಾವ ಸಿದ್ಧಾಂತವನ್ನೂ ಮಾಡಿಲ್ಲ. ಇಂಥಾ ರಹಸ್ಯಗಳನ್ನು ಅನ್ವೇಷಣೆ ಮಾಡುತ್ತಿರುವ ವೈಜ್ಞಾನಿಕರಲ್ಲಿ ಒಮ್ಮತ ಬಂದಿಲ್ಲ; ತಕರಾರುಗಳೇ ಹೆಚ್ಚಾಗಿವೆ. ಅವರಲ್ಲಿ ಒಬ್ಬನ ವಾದದ ಭಾಷೆ ಇನ್ನೊಬ್ಬನಿಗೆ

ಅರ್ಥವಾಗುವುದು ಕೂಡ ದುರ್ಲಭವಾಗಿದೆ. ಪ್ರಪಂಚ ವಿಜ್ಞಾನದ ಕಣ್ಣಿಗೆ ಕಾಣಬಾರದ ಸತ್ಯಾಂಶದ ವಿಚಾರವೇ ತತ್ತ್ವಶಾಸ್ತ್ರ, ಅಥವಾ ಅಧ್ಯಾತ್ಮ ವಿಜ್ಞಾನ, ಅಥವಾ ವೇದಾಂತ. ಅದೇ ಮತಧರ್ಮದ ಮೂಲಸ್ಥಾನ. ದೇವರು, ಆತ್ಮ, ಪುಣ್ಯ, ಪಾಪ, ಸ್ವರ್ಗ, ನರಕ, ಜನ್ಮಾಂತರ್ಯ, ಋಣಾನುಬಂಧ, ಪ್ರಾರಬ್ಧವಾಸನೆ, ಮೋಕ್ಷ-ಇವು ಆ ರಹಸ್ಯಸ್ಥಾನದ ವಿಚಾರಗಳು.

ಹೀಗೆ ವಿಜ್ಞಾನಕ್ಷೇತ್ರದ ಆಚೆಯಕಡೆ ರಹಸ್ಯ ಕ್ಷೇತ್ರವೊಂದು ಅದಕ್ಕಂಟಿಕೊಂಡಿರುತ್ತದೆ. ಇನ್ನೂ ಪರಿಷ್ಕಾರವಾಗಿ ಹೇಳಬೇಕಾದರೆ, ವಿಜ್ಞಾನಕ್ಷೇತ್ರದ ಒಳಗಡೆಯೆಲ್ಲ ರಹಸ್ಯ ಬೀಜಗಳು ಹುದುಗಿಕೊಂಡಿರುತ್ತವೆ. ಇದು ವೇದ ವೇದಾಂತಗಳಿಗೆ ಹೊಸ ಮಾತಲ್ಲ. ಭಗವಂತನ ಮಹಿಮೆಯಲ್ಲಿ ನಮಗೆ ವ್ಯಕ್ತವಾಗಿರುವ ಭಾಗವೂ ಉಂಟು, ಅವ್ಯಕ್ತವೂ ಉಂಟು. ಆ ಪರವಸ್ತುವು ಸಗುಣವೂ ಹೌದು, ನಿರ್ಗುಣವೂ ಹೌದು. ಅದರ ಸ್ವರೂಪವು ವಿಶ್ವಾಕಾರವೂ ಹೌದು, ನಿರ್ವಿಕಾರವೂ ಹೌದು -ಹೀಗೆ ಹೇಳುತ್ತದೆ ವೇದಾಂತ. ಆ ಸಿದ್ಧಾಂತದ ಮೇರೆಗೆ, ಮನುಷ್ಯ ಬುದ್ಧಿಗೆ ದೊರೆಯಬಹುದಾದ ಭಗವತ್ಕಾರ್ಯವು ಸೃಷ್ಟಿಯಲ್ಲಿದೆ, ಅದನ್ನು ಮೀರಿದ್ದೂ ಇದೆ. ಮನುಷ್ಯನು ಕೈಯನ್ನು ಎಷ್ಟು ದೂರ ಚಾಚುವುದು ಸಾಧ್ಯವೋ ಅಷ್ಟು ದೂರವೂ ಚಾಚಿ ಪ್ರಯತ್ನಿಸುವುದು ಅವನ ಕರ್ತವ್ಯ. ಎಲ್ಲಿ ಅವನ ಕೈಸಾಗದೋ ಅಲ್ಲಿ ಬಂದದ್ದನ್ನು ಭಗವದಿಚ್ಛೆಯೆಂದು ಅಂಗೀಕರಿಸುವುದೂ ಅವನ ಕರ್ತವ್ಯ. ಹೀಗೆ ವಿವೇಕಿಯ ಮತದಲ್ಲಿ ವಿಜ್ಞಾನ ಪ್ರಯತ್ನವೂ ಅದೃಷ್ಟಸಹನೆಯೂ ಎರಡೂ ಮಿಳಿತವಾಗಿರುತ್ತವೆ. ಅವನ ಬದುಕಿನಲ್ಲಿ ಪೌರುಷವೂ ವೈರಾಗ್ಯವೂ ಬೆರೆತುಕೊಂಡಿರುತ್ತವೆ. ಅವನ ನಂಬಿಕೆಗೆ ಆತ್ಮವಿಶ್ವಾಸ ಒಂದು ಕಣ್ಣು;ದೈವಭಕ್ತಿ ಇನ್ನೊಂದು ಕಣ್ಣು.

ವಿಜ್ಞಾನಶಕ್ತಿಯೂ ದೈವಭಕ್ತಿಯೂ ಪುರುಷವಿವೇಕವೂ ಮೂರೂ ಹೊಂದಿಕೊಂಡಿರುವುದಕ್ಕೆ ಒಂದು ದೃಷ್ಟಾಂತವನ್ನು ಕೊಡಬಹುದು. ನಮ್ಮಲ್ಲೊಬ್ಬರ ಮನೆಯಲ್ಲಿ ಯಾರಿಗಾದರೂ ವ್ಯಾಧಿ ಬಂದರೆ ಆಗ ಏನುಮಾಡುತ್ತೇವೆ? ಅಲ್ಲಲ್ಲಿ ವಿಚಾರಿಸಿ -ಬಹಳ ಸಮರ್ಥ, ಯೋಗ್ಯ, ಎನ್ನಿಸಿಕೊಂಡಿರುವ ವೈದ್ಯನನ್ನು ಕರೆತರುತ್ತೇವೆ. ಹಾಗೆ ವೈದ್ಯನನ್ನು ಹುಡುಕಿ ಆರಿಸುವ ಜಾಗರೂಕತೆಯೇ ಪುರುಷವಿವೇಕ. ಆ ವೈದ್ಯನು ರೋಗಿಯನ್ನು ಬಗೆಬಗೆಯಾಗಿ ಪರೀಕ್ಷೆ ಮಾಡಿ ಚಿಕಿತ್ಸೆಯನ್ನು ಗೊತ್ತುಮಾಡುತ್ತಾನೆ. ಅದರಲ್ಲಿರತಕ್ಕದ್ದು ವಿಜ್ಞಾನದ ಶಕ್ತಿ. ಹಾಗೆ ಆತ ಒಂದು ಕಷಾಯವನ್ನೋ ಚೂರ್ಣವನ್ನೋ ಮಾತ್ರೆಯನ್ನೋ ತಯಾರುಮಾಡಿಕೊಟ್ಟ ಬಳಿಕ, ರೋಗಿ ಅದನ್ನು ಸೇವಿಸುವ ಕಾಲದಲ್ಲಿ ನಂಬಿಕೆಯಿಂದಲೂ ಶ್ರದ್ಧೆಯಿಂದಲೂ ತೆಗೆದುಕೊಳ್ಳಬೇಕೆನ್ನುತ್ತೇವೆ. ಏಕೆಂದರೆ ವ್ಯಾಧಿ ವಾಸಿಯಾಗುವುದಕ್ಕೆ ವೈದ್ಯನ ಔಷಧಬಲದ ಜೊತೆಗೆ ರೋಗಿಯ ಮನೋಬಲವೂ ಸೇರಬೇಕು. ಇದು ವೈದ್ಯಶಾಸ್ತ್ರಜ್ಞರು ಅಂಗೀಕರಿಸಿರುವ ತತ್ತ್ವ. ಮನಸ್ಸಿಗೂ ದೇಹದಮೇಲೆ ಅಧಿಕಾರವುಂಟು, ಆದಕಾರಣ ಮನಸ್ಸಿನ ಧೈರ್ಯ ವಿಶ್ವಾಸಗಳೂ ಔಷಧದ ಸರಕುಗಳೇ. ಈ ಭಾವನೆಯಿಂದಲೇ ಪೂರ್ವಿಕರು -

ಔಷಧಂಜಾಹ್ನವೀತೋಯಂ
ವೈದ್ಯೋ ನಾರಾಯಣೋ ಹರಿಃ

"ಈ ಕಷಾಯವೇ ಸಂಜೀವನವಾದ ಗಂಗಾತೀರ್ಥ; ಈ ಡಾಕ್ಟರು ದೇವರ ಸ್ವರೂಪ" ಎಂದು ಹೇಳುತ್ತಿದ್ದದ್ದು. ಇದು ವಿವೇಕ-ವಿಜ್ಞಾನ-ಭಕ್ತಿಗಳ ಸಮ್ಮೇಳನ.

ಪುರುಷಪ್ರಯತ್ನವು ಒಂದು ಕಡೆ ವಿಜ್ಞಾನವಿದ್ಯೆಯಾದಂತೆ ಇನ್ನೊಂದು ಕಡೆ ನೀತಿವಿವೇಕವಾಗುತ್ತದೆ. ಅದೇ ಸೌಜನ್ಯ; ಅದೇ ಧರ್ಮ. ಧರ್ಮ ಎಂದರೆ ನಾನಾ ಜೀವರಾಶಿಗಳ ಜೀವನದಲ್ಲಿ ಅನ್ಯೋನ್ಯ ಬಾಧೆ ಕಡಿಮೆಯಾಗಿ ಅನ್ಯೋನ್ಯ ಸಹಾಯ ಹೆಚ್ಚಾಗುವಂತೆ ಮಾಡುವ ನಡವಳಿಕೆ. ಸಮಸ್ತ ಲೋಕದ ಜೀವನವನ್ನೂ ಯಾವ ಒಂದು ಮನುಷ್ಯ ವರ್ತನೆಯ ಕ್ರಮವು, ಅಥವಾ ಎಂಥಾ ಒಂದು ಸಂಬಂಧ ವ್ಯವಸ್ಥೆಯು ಧರಿಸುತ್ತದೆಯೋ ಆ ಚರ್ಯೆಯೇ ಧರ್ಮ. ವಿಜ್ಞಾನವಿವೇಕದ ಜೊತೆಗೆ ಧರ್ಮವಿವೇಕ ಹೊಂದಿಕೊಂಡಷ್ಟೂ ನಮ್ಮ ಜೀವನಕ್ಕೆ ಕಳೆಯೇರುತ್ತದೆ.

ವಿಜ್ಞಾನವಿಲ್ಲದ ಧರ್ಮನಿಷ್ಠೆಯ ಅನರ್ಥಕ್ಕೆ ಅಬಿಸೀನಿಯಾ ಉದಾಹರಣೆಯಾಗಿರುವಂತೆ, ಧರ್ಮನಿಷ್ಠೆಯಿಲ್ಲದ ವಿಜ್ಞಾನದ ಅನರ್ಥಕ್ಕೆ ಯುದ್ಧಪೂರ್ವದ ಜರ್ಮನಿ ಉದಾಹರಣೆಯಾಗಿದೆ. ವಿಜ್ಞಾನಸಿದ್ಧಿಯಲ್ಲಿ ಜರ್ಮನಿಗಿಂತ ಮುಂದುವರಿದ ದೇಶವೇ ಇರಲಿಲ್ಲ. ಆದರೆ ಅದು ಒಂದಾನೊಂದು ಘಳಿಗೆಯಲ್ಲಿ ಸೌಜನ್ಯವನ್ನು ತೊರೆದದ್ದರಿಂದ ಪ್ರಪಂಚದ ಅರ್ಧಭಾಗವನ್ನು ರುದ್ರಭೂಮಿಯಾಗಿ ಮಾಡಿತು (ಅದು ೧೯೧೪ ರಿಂದ ೧೯೧೮ ರವರೆಗೆ).ಮತ್ತೆ ೧೯೩೯-೪೫ರ ಯುದ್ಧವೂ, ಅಂದಿನಿಂದೀಚೆಗೆ ಈಗಲೂ ಪಾಶ್ಚಾತ್ಯ ಜನಾಂಗಗಳಲ್ಲಿ ನಡೆಯುತ್ತಿರುವ ಶಸ್ತ್ರಾಸ್ತ್ರಸಿದ್ಧತಾರೂಪವಾದ "ಶೀತಲ" ಯುದ್ಧವೂ ಧರ್ಮಹೀನವಾದ ವಿಜ್ಞಾನವೈಪರೀತ್ಯಕ್ಕೆ ನಿದರ್ಶನ.

ಇಂಡಿಯಾ ದೇಶವು ಹಾಗೆ ನೀತಿ ತಪ್ಪೀತೆಂಬ ಭೀತಿಗೆ ಇದುವರೆಗೂ ಕಾರಣ ತೋರಿಲ್ಲ. ಅದು ಮಹರ್ಷಿಗಳ ಬೋಧನೆಯ ಪ್ರಭಾವದಿಂದ. ಆದರೆ ಈಗ ನವನಾಗರಿಕತೆ ನಮ್ಮಲ್ಲೂ ನುಗ್ಗಿ ಬರುತ್ತಿದೆ. ಯೂರೋಪಿನ ವಿಜ್ಞಾನ, ಕಾರ್ಯದೀಕ್ಷೆ, ವ್ಯವಸ್ಥಾನಿಯಮ ಮೊದಲಾದ ಒಳ್ಳೆಯ ಗುಣಗಳನ್ನು ನಮ್ಮವರು ಕಲಿಯದೆ, ಅವರ ಭೋಗಪದ್ಧತಿ, ಧನವ್ಯಾಮೋಹ ಪದ್ಧತಿಗಳನ್ನು ಮಾತ್ರ ಅಭ್ಯಾಸ ಮಾಡಿಕೊಳ್ಳುತ್ತಿದ್ದಾರೆ. ಯಾವುದು ಸುಲಭವೋ, ಯಾವುದು ಸದ್ಯಕ್ಕೆ ರುಚಿಯೋ ಅದನ್ನು ತೆಗೆದುಕೊಳ್ಳುತ್ತಿದ್ದಾರೆ; ಯಾವುದು ಸದ್ಯಕ್ಕೆ ಕಷ್ಟವಾಗಿ ಕಂಡರೂ ದೂರಕ್ಕೆ ಹಿತವೋ ಅದನ್ನು ಬಿಡುತ್ತಿದ್ದಾರೆ. ಪರಂಗಿಯವರ ಆತ್ಮಶಿಕ್ಷಣವನ್ನು ನಾವು ದೂರ ಬಿಟ್ಟು, ಅದರ ಮೇಲ್ಮೇಲಿನ ಷೋಕು "ಫ್ಯಾಷನ್ನು"ಗಳಿಗೆ ಮನಸೋತಿದ್ದೇವೆ. ಇಂಥ ಕಾಲದಲ್ಲಿ ನಮ್ಮ ನೀತಿವಿವೇಕವೂ ಸ್ವಲ್ಪ ತಲೆಕೆಳಗಾದರೆ ಆಶ್ಚರ್ಯವೇನು ?

ಪುಸ್ತಕ ವಿಮರ್ಶೆ

ಗೋವಿಂದ ಪೈ ಸಂಶೋಧನ ಸಂಪುಟ

ಪಿ. ಶ್ರೀಪತಿ ತಂತ್ರಿ

ಸಂಪಾದಕರು : ಹೆರಂಜೆ ಕೃಷ್ಣಭಟ್ಟ ಮತ್ತು ಮುರಳೀಧರ ಉಪಾಧ್ಯಾಯ ಹಿರಿಯಡಕ. ಗೋವಿಂದ ಪೈ ಸಂಶೋಧನ ಕೇಂದ್ರ ಉಡುಪಿ, ೧೯೯೫. ಬೆಲೆ ರೂ. ೬೫೦ =೦೦

೧೮೮೩ ರಿಂದ ೧೯೬೩ರ ವರೆಗೆ ಬದುಕಿದ ಪೈಯವರ ಬರಹಗಳು ನೂರಾರು. ವಿಷಯವೈವಿಧ್ಯದಲ್ಲಿ ಕಾರಂತರಂತೆಯೇ ಪೈಯವರೂ **ವಿಶ್ವತೋಮುಖಿ** ರಾಗಿದ್ದವರು. ಎಲ್ಲ ಜ್ಞಾನಕ್ಷೇತ್ರಗಳನ್ನೂ ಕುತೂಹಲದಿಂದ ನೋಡಿದವರು ಗೋವಿಂದ ಪೈಗಳು. ತನ್ನ ತೀರ್ಪೇ ಅಂತಿಮವೆಂದು ಪಟ್ಟುಹಿಡಿದವರಲ್ಲ. ವಿದ್ವಜ್ಜನರ ವಿಮರ್ಶೆಗೆ ಮುಕ್ತವಾಗಿ ತಮ್ಮನ್ನು ಒಡ್ಡಿಕೊಂಡವರು. ಪಾಶ್ಚಾತ್ಯ ವಿದ್ವಾಂಸರ ಅಹಂಕಾರಕ್ಕೆ ಸವಾಲೊಡ್ಡಿದವರು. ಆದರೆ, ಅವರ ಅನೇಕ ನಿಲುವುಗಳನ್ನು ಕೇವಲ ಪಾಶ್ಚಾತ್ಯರದ್ದೆಂಬ ಮಾತ್ರಕ್ಕೆ ತಿರಸ್ಕರಿಸದೆ, ಯುಕ್ತತೆಯ ನೆಲೆಯಲ್ಲಿ ಸ್ವೀಕರಿಸಿದವರು. ಋಷಿಯಾಗಿ ಚಿಂತಿಸಿದವರು, ತಪಸ್ವಿಯಾಗಿ ಬಾಳಿದವರು. ವ್ಯಾಸನಂತೆ ವಿಮರ್ಶಿಸುತ್ತ ಬರೆಯುತ್ತ ಸಾಗಿದವರು. ಪ್ರಸ್ತುತ ಸಂಪುಟದ ಅನುಕ್ರಮಣಿಕೆಯ ಮೇಲ್ನೋಟದಲ್ಲೇ ಅವರ ಬರಹದ ಕ್ಷೇತ್ರವೈವಿಧ್ಯ, ವಿಸ್ತಾರವು ನಮಗೆ ದಂಗುಬಡಿಸುವುದು!

ಇದರಲ್ಲಿ ಒಟ್ಟು ಹತ್ತು ಖಂಡಗಳಿದ್ದು, ಮೊದಲನೆಯ **ಹಳಗನ್ನಡ -ನಡುಗನ್ನಡ ಸಾಹಿತ್ಯ** ದೊಳಗೆ **೫೫** ಲೇಖನಗಳಿವೆ. ಎರಡನೆಯ **ಹೊಸಗನ್ನಡ ಸಾಹಿತ್ಯ** ದಲ್ಲಿ ೧೪ ಲೇಖನಗಳೂ, ಮೂರನೆಯ **ತುಳುನಾಡ ಇತಿಹಾಸ**ದಡಿ ೨೧ ಲೇಖನಗಳು, ನಾಲ್ಕನೆಯ **ಕರ್ನಾಟಕದ ಇತಿಹಾಸ**ದಡಿ ೨೨, ಐದನೆಯ **ಭಾರತದ ಇತಿಹಾಸ** ದಡಿಯಲ್ಲಿ ೧೫, ಆರನೆಯ **ವಾಗರ್ಥ** ದಡಿಯಲ್ಲಿ ೬ಲೇಖನಗಳು ಇದೆ. ಏಳನೆಯ ಖಂಡ **ಧರ್ಮ**, **ತತ್ವಜ್ಞಾನ**, **ಭಾಷಾಂತರ**. ಇದರಲ್ಲಿ ೧೫ ಲೇಖನಗಳಿವೆ. ಎಂಟನೆಯದು **ಮುನ್ನುಡಿಗಳು** ೧೦ ಸ್ವಂತ ಕೃತಿಗಳಿಗೆ ಸಂಬಂಧಿಸಿ, ಮತ್ತು ಇತರ ಕೃತಿಗಳಿಗೆ ಸಂಬಂಧಿಸಿ ೩೨ **ಪುಸ್ತಕ ವಿಮರ್ಶೆ** ಗಳಿಗೆ ಸಂಬಂಧಿಸಿದ ೯ನೆಯ ಖಂಡದಲ್ಲಿ ೮ ಲೇಖನಗಳು ಹಾಗೂ ಹತ್ತನೆಯ **ಸಂಕೀರ್ಣ** ದಡಿಯಲ್ಲಿ ೯ ಲೇಖನಗಳಿವೆ. ಪ್ರತಿಯೊಂದು ಖಂಡದ ಕೊನೆಯಲ್ಲಿ, ಡಾ. ಎಂ. ಎಂ. ಕಲಬುರ್ಗಿ, ಡಾ. ಕೆ. ವಿ. ರಮೇಶ್, ಡಾ. ಶ್ರೀನಿವಾಸ ಹಾವನೂರ, ಡಾ. ಯು. ಪಿ ಉಪಾಧ್ಯಾಯ, ಮುರಳೀಧರ ಉಪಾಧ್ಯಾಯ ಮುಂತಾದವರ ಸಮೀಕ್ಷೆಗಳನ್ನು ಕಾಣಬಹುದು. ಆರಂಭದಲ್ಲಿ ಡಾ. ಹಾ. ಮಾ. ನಾಯಕರು ೧೫ ಪುಟಗಳಲ್ಲಿ ಪೈ ಯವರನ್ನು

ನೆನಪಿಸಿಕೊಂಡು ನಮಸ್ಕರಿಸಿದ್ದಾರೆ. ಪ್ರೊ. ಕು. ಶಿ. ಯವರು ಗೋವಿಂದ ಪೈ ಸಂಶೋಧನ ಕೇಂದ್ರದ ಬಗ್ಗೆ ಪರಿಚಯ ಮಾಡಿಕೊಟ್ಟಿದ್ದಾರೆ. ಹದಿನಾಲ್ಕು ಪುಟಗಳ ಸಂಪಾದಕೀಯದಲ್ಲಿ ಪೈಗಳ ಬಗ್ಗೆ ಮುರಳೀಧರ ಉಪಾಧ್ಯಾಯರು ಬಹಳ ಪರಿಶ್ರಮದಿಂದ ಕಲೆ ಹಾಕಿದ ಅನೇಕ ಅಪೂರ್ವ ಮಾಹಿತಿಗಳು ಲಭ್ಯವಾಗಿವೆಯೆನ್ನಬಹುದು, ಒಟ್ಟು ಸಂಪುಟದ ವಿಸ್ತಾರ, ವೈವಿಧ್ಯ ಮತ್ತು ಮಹತ್ವದ ಬಗ್ಗೆ ಸಂಪಾದಕೀಯದಲ್ಲಿ ಸಮೀಕ್ಷೆಗಳಿಗಿಂತಲೂ ಓದುಗರಿಗೆ ಹೆಚ್ಚಿನ ಮಾಹಿತಿಗಳ ಪ್ರಯೋಜನವು ಲಭಿಸೀತೆಂದು ನನಗನ್ನಿಸುತ್ತದೆ. ಡಾ. ಕೆ. ವಿ. ರಮೇಶರು ತುಳುನಾಡಿನ ಇತಿಹಾಸದ ಬಗ್ಗೆಇರುವ ಒಟ್ಟು ೨೧ ಲೇಖನಗಳ ಬಗ್ಗೆ ಕೇವಲ ಅರ್ಧ ಪುಟದಲ್ಲಿ ಹೇಳಿರುವುದು 'ಸಮೀಕ್ಷೆಗಿಂತ ಪ್ರಸ್ತಾವನೆ'ಯೆಂದು ಕರೆಯುವುದು ಸೂಕ್ತ. ಯಾವ ಲೇಖನವನ್ನೂ ಪ್ರಸ್ತಾಪಿಸದೆ ಬರೆಯುವುದನ್ನು ಕಂಡಾಗ ಅವರು ಓದದೆಯೇ ಬರೆದಿರಬಹುದೇ ಎನ್ನುವ ಸಂದೇಹ ಮೂಡುತ್ತದೆ. ಆದರೆ ಮುಂದಿನ **ಕರ್ನಾಟಕ ಮತ್ತು ಭಾರತದ ಇತಿಹಾಸದ** ಬಗೆಗಿನ ಅವರ ಸಮೀಕ್ಷೆಗಳು ತೀರ ಸಂಕ್ಷಿಪ್ತವಾಗಿದ್ದರೂ ಇಂದಿನ ಒಬ್ಬ ಇತಿಹಾಸಜ್ಞನ ದೃಷ್ಟಿಯಲ್ಲಿ ಪೈಯವರ ಬರಹಗಳ ಮಹತ್ವವೇನೆಂದು ಸೂಚಿಸುತ್ತವೆ. ಲೇಖನಗಳನ್ನು ಪೂರ್ತಿ ಓದಿ ಸಮೀಕ್ಷೆ ನಡೆಸಿದ್ದವರು ಡಾ. ಕಲಬುರ್ಗಿಯವರು, ಡಾ. ಯು. ಪಿ. ಉಪಾಧ್ಯಾಯ ಮತ್ತು ಮುರಳೀಧರ ಉಪಾಧ್ಯಾಯ-ಎನ್ನುವುದು ಅವರ ಬರವಣಿಗೆಗಳು ತೋರಿಸಿಕೊಡುತ್ತವೆ. ಒಟ್ಟಿನಲ್ಲಿ ಸಮೀಕ್ಷೆಗಳು ಇನ್ನೂ ಹೆಚ್ಚು ಗಂಭೀರವಾಗಿ, ತಜ್ಞವಿಶ್ಲೇಶಣೆಯ ರೂಪದಲ್ಲಿ ಆಗಿದ್ದಲ್ಲಿ ಓದುಗರಿಗೆ ಹೆಚ್ಚು ಲಾಭವಾಗುತ್ತಿತ್ತು.

ಪೈಗಳ ಕೆಲವು ಲೇಖನಗಳಂತೂ ಅನೇಕ ಶಿಸ್ತುಗಳಿಗೆ ಏಕಕಾಲದಲ್ಲಿ ಚಾಚಿಕೊಂಡ ಚಿಂತನೆಯಲ್ಲಿ, ತುಲನೆಯಲ್ಲಿ ಹುಟ್ಟಿಬಂದವುಗಳು. ಹೀಗಾಗಿ ಪೈಯವರನ್ನು ಯಾವನೇ ಒಬ್ಬ ಒಬ್ಬಂಟಿಯಾಗಿ ಹಿಡಿಯಲಾರ, ಹಿಡಿದು ಪೂರ್ತಿ ಗುರುತಿಸಲಾರ. ಅವರ ೨೧೭ ಲೇಖನಗಳಲ್ಲಿ ನಾನು ಕೈಗೆತ್ತಿಕೊಂಡಿರುವುದು ಐದಾರು ಮಾತ್ರ. ಅವೂ ಭಾರತೀಯ ಸಾಂಸ್ಕೃತಿಕ-ಧಾರ್ಮಿಕ ಇತಿಹಾಸದ ಕಕ್ಷೆಯೊಳಗೆ ಪ್ರವೇಶಿಸುವ ಅವರ ಚಿಂತನೆಗೆ ಸಂಬಂಧಿಸಿದವುಗಳು ಮಾತ್ರ. ಇದಕ್ಕೆ ಕಾರಣ, ಕನ್ನಡದಲ್ಲಿ ಉಳಿದ ಯಾವ ವಿದ್ವಾಂಸರೂ ಪ್ರವೇಶಿಸದ ಈ ಕ್ಷೇತ್ರಕ್ಕೆ ಪೈಯವರು ಪ್ರವೇಶಿಸಿದ್ದು ಮಾತ್ರವಲ್ಲ, ಅತ್ಯಂತ ಮೌಲಿಕವಾಗಿ ವಿಶ್ಲೇಷಣೆಯನ್ನೂ ನೀಡಿದ್ದಾರೆ. ಅಲ್ಲದೆ, ಈ ಅಂಶದ ಬಗ್ಗೆ, ಗ್ರಂಥ ಸೂಕ್ಷ್ಮವಾಗಿ ಸಮೀಕ್ಷಿಸಿಲ್ಲವೆನ್ನುವುದು ಇನ್ನೊಂದು ಕಾರಣ.

ತುಳುನಾಡು-ಪೂರ್ವಸ್ಮೃತಿ (ಪುಟ ೫೮೧-೬೦೪)ಎಂಬ ಲೇಖನದಲ್ಲಿ ಪುಟ- ೫೮೮ ರಲ್ಲಿ **ತುಳು** ಪದದ ನಿಷ್ಪತ್ತಿ ಹೇಗಾಯಿತು ಎಂಬ ಬಗ್ಗೆ ಪೈಯವರು ಚರ್ಚಿಸುತ್ತಾರೆ. ಕ್ರಿ. ಶ. ೧೨ ನೆಯ ಶತಮಾನದ ಶಾಸನಗಳಲ್ಲಿ ಮೊತ್ತಮೊದಲು ಲಭಿಸುವ **ತುಳುದೇಶ** ದ ಬಗ್ಗೆ ವಿವರ ನೀಡುತ್ತಾರೆ. ರಾಮಭೋಜನೆಂಬ ಅರಸನ ತುಲಾಭಾರ ಮಾಡಿದ್ದರಿಂದಾಗಿ **ತೌಲವದೇಶ** ವೆಂದಾಯಿತು-ಎನ್ನುವ ಉಡುಪಿಯ ೧೯೧೩ ರಲ್ಲಿ ಪ್ರಕಟವಾದ ರಜತಪೀಠಪುರ ಮಾಹಾತ್ಮ್ಯವನ್ನೂ ಉಲ್ಲೇಖಿಸುತ್ತಾರೆ. ಯಾವುದೇ ದಾಕ್ಷಿಣಾತ್ಯ ಪ್ರದೇಶವಾಗಲೀ, ಊರಾಗಲೀ ಸಂಸ್ಕೃತ ಪದ ಮೂಲದಿಂದಲೇ ಹೆಸರು

ಪಡೆದದ್ದೆನ್ನುವುದು ಸರಿಯಲ್ಲವೆಂದು ಸಾರಾಸಗಟಾಗಿ ಪೈಯವರು ತಿರಸ್ಕರಿಸುವುದನ್ನು ಒಪ್ಪಿಕೊಳ್ಳಲೇಬೇಕು. "ದ್ರಾವಿಡ ಭಾಷೆಯಿಂದಲೇ ಹುಟ್ಟಿರಬೇಕಾದ 'ತುಳು'ಎಂಬ ಹೆಸರನ್ನು ಸಂಸ್ಕೃತದಿಂದ ಹುಟ್ಟಿಸಲಿಕ್ಕೆ ಹೆಣೆದಿರುವ ಈ ಕಲ್ಪನೆಯಲ್ಲಿ ನೀರು ನಿಲ್ಲುವಂತಿಲ್ಲ" (ಪುಟ ೫೪೯) ಅದರಂತೆಯೇ ತಮಿಳು ಹೆಸರಾದ 'ತುಳುಂಬ ಪೆರುಮಾಳ್' ಆಳಿದ ರಾಜ್ಯದಿಂದಾಗಿ ಈ ಹೆಸರು ಬಂದದ್ದೆನ್ನುವುದನ್ನೂ ಅವರು ತಳ್ಳಿ ಹಾಕುವುದು ಸರಿ. ಹಾಗೆಯೇ 'ಹಲಸಿನ ತೊಳೆ'ಯಿಂದಾಗಿ ಬಂದದ್ದೆನ್ನುವುದನ್ನೂ ತಿರಸ್ಕರಿಸುತ್ತಾರೆ. ಆದರೆ ತುಳು ಪದವನ್ನು ತಮಿಳನ್ನು ಆಶ್ರಯಿಸಿ, "ತುವೈ" = "ನೀರಿನಲ್ಲಿ ಹುಟ್ಟುಹಾಕು" "ತುಳೈ"=ನೀರಿನಲ್ಲಿ ಮುಳುಗು ಎಂಬ ಪದನಿಷ್ಪತ್ತಿಯ ಕಡೆಗೆ ಒಯ್ದು, ಇದರಿಂದಾಗಿ "ತುಮಿ", "ತುಳು" ಹುಟ್ಟಿಕೊಂಡಿರಬೇಕು ಎಂದು ಊಹಿಸುತ್ತಾರೆ. ಆದರೆ ಇದೂ ಊಹೆಯಾಗಿಯೇ ಉಳಿಯಬಹುದಲ್ಲದೆ, ಸಪ್ರಮಾಣ ತೀರ್ಪಾಗಿಲ್ಲ. ಈ ಪದವು ನಮಗೆ ಲಭ್ಯವಾಗುವುದೂ ಹೊಯ್ಸಳರ ಕಾಲದಿಂದ ಈಚೆಗೆ.

ಇನ್ನೊಂದು ಲೇಖನ- **ಇತಿಹಾಸದ ಇರುಳಲ್ಲಿ ತುಳುನಾಡು** ಎಪು. ೫೬೩-೫೭೪)ಇದರಲ್ಲಿ ಪೈಯವರ ವಿಮರ್ಶೆಯು ಬೇರೆಯೇ ದಾರಿ ಹಿಡಿಯುತ್ತದೆ. ಮಹಾಭಾರತ ಬೃಹತ್ಸಂಹಿತೆ ಮತ್ತು 'ಮಾರ್ಕಂಡೇಯ ಪುರಾಣಗಳಲ್ಲಿ ಹೇಳಲ್ಪಡುವ ತಾಲವನ', (ತಾಲೀವನ) 'ತಾಲೀಕಟ', 'ತಾಲಾಕಟ'ವೆಂಬ ದೇಶದ ಬಗ್ಗೆ ಚರ್ಚಿಸುತ್ತಾ ಅದು ದಕ್ಷಿಣದೇಶದ ಠಾಣಾದಿಂದ ಕೇರಳದವರೆಗೆ ಪಡುಗಡಲ ದಂಡೆಯಲ್ಲಿ ಚಾಚಿರುವ ಶೂರ್ಪಾರಕವೇ ಮುಂತಾದ ರಾಜ್ಯಗಳಲ್ಲಿ ಒಂದಾಗಿದ್ದುದಾಗಿ ಹೇಳಲ್ಪಟ್ಟಿರುವುದರ ಕಡೆಗೆ ಗಮನ ಸೆಳೆಯುತ್ತಾರೆ. ಕೊನೆಗೆ, "ತುಳುನಾಡೇ ತಾಲವನ ದೇಶವಾಗಿರಬೇಕೆಂಬುದು ವ್ಯಕ್ತವಾಗುತ್ತದೆ" ಎನ್ನುತ್ತಾರೆ (ಪುಟ೫೬೪)ತಾಲ =ತಾಳೆಮರ, ಈ ಪ್ರದೇಶದಲ್ಲಿ ಹೇರಳವಾಗಿ ಸಿಗುವುದರಿಂದ ಈ ಹೆಸರು ಬಂದದ್ದು ಎಂಬ ಅರ್ಥದಲ್ಲಿ. ಈ ತಾಲವನದಿಂದಲೇ, ತಾಲ-ಸಾಲ-ಸಾತಿಯಪುತ್ರ=ತುಳುವರು =ಸಾತವಾಹನರು, ಶಾಲಿವಾಹನರು -ಎಂಬಿತ್ಯಾದಿಯಾಗಿ ಅವರ ಯೋಚನೆಯ ಪ್ರವಾಹ ಹರಿಯುತ್ತದೆ. "ಆದ್ದರಿಂದ ಸಾತವಾಹನ ವಂಶದ ಆದಿಮ ಉಪನಿವೇಶವು ನಮ್ಮೀ ತುಳುನಾಡು ಆಗಿರಬಹುದೇ ಎಂಬೀ ಶಂಕೆಯು ಮೊಳೆದೋರುತ್ತದೆ". ಎಂಬ ನಿಲುವಿಗೆ ಬರುತ್ತಾರೆ. ಇದೆಲ್ಲ ಭಾಷಾಶಾಸ್ತ್ರೀಯ ತರ್ಕವಾಗಬಲ್ಲುದೇ ವಿನಾ, ಅದಕ್ಕಿಂತ ಹೆಚ್ಚಿನ ಪ್ರಯೋಜನವು ಇಂತಹ ಶಬ್ದಶಸ್ತ್ರಚಿಕಿತ್ಸೆಯಿಂದ ಲಭಿಸಲಾರದೆಂದು ನನಗನ್ನಿಸುತ್ತದೆ. ಒಂದು ವೇಳೆ ಈ ತಾಲೀವನವು ಈಗಿನ ತುಳುನಾಡ ಪ್ರದೇಶವೇ ಆಗಿದ್ದರೂ, ಅಲ್ಲಿಯವರೆಲ್ಲ ತುಳುಭಾಷೆ ಆಡುತ್ತಿದ್ದರೇ? ಅಥವಾ 'ತಾಲ' ದಿಂದ 'ತುಳು' ಆಯಿತೇ? ಹಾಗೆಲ್ಲೂ ಪೈಯವರು ನೇರವಾಗಿ ಹೇಳಿಲ್ಲ. ಸಾತವಾಹನರು ತುಳುಭಾಷೆಯವರೇ? ತುಳು ದೇಶ ವಾಚಕವೇ? ಅಥವಾ ಭಾಷಾ ವಾಚಕವೇ? - ಈಯೆಲ್ಲ ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ. ಇಂದಿಗೂ ತಾಳೆಮರಗಳ ಪ್ರದೇಶವೆಲ್ಲ ತುಳುನಾಡಲ್ಲ. ಅದು ಕನ್ನಡ, ಮಲೆಯಾಳ, ತಮಿಳು, ತೆಲುಗು,

ಕೊಂಕಣಿ ಮಾತನಾಡುವಲ್ಲೆಲ್ಲ ಕಾಣಸಿಗುವಂಥದ್ದು. ಮಹಾಭಾರತದ ತಾಲವನ ಈಗಿನ "ಠಾಣಾ"ವೇ ಆಗಿರಬಾರದೇಕೆ-ಎನ್ನುವ ಪ್ರಶ್ನೆಯನ್ನೂ ಎತ್ತಬಹುದು.

ಇದೇ ಲೇಖನದಲ್ಲಿ ಪೈಯವರು ಮುಂದುವರಿಯುತ್ತಾ ಯದುಗಳ ಒಂದು ಶಾಖೆಯಾಗಿ ಹೇಳಲ್ಪಟ್ಟಿರುವ "ಸಾತ್ವತರು", ಅಂದರೆ, ಅಂಧಕನ ವಂಶಜರು 'ಸಾತವಾಹನ'ರ ಪೂರ್ವಜರಾಗಿದ್ದು, ಅವರು "ಆರ್ಯಾವರ್ತದಿಂದ ದಕ್ಷಿಣಾಪಥಕ್ಕೆ ಇಳಿತಂದು ನಮ್ಮೀ ತುಳುನಾಡಿನಲ್ಲಿ ನೆಲೆಸಿರಬೇಕು. ಮತ್ತೀ ತುಳುನಾಡಿನಿಂದಲೇ ಅವರ ಕುಲದಲ್ಲಿಯ ಈ ಸಾತವಾಹನ ವಂಶವು ಮೊಳೆತಿರಬೇಕು. ಅಂದರೆ 'ಸಾತವಾಹನ' ಎಂಬೀ ವಂಶದ ಮೂಲಸ್ಥಾನವು ಈ ತುಳುನಾಡಾಗಿರಬೇಕು." (ಪು. ೩೩೮) ಎಂದು ತೀರ್ಮಾನಿಸುತ್ತಾರೆ. ಇಲ್ಲಿ ನಮ್ಮ ತೊಡಕೆಂದರೆ, ಋಗ್ವೇದದಲ್ಲಿ ಉಲ್ಲೇಖಿಸಲ್ಪಟ್ಟದ್ದು ಯದುಗಳ ವಂಶ. ಅದನ್ನು ಕ್ರಿ. ಶ. ದ ಈಚೆಗೆ ಸಾಗುವ ಮಹಾಭಾರತ ಮತ್ತು ಅನಂತರದ ಪುರಾಣಗಳು ವಿವರಿಸುವುದು. ಹೀಗಾಗಿ ಈ ಯದುಗಳ ಕಾಲ-ದೇಶಗಳ ನಿರ್ಣಯವೇ ಅಸ್ಪಷ್ಟ. ಪುರಾಣಗಳ ಪ್ರಕಾರ ಮಥುರೆಯ ಸುತ್ತಮುತ್ತ ಸಾತ್ವತರು, ಶೌರಸೇನರು ಇತ್ಯಾದಿಗಳು 'ಪಂಚವೀರಾ'ರಾಧಕರು (ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ, ಸಾಂಬ) ಇದ್ದರು. ಅವರು ದ್ವಾರಕೆಗೆ ವಲಸೆ ಹೋದದ್ದನ್ನು ಅವು ಹೇಳುತ್ತವೆ. ಆದರೆ ದಕ್ಷಿಣಾಪಥಕ್ಕೆ ಅದರಲ್ಲೂ ತುಳುನಾಡಿಗೆ ಸಾತ್ವತರು ಬಂದಿರಬೇಕೆನ್ನುವುದು ಪೈಯವರು ಬಿಟ್ಟರೆ ಬೇರೆ ಯಾರೂ ಹೇಳಿಲ್ಲ. ಇದನ್ನು ಸಮರ್ಥಿಸಲು ಪೈಯವರು ನೀಡುವ ಯಾವ ವಾದಗಳೂ ಇತಿಹಾಸ ಯೋಗ್ಯ ಪ್ರಮಾಣವಾಗಲಾರವು. ಅಂಧಕರು ಅಥವಾ ಸಾತ್ವತರೇ 'ಸತಿಯಪುತ್ರ'ರೆನ್ನುವ ಪೈಯವರ ತರ್ಕ ಒಪ್ಪಲು ಕಷ್ಟವಾದೀತು. ಭೂತಾರಾಧನೆಯ ಪ್ರಾಚೀನ ತುಳುನಾಡಿನ ಈ ಜನರನ್ನು ಪಾಂಚರಾತ್ರದ ಪಂಚವೀರಾರಾಧಕರ ಪರಂಪರೆಯ ಸಾತ್ವತರೆಂದು ಸಾಧಿಸುವ ಯತ್ನವು ಹೆಚ್ಚು ಫಲಕಾರಿಯಾಗದೆಂದು ನನ್ನ ಅನಿಸಿಕೆ. 'ಸಾತವಾಹನ' ಪದದ 'ಸಾತಾ' ಪ್ರಕೃತ ರೂಪವಾಗಿದ್ದು, ಅದು ಸಂಸ್ಕೃತದಲ್ಲಿ 'ತಾಲೀ' ಆಗುತ್ತದೆ-ಎನ್ನುವುದು ಪೈಯವರ ಇನ್ನೊಂದು ವಾದ. "ನನ್ನ ವಿಚಾರ ರೀತ್ಯಾ ಪ್ತೊಲೆಮಿಯನ (Ptolemy) 'Satoi' ಎಂಬವರು ಸಂಸ್ಕೃತದಲ್ಲಿ 'ತಾಲಾಃ' ಎಂದೂ ಪ್ರಾಕೃತದಲ್ಲಿ 'ಸಾತಾ' ಹೆಸರುಗಳುಳ್ಳ ತಾಲವನ ದೇಶದ ಜನರೇ-ಅಂದರೆ ನಮ್ಮೀ ತುಳುನಾಡಿನ ಆಗಣ ಜನರೇ...." (ಪೈ. ಪುಟ ೩೩೯)

ಹೀಗೆ ಹೇಳುವಾಗ 'ತಾಲವನ'ವು ಸಾತವಾಹನ ಶಬ್ದದಿಂದಲೇ ಹುಟ್ಟಿದ್ದು, ಅಂದರೆ 'ಸಾತ್ವತ' ಮೂಲವಾದದ್ದೆಂದು ಪೈಗಳು ಇಲ್ಲಿ ಸಾಧಿಸುತ್ತಾರೆ. ಇದೇ ಲೇಖನದಲ್ಲಿ ಹಿಂದೆ ಅವರು ತಾಲವನ=ತಾಳೆಮರಗಳ ನಾಡು ಎಂಬರ್ಥದಲ್ಲಿ ಹುಟ್ಟಿಕೊಂಡದ್ದು ಎಂದು ಹೇಳಿದ್ದನ್ನು ಜ್ಞಾಪಿಸಿಕೊಳ್ಳುವಾಗ, ಒಂದೇ ಲೇಖನದಲ್ಲಿ ಹೀಗೇಕೆ ಹೇಳುತ್ತಾರೆಂದು ಆಶ್ಚರ್ಯವಾಗುತ್ತದೆ! ಭವಿಷ್ಯಪುರಾಣದಲ್ಲಿ ಹೇಳುವ (ಇದರ ಕಾಲ ಕ್ರಿ. ಶ. ೭-೧೦ ಶತಮಾನವೆಂದು ಡಾ. ಪಿ.ವಿ. ಕಾಣೆಯವರು ಹೇಳುತ್ತಾರೆ.) ಸಾತವಾಹನರು ದಕ್ಷಿಣದೇಶದವರಿರಬಹುದು.

ಪಶ್ಚಿಮಕರಾವಳಿಯವರಾಗಿರಲೂಬಹುದು. ಸಾತವಾಹನರ ಕಾಲ ಕ್ರಿಸ್ತ ಪೂರ್ವದ್ದು. ಅಶೋಕ ಮೌರ್ಯನ ಶಿಲಾಶಾಸನದ್ದಕ್ಕಿಂತಲೂ ಪೂರ್ವದ್ದು. ಅವರು ತುಳುವರೇ? ಅವರ ರಾಜ್ಯ ತುಳುನಾಡೇ? ಹೇಗೆ ಹೇಳುವುದು? ಪೈಯವರೇ ಹೇಳುವಂತೆ ಅವರ ಹೆಸರೇ ತುಳುಮೂಲದ್ದಾಗಿಲ್ಲ. ಅದು 'ಸಾತ್ವತ' ಅಥವಾ 'ತಾಲವನ' ಎಂಬ ಸಂಸ್ಕೃತದಿಂದ ಹುಟ್ಟಿಕೊಂಡ ಅಥವಾ ಅದಕ್ಕಿಂತ ಪೂರ್ವದ ಪ್ರಾಕೃತ ಶಬ್ದ ಮೂಲದ್ದು. ಹಾಗಾದರೆ ಸಾತವಾಹನರು ತುಳುವರು ಹೇಗಾಗಲು ಸಾಧ್ಯವೆನ್ನುವುದು ನನ್ನ ಪ್ರಶ್ನೆ.

ಇದೇ ಲೇಖನದಲ್ಲಿ ಮುಂದುವರಿದು ಪೈಯವರು ಸಾತ=ನಾಗ ಎನ್ನುವ ಅರ್ಥವನ್ನು ನೀಡುತ್ತಾರೆ. ಸಾತವಾಹನ=ನಾಗ ಲಾಂಛನವೆಂಬರ್ಥವೆಂದೂ, ಐದುಹೆಡೆಯ ನಾಗಲಾಂಛನ ಉಳ್ಳವರೆಂದೂ, ಸುಬ್ರಹ್ಮಣ್ಯಸ್ಕಂಧನ ಆರಾಧಕರೆಂದೂ ಸಾಧಿಸಲು ಯತ್ನಿಸುತ್ತಾರೆ. ಈ 'ಸಾತ'ದಿಂದ ಸಾತಾವು ಸಂಸ್ಕೃತಕ್ಕೆ 'ಸಾಸ್ತಾವು' ಆಯಿತೆಂದೂ, ಸುಬ್ಬ=ಹಾವು. ಇದರಿಂದ ಸುಬ್ಬರ+ಮಣಿ, ಅಂದರೆ ನಾಗಮಣಿಯಿಂದಾಗಿ 'ಸುಬ್ರಹ್ಮಣ್ಯ' ವಾಯಿತೆಂದೂ ಹೇಳುತ್ತಾರೆ. ಸುಬ್ರಹ್ಮಣ್ಯ-ಕಾರ್ತಿಕೇಯನ ದೇವತಾ ಪ್ರಕ್ರಿಯೆಯನ್ನು ಇನ್ನೂ ಹೆಚ್ಚು ವ್ಯಾಪಕವಾದ ಹಿನ್ನೆಲೆಯಲ್ಲಿ ನೋಡಬೇಕಾದ ಅಗತ್ಯವಿದೆ. ದಕ್ಷಿಣ ಭಾರತದ 'ವೇಲನ್', 'ಮುರುಗನ್', 'ವೇಲಾಯುಧನ್', 'ಕಾರ್ತಿಕೇಯನ್'ಮತ್ತು ಸುಬ್ರಹ್ಮಣ್ಯ ಸಂಸ್ಕೃತದ 'ಸ್ಕಂಧ-ಕುಮಾರ' ಹೇಗಾದನೆಂಬುದನ್ನು ಹೆಚ್ಚು ವ್ಯಾಪಕ ಪರಿಜ್ಞಾನದ ಹಿನ್ನೆಲೆಯಲ್ಲಿ ಸಮಾಲೋಚಿಸುವ ಅಗತ್ಯವಿದೆಯೆಂದು ನನಗನ್ನಿಸುತ್ತದೆ. ಇದನ್ನು ಪೈಯವರಂತೆ ತುಳುಮೂಲದಿಂದ ಸಾಧಿಸುವುದನ್ನು ನಾನು ಒಪ್ಪಲಾರೆ. ಸಾಸ್ತಾವು ದೈವತವು ತುಳುನಾಡಿಗಿಂತ ಹೆಚ್ಚಾಗಿ ಕೇರಳದ ಜತೆಗೆ ಹೊಂದಿಕೊಳ್ಳುವುದು, ಸುಬ್ರಹ್ಮಣ್ಯ, 'ಸುಬ್ಬ', 'ಸುಬ್ಬರಾಯ'ರು ಕರ್ನಾಟಕ, ತಮಿಳುನಾಡು ಆಂದ್ರಗಳಲ್ಲೂ ಇರುವುದನ್ನು ಗಮನಿಸತಕ್ಕದ್ದು. "ನಮ್ಮೀ ಜಿಲ್ಲೆಯ 'ಹಾಲಾಡಿ' (ಹಾಲರ ಹಾಡಿ), 'ಹಾರಾಡಿ' (ಹಾರ=ಹಾಲರ ಹಾಡಿ) ಸಾಸ್ತಾನ (ಸಾತರ ಸ್ಥಾನ) 'ಸಾಂತಾರ ' (ಸಾತರ ಹಾರ) ಇವೇ ಮೊದಲಾದ ಹಳ್ಳಿಗಳ ಹೆಸರುಗಳು ಈ ತುಳುನಾಡಿನಲ್ಲಿ 'ಸಾತವಾಹನರು' ನೆಲೆಗೆಯ್ದು ಇದ್ದರೆಂಬುದನ್ನೇ ದೃಢೀಕರಿಸುತ್ತವೆ". ಎಂದು ಪೈಯವರು ನೀಡುವ ದೃಢೀಕರಣಕ್ಕೆ ಯಾವ ಐತಿಹಾಸಿಕ ಪ್ರಮಾಣವೂ ಇಲ್ಲ. ಈ ಸಾತವಾಹನ-ನಾಗಲಾಂಛನವನ್ನು ಹೀಗೆಯೇ ಅನ್ವಯಿಸುತ್ತ ನಡೆದರೆ, ಇಂದಿನ ಮಹಾರಾಷ್ಟ್ರದ ನಾಗಪುರ, ಅಸ್ಸಾಮಿನ ಮಂಗೋಲಾಯಿಡ್ ನಾಗಾ ಜನಾಂಗ, ಅದರಲ್ಲೂ "ಆವೊನಾಗಾ" ಜನರೆಂದರೆ 'ಹಾವು-ನಾಗ' ಎಂದೇ ಅರ್ಥೈಸುತ್ತಾ, ಅವರನ್ನೆಲ್ಲ ಸಾತವಾಹನರೆಂದು, ಮೂಲದ ತುಳುವರಿಗೇ ನಂಟುಹಾಕುತ್ತ ಸಾಗಬಹುದು!

ಇದೇ 'ತುಳುನಾಡು-ಪೂರ್ವಸ್ಮೃತಿ'ಯಲ್ಲಿ, Hopkins ರವರ The Great Epics of Indiaವನ್ನು ಆಧಾರವಾಗಿಟ್ಟುಕೊಂಡು ಹರಿವಂಶದ ಕಾಲವನ್ನು ಕ್ರಿ. ಶ. ಮೂರನೇ

ಶತಮಾನವೆಂದು ಪೈಗಳು ಹೇಳುತ್ತಾರೆ (ಆದರೆ ವಸ್ತುತಃ ಅದನ್ನು ಕ್ರಿ. ಶ. ೬ನೇ ಶತಮಾನಕ್ಕಿಂತ ಈಚೆಗೆ ತರಬೇಕು.) ಇದರಲ್ಲಿ ಬರುವ,

ಹರಿತೋಪಿ ಸಮುದ್ರಸ್ಯ ದ್ವೀಪಂ ಸಮಭಿಪಾಲಯನ್
ತಸ್ಯ ದಾಶಾ ಜಲೇ ಮಗ್ನಾ ಮುದ್ಗರಾ ನಾಮವಿಶ್ರುತಾ

ಅಂದರೆ ಹರೀತನು ಸಮುದ್ರ ದ್ವೀಪದಲ್ಲಿ ಆಳುತ್ತಿದ್ದನೆಂದೂ, ಅವನ ರಾಜ್ಯದಲ್ಲಿ 'ಮುದ್ಗರ'ರೆಂಬ ದಾಶರು (ಬೆಸ್ತರು) ಇದ್ದರೆಂದೂ, ಅವರೇ ಈಗಿನ ಮೊಗವೀರರೆಂದೂ ಪೈಯವರ ಊಹೆ. ಮುದ್ಗರರೇ ಮೊಗವೀರರಾಗಿರಲೂಬಹುದು. ಅಥವಾ ಬೇರೆ ಯಾವುದೋ ಬೆಸ್ತರಾಗಿರಲೂಬಹುದು. ಊಹೆಗೆ ಬಿಟ್ಟದ್ದು. 'ಮೊಗೇರ' ಪದದ ಸಂಸ್ಕೃತ ರೂಪವೇ 'ಮುದ್ಗರ'ವೆನ್ನುವುದು ಪೈಯವರ ವಾದ. (ನಾನು ಗಮನಿಸಿದಂತೆ 'ಮುದ್ಗರ'ವೆನ್ನುವ ಒಬ್ಬ ನಾಗ ಮಹಾಭಾರತದಲ್ಲಿದ್ದಾನೆ. ಅದೇ ಹೆಸರು ಒಂದು ಜಾತಿಯ ಮೀನಿಗೂ ಇದೆ.)

ಪೈಯವರ ಪ್ರಕಾರ 'ಮೊಗ್ಳೆರ'ದಿಂದ 'ಮುದ್ಗರ'ವಾದುದಾದರೆ 'ಮೊಗೇರ' ಪ್ರಾಚೀನವಾಯಿತು. ಆದರೆ ಈ ಪದವು ಇಲ್ಲಿಯ ಬೆಸ್ತರಿಗೆ ಅನ್ವಯಿಸಿ ಅಷ್ಟು ಪ್ರಾಚೀನವಲ್ಲ. ಹರಿವಂಶದಷ್ಟು ಪ್ರಾಚೀನ ಖಂಡಿತ ಅಲ್ಲ. ಪ್ರಾಚೀನ ಪದ 'ಮರಕಲ', ಈ ಪದವು ಮೂಲದ್ರಾವಿಡದಲ್ಲಿ 'ಮರಕಾಲು', ಅಂದರೆ ಮರದ ದೋಣಿಯಲ್ಲಿ, ಅಂದರೆ ನೀರಲ್ಲಿ ಚಲಿಸುವವರಿಗೆ ಅನ್ವಯಿಸುವ ವಿಶೇಷವಾಚಕ. ತಮಿಳಿನಲ್ಲೂ 'ಮರಕಲಂ' ಇದೆ. 'ಮೊಗೇರ', 'ಮೊಗವೀರ' ತೀರ ಈಚೆಗೆ ಬಳಕೆಗೆ ತಂದುಕೊಂಡ ಪದಗಳು.

ಇದೇ ಲೇಖನದಲ್ಲಿ ಹರ್ಷನ ನಾಗಾನಂದ ನಾಟಕದಲ್ಲಿ ಬರುವ 'ಶಂಖಚೂಡ ' ನೆಂಬ ನಾಗ ಮತ್ತು ಜೀಮೂತವಾಹನನ ಪ್ರಸಂಗದಲ್ಲಿ ಬರುವ 'ಶಂಖ + ಚೂಡ' ಪದವನ್ನು ಕೈಗೆತ್ತಿಕೊಂಡು, ಶಂಖ-ಸಂಕ-ಚಂಗ; ಶಂಖನಾಡು'=ಚಂಗನಾಡು; ನಾಗರ್-ನಾಯಕ್-ನಾಗರಕೊಯಿಲ್; ಆಳುಕ=ಆದಿಶೇಷ;-ಹೀಗೆ ಶಬ್ದಶಾಸ್ತ್ರೀಯ ರೀತಿಯಿಂದ ಮುಂದುವರಿಯುತ್ತಾ ತುಳುನಾಡಿನ ಆಳುಪರು, ಕೇರಳದ ನಾಯರರು ಇವರೆಲ್ಲ ನಾಗಮೂಲದವರು ಎನ್ನುವ ತೀರ್ಮಾನಕ್ಕೆ ಬರುವ ವಿಧಾನ ಅದ್ಭುತ! 'ಆಲುಪ', 'ಆಲ್' 'ಆಳುವ' ಪದವು ಅಲ = ನೀರ ಹಾವು ಅರ್ಥಮೂಲದ್ದೆಂದು ಅವರು ಸಾಧಿಸುವಲ್ಲಿ ಅದ್ಭುತ ಭಾಷಾ ನೈಪುಣ್ಯ ಪ್ರದರ್ಶಿಸುತ್ತಾರೆ. ನಾಗಬನವನ್ನು ತುಳುವಿನಲ್ಲಿ 'ಆಲ್', 'ಆಲಡೆ' ಎನ್ನುವುದು ಸರಿ. ಆದರೆ ಆಲುಪರು ಇದರಿಂದ ಬಂದವರೆನ್ನುವುದು ಕಷ್ಟ "ಆಳುವವರೂ" ಹಾವಾಡಿಸುವವರೆನ್ನಬಹುದೇ?

ಪೈಯವರ ಪ್ರಕಾರ ಆಲುಪರು, ನಾಯರರು = ನಾಗರು. ಅಂದರೆ ನಾಗಲಾಂಛನ (Snake Totem)ದ ಜನರು. ಮಾನವಶಾಸ್ತ್ರೀಯವಾಗಿ ನಾನಿದನ್ನು ಒಪ್ಪಲಾರೆ. ಕಾರಣ ಈ ಒಂದೇ Totemನ ಜನರು ಪರಸ್ಪರ ಒಳವಿವಾಹ ಸಂಬಂಧ ಅನುಸರಿಸಲು ಸಾಧ್ಯವಿಲ್ಲ. ಒಂದೇ

ಲಾಂಛನದವರ ಒಳಗೆ ಸಂಬಂಧ ನಿಷಿದ್ಧ. ಹಾಗಾಗಿ ಇವರೆಲ್ಲ ಒಂದೇ Totemನವರಲ್ಲ. ಆಳುಪರಿಗೂ, ನಾಯರರಿಗೂ ಬೇರೆ ಬೇರೆ ಅನೇಕ Totem (ಬಳಿ) ಗಳಿವೆಯೆನ್ನುವುದೂ ಸತ್ಯ. ಅಲ್ಲದೆ ನಾಗರ ಕತೆಗಳು ಮಹಾಭಾರತ, ಬುದ್ಧಜಾತಕಗಳಲ್ಲಿ ಸಾಕಷ್ಟು ತುಂಬಿದ್ದು, ಇವೆಲ್ಲವೂ ತೌಳವರೇ ಆಗಿರಬೇಕೆನ್ನುವ ತೀರ್ಮಾನಕ್ಕೆ ಬರಬೇಕಾದೀತು. ಮಾತ್ರವಲ್ಲ ಗಿಡುಗ ಮತ್ತು ನಾಗವೆಂಬ ಸಂತಾನದ್ವಂದ್ವದ ಕತೆಯು (ಸುಪರ್ಣಾ-ಕದ್ರು) ಋಗ್ವೇದದಷ್ಟು ಪ್ರಾಚೀನ. ಅಲ್ಲಿ ಅದು ಒಟ್ಟು ಮನುಸಂಕುಲದ ದ್ವಂದ್ವಾತ್ಮಕ ವಿಭಾಗ ವ್ಯವಸ್ಥೆ (Duel-Organisation-Moity) ಆಗಿ ಹೇಳಲ್ಪಟ್ಟಿದೆ.

ಪೈಗಳು ಪುರಾಣಗಳ ಪ್ರಾಚೀನತೆಯನ್ನು ಹೇಳುವಾಗ Pargiterರನ್ನು ಅವಲಂಬಿಸುತ್ತಾರೆ. ಆದರೆ Pargiterರ ಕಾಲನಿರ್ಣಯವನ್ನು ಇಂದಿಗೆ ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಅವರು ಹೆಚ್ಚಿನ ಪುರಾಣಗಳನ್ನು ಕ್ರಿಸ್ತಪೂರ್ವಕ್ಕೆ ಒಯ್ಯುತ್ತಾರೆ. ಈ ಪುರಾಣಗಳನ್ನು ಕ್ರಿಸ್ತಶಕದ ೩ನೇ ಶತಮಾನದಿಂದ ಮೊದಲ್ಗೊಂಡು ೧೧ನೆಯ ಶತಮಾನದವರೆಗೆ ಸೇರಿಸುವುದಲ್ಲದೆ, ಭವಿಷ್ಯ, ಭವಿಷ್ಯೋತ್ತರ, ಸ್ಕಂಧಪುರಾಣ, ಮಾರ್ಕಂಡೇಯ-ಮುಂತಾದವುಗಳ ಕೆಲವು ಭಾಗಗಳನ್ನು ಇನ್ನೂ ಈಚಿನವುಗಳಾಗಿ ಪರಿಗಣಿಸಬೇಕು. ಉದಾ : ಮಾರ್ಕಂಡೇಯ ಪುರಾಣವನ್ನು ಅವರು ತುಳುನಾಡಿನ ಲೇಖನಗಳಲ್ಲಿ ಕ್ರಿಸ್ತಶಕ ೩ನೇ ಶತಮಾನದ್ದೆಂದು ಹೇಳುತ್ತಾರೆ. ಆದರೆ ದೇವಿಮಹಾತ್ಮ್ಯವೇ ಮುಂತಾದ ಭಾಗಗಳುಳ್ಳ ಇದನ್ನು ಕ್ರಿ. ಶ. ೬ರಿಂದ ೧೧ನೆಯ ಶತಮಾನದ ಅವಧಿಗೆ ಸೇರಿಸುವುದು ಸೂಕ್ತ.

ಆದರೆ, ಮಹಾಭಾರತದ ಶಾಂತಿಪರ್ವದಲ್ಲಿ ಹೇಳಲ್ಪಟ್ಟ "ಶೂರ್ಪಾರಕಂ ದೇಶಂ. ಸಾಗರಸ್ತಸ್ಯ ನಿರ್ಮಮೇ...", ಭೀಷ್ಮಪರ್ವದ "ಅಪರಾಂತಾ : ಪರಾಂತಾಶ್ಚ ಪಂಚಾಲಾಶ್ಚರ್ಮ ಮಂಡಲಾಃ", ಮಾರ್ಕಂಡೇಯ ಪುರಾಣದ "ಅಪರಾಂತಿಕಾ ಹೈಹಯಾಶ್ಚ ಶಾಂತಿಕಾವಿಪ್ರಶಸ್ತಕಾ", ಹಾಗೂ ವರಾಹಮಿಹಿರನ ಬೃಹತ್ಸಂಹಿತೆಯಲ್ಲಿನ "ಅಪರಾಂತಕ ಶಾಂತಿಕ ಹೈಹಯ ಪ್ರಶಸ್ತಾದ್ರಿ ವೋಕ್ಕಣಾಃ" ಮುಂತಾದ ಹೇಳಿಕೆಗಳನ್ನು ತರ್ಕಿಸುತ್ತ, ಅಪರಾಂತವನ್ನು ಒಟ್ಟಾರೆ ಕೊಂಕಣವೆಂದೂ, ಶಾಂತಿಕವನ್ನು ಈಗಿನ ತೌಳವರನ್ನೊಳಗೊಂಡ ಪ್ರದೇಶವೆಂದೂ ಗುರುತಿಸುವಲ್ಲಿ ಯಶಸ್ವಿಯಾಗಿದ್ದಾರೆ. ಇವೆಲ್ಲ ಕೃತಿಗಳು ಕ್ರಿ. ಶ ೩ರಿಂದ ೭ನೇ ಶತಮಾನದವರೆಗೆ ಚಾಚಿರುವವುಗಳು. ಪೈಗಳು ಹೇಳುವಷ್ಟು ಪ್ರಾಚೀನವಲ್ಲ. ಹಾಗಾಗಿ ಈ ಕಾಲದವರೆಗೆ ಕೊಂಕಣವು ಉಲ್ಲೇಖಿಸಲ್ಪಟ್ಟರೂ, "ತುಳು", "ತೌಳವ" ವೆನ್ನುವ ಪದ ಎಲ್ಲೂ ಲಭಿಸುವುದಿಲ್ಲ.

ತುಳುನಾಡಿನಂತೆಯೇ ಜನಾಂಗೀಯ ಮೂಲದ ಹುಡುಕಾಟದಲ್ಲಿ ಹೊರಟ ಅವರ ಇನ್ನೊಂದು ಲೇಖನ "ಹೈಗ-ಹೈವೆ". (ಪುಟ೧೧೧೩- ೧೧೨೭) ಈ ಸುದೀರ್ಘ ಲೇಖನದಲ್ಲಿ "ಹೈಗ-ಹೈವೆ" ಯ ಮೂಲವನ್ನು 'ಅಹಿ', 'ನಾಗ'ಕ್ಕೆ ಕೊಂಡೊಯ್ಯುತ್ತಾರೆ. 'ಅಹಿ', 'ಅಹಯ:' ಅಂದರೆ 'ನಾಗಲಾಂಛನ'ದ ಅನಾರ್ಯ ಜನಾಂಗ. ಗರುಡಲಾಂಛನದ ಆರ್ಯರ ವೈರಿಗಳು. ಈ ಆರ್ಯರು

ಉತ್ತರಕನ್ನಡದಲ್ಲಿ ಬಂದು ನೆಲೆಸಿದಾಗ ನಾಗಜನಾಂಗದ ಅನಾರ್ಯ 'ಅಹಿ'ಗಳು ಅವರ ವೈರಿಗಳಾಗಿದ್ದರು. ಈ ಅಹಿ; 'ಅಹಯಃ' ಪದವೇ 'ಹೈಹಯ'ವಾಗಿ ಮಾರ್ಪಟ್ಟಿರಬೇಕು ಎಂದು ಪೈಗಳ ವಾದ. "ಕಾಲಕ್ರಮೇಣ 'ಅಹಯಃ' ಎಂಬ ಆ ನಾಗರು ಆರ್ಯರ ಜಾತಿಗಳಲ್ಲಿ ಹೀರಲ್ಪಡುತ್ತಲೆ, ಹಾಗೂ ಅದರೊಂದಿಗೆ ಅವರಿಗೂ ಅವರ ದೇಶಕ್ಕೂ 'ಅಹಯ' ಎಂಬ ಹೆಸರಾದ ಕಾರಣವೂ ಮರೆತು ಹೋಗುತ್ತಲೇ, ಅಜ್ಞಾತಾರ್ಥವಾದ ದೇಶನಾಮವು ಸುಜ್ಞಾತವಾದ ದೇಶನಾಮದೊಂದಿಗೆ ಸಾಮಾಜಿಕವಾಗಿ ಭ್ರಮಿಸಲ್ಪಡುವ ಲೋಕರೂಢಿಯ ಮೇರೆಗೆ 'ಅಹಯಃ' ಎಂಬ ಆ ದೇಶನಾಮವು ಅದರ ತಕ್ಕಷ್ಟು ಸರೂಪವಾದ ಹಾಗೂ ಸುವಿದಿತವಾದ ನರ್ಮದಾತೀರವರ್ತಿಯಾದ ಹೈಹಯದೊಂದಿಗೆ ಭ್ರಮಿಸಲ್ಪಟ್ಟು ಅದರ ಹೈಹಯ ಎಂಬ ಹೆಸರಿನಿಂದ ನಡೆದುಬಂದಿರಬೇಕು." (ಪು. ೧೦೯.) ಹೀಗೆ ಹೈಹಯದ ಮೂಲ ಅಹಯ=ನಾಗವಂಶದವರು, ಅನಾರ್ಯರು ಎಂಬುದು ಪೈಯವರ ಸಿದ್ಧಾಂತ. ಇದೇ ಅಹಿಕವು ಉತ್ತರ ಕರ್ನಾಟಕದ 'ಹೈಗ'ಕ್ಕೂ ಮೂಲವಾಗಿರಬೇಕೆನ್ನುತ್ತಾರೆ. ಅಹಿತ-ಹಯಿಕ-ಹಯ್ಕ-ಹಯ್ಗ (ಹೈಗ) ಎಂಬ ರೂಪಾಂತರದಿಂದ ಸಂಭವಿಸಿದ್ದು-ಎಂದು ಅವರ ತರ್ಕ. ಇದರ ಇತರ ರೂಪಗಳು 'ಹಯ್ವೆ'-'ಹೈವೆ'-'ಪೈವೆ' ಎಂಬಿತ್ಯಾದಿಗಳು ಕ್ರಿ. ಶ. ೧೦ನೆಯ ಶತಮಾನದಿಂದೀಚೆಗೆ ಲಭಿಸುವುದನ್ನು ಹೇಳುತ್ತಾರೆ.ಇಲ್ಲಿಯೂ ಕೂಡಾ, 'ಹೈವೆ'ಯ ಮೂಲರೂಪ, ಅದರಿಂದ'ಪೈವೆ'ಯು ಹುಟ್ಟಿದ್ದು, ಈ ಪೈವೆಯ ಸಂಸ್ಕೃತರೂಪ 'ಪಶುವ', 'ಪಶುಕ'-ಎಂದೂ ಇದರಿಂದಾಗಿ 'ಗೋರಾಷ್ಟ್ರ' ಎಂದಾಯಿತೆಂದೂ ತರ್ಕಿಸುತ್ತ ಸಾಗುತ್ತಾರೆ.

ಇದೇ 'ಹೈಗ-ಹೈವೆ' ಲೇಖನದಲ್ಲಿ ಗರುಡ "ಅನಾರ್ಯನೋ? ಆರ್ಯನೋ?" ಎಂಬ ಬಗ್ಗೆ ತನ್ನ ಯೋಚನಾಲಹರಿಯನ್ನು ಹರಿಯಬಿಡುತ್ತಾ ಪುರಾಣಗಳಲ್ಲಿ 'ದೇವಯೋನಿಸಂಭೂತ ' ರೆಂದು ಹೇಳಲ್ಪಡುವ ವಿದ್ಯಾಧರರು ಉತ್ತರಾಪಥದ ಆರ್ಯರೆಂದೂ ವಿದ್ಯಾಧರರಾಜನಾದ ಜೀಮೂತಕೇತುವು ತನ್ನಲ್ಲಿ ಮಾರ್ಮಲೆತ ದಾಯಾದಿಗಳಿಗೆ ರಾಜ್ಯಬಿಟ್ಟು ಕೊಟ್ಟು, ಮಗನಾದ ಜೀಮೂತವಾಹನನೊಂದಿಗೆ 'ಸಿದ್ಧವಾಸ'ವಾಗಿದ್ದ ಮಲಯಪರ್ವತಕ್ಕೆ-ಅಂದರೆ, ಗೋಕರ್ಣಕ್ಕೆ ತಪಸ್ಸಾಧನೆಗೆ ಬಂದು ಸೇರಿದನೆಂದು'ನಾಗಾನಂದ', 'ಕಥಾಸರಿತ್ಸಾಗರ',ಬೃಹತ್ಸಂಹಿತೆ'ಮುಂತಾದ ಕ್ರಿ. ಶ. ೬-೭ ಶತಕಗಳ ಅವಧಿಯ ಕೃತಿಗಳ ಆಧಾರದಲ್ಲಿ ವಿವರಿಸುತ್ತಾರೆ. "ವಿದ್ಯಾಧರರಂತೆ ಸಿದ್ಧರೂ ಮೂಲತಃ ಉತ್ತರಾಪಥದ ಆರ್ಯರೇ ಸರಿ." (ಪು. ೧೦೪.) ಎಂದನ್ನುತ್ತಾರೆ. ಮಲಯಪರ್ವತದ ಮೂಲವಾಸಿಗಳು ನಾಗರೆನ್ನುತ್ತಾರೆ. ಈ ಕತೆಗಳಲ್ಲಿ ಬರುವ ಸಿದ್ಧರಾಜನ ಸೇನಾಧ್ಯಕ್ಷನಾದ'ಗರುಡ'ನು ನಾಗರನ್ನುಕೊಲ್ಲುವ ಆರ್ಯರಾದ ಸಿದ್ಧರ ಆರ್ಯಸೇನಾನಿಯಾಗಿರಬೇಕೆಂದು ಪೈಯವರು ತೀರ್ಮಾನಿಸುತ್ತಾರೆ.

"ಆತನ 'ಗರುಡ' ಎಂಬ ಹೆಸರಾದರೂ ಆತನಿಗೆ.....ಸ್ವಾಮಿಭಕ್ತಿಯ ದ್ಯೋತಕವಾಗಿ ಬಂದಿರಬಹುದಾದ ಅಧಿಕಾರ ಸಂಬಂಧಿಯಾದ ಸಂಜ್ಞೆಯಲ್ಲದೆ ಅದು ಜಾತಿವಚನವೂ ಅಲ್ಲ,

ಅಂಶಿತನಾಮ ಹೇಗೂ ಅಲ್ಲ. ಏಕೆಂದರೆ ಪಡುವಣ ಚಾಳುಕ್ಯರ ಹಾಗೂ ಹೊಯ್ಸಳರ ಕಾಲದ ಶಾಸನಗಳಿಂದ ಅರಸರಿಗೆ ಗರುಡರೆಂಬ ಆಪ್ತರಾದ ಅಂಗರಕ್ಷಕರಿದ್ದರೆಂದೂ, ಆ ಯೋಧರು ತಂತಮ್ಮ ಅರಸರ ಬಗ್ಗೆ ಯಾವ ಕೆಲಸವನ್ನಾದರೂ ಮಾಡುವುದೆ ಅಲ್ಲ, ಕೊನೆಗೆ ಆ ಅರಸರು ಸಾವಂದು ಅವರ ಸಂಗಾತ ತಾವೂ ಸಾಯುತ್ತಿದ್ದರೆಂದೂ ತಿಳಿಯುತ್ತದೆ.'' ಪೈಯವರ ಈ ಮಾತುಗಳು ಮನುವನ್ನು ನೆನಪಿಸುತ್ತವೆ. ಮನು ಕೂಡಾ 'ಗರುಡರು'- ಎಂದು ಬಹುವಚನದಲ್ಲಿ, 'ಸೇನಾಬಲ' ವೆನ್ನುವ ಅರ್ಥದಲ್ಲಿ ಶಬ್ದವನ್ನು ಬಳಸಿದ್ದ.

ಹಾಗಾಗಿ ಪೈಯವರ ಈ ಅರ್ಥ, ಯೋಚಿಸುವಂತದ್ದು. ನಮ್ಮ ಪ್ರದೇಶದ ದೇವಾಲಯಗಳಲ್ಲಿ 'ಗರುಡಗಂಬ'ವಿದೆ. ಅದು ಕೇವಲ ವಿಷ್ಣುವಿಗಲ್ಲ. ಶಿವ, ದುರ್ಗೆ, ಸ್ಕಂಧ - ಎಲ್ಲರದ್ದೂ ಧ್ವಜಸ್ತಂಭ, ಗರುಡಗಂಬವೇ. ಉತ್ಸವದ ಸಮಯದಲ್ಲಿ ಧ್ವಜಾರೋಹಣವನ್ನು 'ಗರುಡನನ್ನೇರಿಸುವುದು' ಎಂದು ಹೇಳುವುದು ವಾಡಿಕೆ, ವಿಷ್ಣುವಿಗೆ ಹಕ್ಕಿಗರುಡ. ಶಿವನಿಗೆ ನಂದಿ, ದುರ್ಗೆಗೆ ಸಿಂಹ, ಸ್ಕಂಧನಿಗೆ ನವಿಲು-ಹೀಗೆ ಗರುಡರು. ಇಲ್ಲಿ ಗರುಡನೆಂದರೆ ಸೇವಕ, ಸೇನಾನಿಯೆಂದೇ ಅರ್ಥವಲ್ಲವೇ? ಹಾಗಾಗಿ ಇಲ್ಲಿ ನಾವು ಪೈಯವರ ಅಭಿಪ್ರಾಯವನ್ನು ಅಮೂಲ್ಯ ವಿಶ್ಲೇಷಣೆಯೆನ್ನಬಹುದು.

ಆದರೆ, ಅವರ ಹೈಗ-ಹೈವೆಯ ನಿಷ್ಪತ್ತಿ, ಗರುಡ ಆರ್ಯನೆನ್ನುವುದು-ಇವನ್ನು ಒಪ್ಪಬಹುದು, ಒಪ್ಪದಿರಬಹುದು. ಕಾರಣ-ಪುರಾಣಗಳು ಮತ್ತು ಕಾವ್ಯಗಳ ಆಧಾರಗಳನ್ನು ಐತಿಹಾಸಿಕ ಜನಾಂಗಗಳ ಪ್ರಮಾಣಗಳಾಗಿ ಅದೆಷ್ಟು ಬಳಸಿಕೊಳ್ಳಲು ಸಾಧ್ಯವಾದೀತು ಎನ್ನುವ ಸಂದೇಹ ಉಳಿದೇ ಉಳಿಯುತ್ತದೆ. ಅಲ್ಲದೆ ಗರುಡ-ಆರ್ಯ, ನಾಗ-ಅನಾರ್ಯ,-ಹೀಗೆನ್ನುವಾಗ, ಈ ಎರಡೂ ಸಂತಾನ ಸುಪರ್ಣಾ ಮತ್ತು ಕದ್ರುವಿನ ಮಕ್ಕಳು ಕಶ್ಯಪನದ್ದೇ ಸಂತತಿಯೆಂದು ಪುರಾಣಗಳೇ ಹೇಳುತ್ತವೆ. ಸುಪರ್ಣಾ ಮತ್ತು ಕದ್ರು ಕಶ್ಯಪನ ಹೆಂಡಂದಿರು. ಹಾಗೆ ನೋಡುವುದಾದರೆ ಕಶ್ಯಪ=ಕಪ್ಪೆ, ಅರ್ಥಾತ್ ಕಪ್ಪೆಯ ಸಂತಾನವೇ? ತೈತ್ತಿರೀಯ ಸಂಹಿತೆಯಿಂದ ಹಿಡಿದು ಮಹಾಭಾರತದಲ್ಲೂ ಹೇಳಲ್ಪಡುವ ಈ 'ಸುಪರ್ಣಾ-ಕದ್ರು' ಕತೆ ಪ್ರಧಾನವಾಗಿ ಸುಪರ್ಣಾ=ಸೂರ್ಯನ ತೇಜಸ್ಸು ಎಂದೂ, ಕದ್ರು (ಕಂದುಬಣ್ಣ)=ಭೂಮಿಯೆಂದೂ, ಸುಪರ್ಣೀಯ ಮಗ ಗರುಡನೆಂದರೆ ಎಲ್ಲ ವಿಷವನ್ನು ಸುಟ್ಟುಹಾಕುವ, ಅಮೃತದ ಸಂಕೇತ ಸೂರ್ಯನ ತಾಪ ಅಗ್ನಿ ಇತ್ಯಾದಿಯೆಂದೂ, ಕದ್ರುವಿನ ಮಕ್ಕಳು ನಾಗರೆಂದರೆ ವಿಷಜನ್ಯವಾದ ಭೂಮಿಯ ಸಂತತಿಯೆಂಬ ಸಂಕೇತಾರ್ಥದಲ್ಲಿ ಬಳಸಿರುವುದನ್ನು ಮರೆಯುವಂತಿಲ್ಲ. ಒಂದು ಆಕಾಶತತ್ವವನ್ನು ಪ್ರತಿನಿಧಿಸಿದರೆ, ಇನ್ನೊಂದು ಭೂಮಿಯನ್ನು, 'ದ್ಯಾವಾ-ಪೃಥಿವೀ' ಸಿದ್ಧಾಂತವಿಲ್ಲಿ ಎದ್ದುನಿಲ್ಲುತ್ತದೆ. ಹೀಗಿದೆ'ಗರುಡ-ನಾಗ' ದ್ವಂದ್ವಕಲ್ಪನೆ. ಇದನ್ನು ಆರ್ಯ-ಅನಾರ್ಯ ಜನಾಂಗಕ್ಕೆ ಎಳೆತರುವುದು ೨೦ನೆಯ ಶತಮಾನದ ಈ ಜನಾಂಗ ಸಮಸ್ಯಾಪೀಡಿತರಾದ ನಮ್ಮ ಬರೀ ಊಹೆಯಾದೀತಷ್ಟೆ!

ಪೈಯವರ ವಿದ್ವತ್ಪೂರ್ಣ ವಿಮರ್ಶೆಯಿಂದ ಗಮನಸೆಳೆಯುವ ಇನ್ನೊಂದು ಲೇಖನ **ತಿಂಗಳು**. (ಪುಟ ೧೦೪೭-೧೦೫೫) **ಚಂದ್ರ**, 'ತಿಂಗಳು'-ಇದಕ್ಕೆ ಸಂಬಂಧಿಸಿದ ವಿಶ್ಲೇಷಣೆಯ ಈ ಲೇಖನದಲ್ಲಿ whitney, maedonnel ಮುಂತಾದ ಪಾಶ್ಚಾತ್ಯ ವಿದ್ವಾಂಸರು ಹಾಗೂ ಯಾಸ್ಕ, ಸಾಯಣ ಮುಂತಾದವರು-ಋಗ್ವೇದ, ಯಜುರ್ವೇದ ಮತ್ತು ಅಥರ್ವವೇದದಲ್ಲಿ ಅನೇಕ ಕಡೆಗಳಲ್ಲಿ ಹೇಳಲ್ಪಡುವ 'ಸಿನಿವಾಲೀ' ಎಂಬ ದೇವತೆಯ ಬಗ್ಗೆ ಅರ್ಥೈಸುವುದನ್ನು ಪೈಯವರು ವಿಮರ್ಶಿಸುತ್ತಾರೆ. 'ಸಿನ್' ಎಂಬ ದೇವತೆ ಪ್ರಾಚೀನ ಸುಮೇರಿಯನ್, ಗ್ರೀಕ್, ರೋಮನರ ಪುರಾಣಗಳಲ್ಲೂ ನಾವು ಕಾಣುತ್ತೇವೆ. ಸುಮೇರಿಯನ್ ಮತ್ತು ಅಸ್ಸೀರಿಯನರಲ್ಲಿ 'ಸಿನ್' ಎಂಬ ಚಂದ್ರದೈವತೆ ಹೆಣ್ಣಲ್ಲ, ಗಂಡು, ಹಿರಿಯ, ಎತ್ತರದ 'ಬೇಲ್' (Bel) ಎಂಬ ಭೂದೈವತದ ಮಗ. 'ಶಮಸ್' (ಸೂರ್ಯ) ಹಾಗೂ 'ಇಷ್ಟರ್' ಎಂಬ (ಸಂಜೆಯ ನಕ್ಷತ್ರ) ಹೆಣ್ಣು ದೈವತದ ಮಗನೆಂದೂ ಹೇಳಲ್ಪಟ್ಟಿದೆ. ಕ್ರಮೇಣ ಪಾಶ್ಚಾತ್ಯರಲ್ಲಿ ಚಂದ್ರ ಹೆಣ್ಣಾಗಿ ಗ್ರಹಿಸಲ್ಪಡುವುದು. ಪ್ರಾಚೀನ ವೇದದಲ್ಲೂ ಚಂದ್ರ ಗಂಡಾಗಿದ್ದಾನೆ. ಆದರೆ 'ಸಿನಿವಾಲೀ' ಹೆಣ್ಣಾಗಿದ್ದಾಳೆ. ಆದರೆ ಚಂದ್ರನ ಅನೇಕ ಲಕ್ಷಣಗಳು ಈಕೆಯಲ್ಲೂ ಇದೆ. ಚಂದ್ರ (ಸೋಮ)ನಿಗೆ ಸಂಬಂಧಿಸಿದ ಫಲೀಕರಣ, ಮೃತ್ಯುಕಾರಕಶಕ್ತಿ, ಔಷಧ, ರಸೋತ್ಪತ್ತಿ,-ಇತ್ಯಾದಿ ಗುಣಗಳು ಇವಳಲ್ಲೂ ಕಾಣುತ್ತವೆ. ಈ ಗುಣಗಳು 'ಸಿನ್' ದೈವತದಲ್ಲಿ ಗ್ರೀಕ್, ಬೆಬಿಲೋನ್, ರೋಮನ್ ಮತ್ತು ಮುಂದಿನ ಸೆಮಿಟಿಕ್ ಧರ್ಮಗಳಲ್ಲೂ ಕಾಣುತ್ತವೆ. ಮಾತ್ರವಲ್ಲ ಚಂದ್ರನಿಗೆ ಈ ಗುಣಗಳನ್ನು ಇನ್ನೂ ಜಗತ್ತಿನ ಅನೇಕ ಧರ್ಮಗಳು ಆರೋಪಿಸಿವೆ. ಪ್ರಾಚೀನ ಐಗುಪ್ತರಲ್ಲಿ Hather ಅಥವಾ Isis ಚಂದ್ರದೇವತೆ ಹೆಣ್ಣು, ಸೆಮಿಟಿಕ್ ಈವ್ ಕೂಡಾ ಮೂಲದಲ್ಲಿ ಚಂದ್ರ. ಆದಮ್ ಸೂರ್ಯನಾಗಿದ್ದವ. ಈವ್‌ನ ಮತ್ತೊಂದು ಹೆಸರು chawwa=ಉರುಟಾಗಿರುವವಳು, ಅಂದರೆ ಬಿಂಬಮಾತ್ರರೂಪಿಣಿ, (Rabbanical Tradition) ಸೊಲೊಮನ್ ದ್ವೀಪದವರು, ಮಯೋರಿ ಜನಾಂಗದವರು, ಬುಶ್‌ಮನರು, ಅವಳನ್ನು ಮೃತ್ಯುಕಾರಿಣಿಯಾಗಿ ಭಾವಿಸಿದ್ದರು. ಬುಶ್‌ಮನರು ಬಾಲಚಂದ್ರಮಳನ್ನು ಕಾಣುತ್ತಲೇ ಆಕೆಯೆಡೆಗೆ ಮರಳೆಸೆಯುತ್ತಿದ್ದರು- ಅನಿಷ್ಟ ನಿವಾರಣೆಗೆ ಬೊಬ್ಬಿಡುತ್ತಿದ್ದರು. ಮನೆಯೊಳಗೆ ಹೊಸಚಂದ್ರನ ಕಿರಣ ಪ್ರವೇಶಿಸಬಾರದೆಂಬ ನಂಬಿಕೆ ಆಫ್ರಿಕನರಲ್ಲಿ ಕಾಣುತ್ತೇವೆ. ಅವರ ಮನೆಯ ಬಾಗಿಲಿಗೆ ಚಂದ್ರಕಿರಣ ಬೀಳದಂತೆ ವಾಸ್ತುವಿರಬೇಕು. ಮೊದಲಚಂದ್ರ ಮತ್ತು ಪೂರ್ಣಚಂದ್ರ- ಎರಡೂ ಅನಿಷ್ಟಕಾರಿ.

ಸೆಮಿಟಿಕ್ ಧರ್ಮಗಳ ಆದ್ಯಂತ ವ್ಯಾಪಿಸಿದ Sinn=ಚಂದ್ರದೇವತೆಯ ವೈವಿಧ್ಯಮಯ ಪ್ರಭಾವವನ್ನು ಪೈಯವರು ಗುರುತಿಸಿದಂತಿಲ್ಲ. ಸ್ವರ್ಗಾಧಿಪತಿ 'ಶಮಸ್', ಸೂರ್ಯದೇವತೆ (ಮುಂದೆ Helios ಆಗುತ್ತಾನೆ.) Sinnನ ಚಾರಕನಾಗಿದ್ದನಷ್ಟೆ. ಕ್ರಮೇಣ ಈ Sinnನ ಸಾರ್ವಭೌಮತ್ವ ಆತನ ಸ್ತ್ರೀರೂಪಕ್ಕೆ ವರ್ಗಾಯಿಸಲ್ಪಡುವುದು. ಆತನೇ ಆಕೆಯಾಗುತ್ತಾಳೆ. ಸೃಷ್ಟಿಕರ್ತೆ, ಜಗನ್ಮಾತೆ,-ಇಷ್ಟರ್, 'ನಾನಾ -ಇಷ್ಟರ್', 'ಲೂನಾ-ಇಷ್ಟರ್' (ಕೋಡುಳ್ಳವಳು

ಬಾಲಚಂದ್ರಕೃತಿ.) ಆಗುತ್ತಾಳೆ. ನಮ್ಮ ಲಕ್ಷ್ಮಿಯಂತೆ ಫೇನಜಾತೆ. ಗ್ರೀಕ್ ಅಫ್ರೊಡೈಟ್‌ನಂತೆ ಅಪ್ಸರೆಯರಿಂದ ಪೋಷಿಸಲ್ಪಟ್ಟವಳು. ಭಾರತದ ಆದಿಮಾತೆಯಂತೆ ತ್ರ್ಯಂಬಕೆ, ಸುಫಲಾ, ಕ್ಷೇತ್ರಪಾಲಿನಿ. ಸಿರಿಯನರ ಪ್ರಕಾರ ಸಸ್ಯದೇವತೆಯಾದ Tammuz ಅಥವಾ Adonis ಆಕೆಯ ಪುತ್ರ-ಪತಿ. ವರ್ಷಂಪ್ರತಿ ಹುಟ್ಟಿ ಸಾಯುತ್ತಿರುವವನು. ಈ Tammuz ಬೆಬಿಲೋನಿನ ಅತ್ಯಂತ ಪ್ರಾಚೀನ ದೇವತೆ. ಹಿಬ್ರೂಗಳ "ಯೆಹ್ವೆ"ಯ ಮೂಲ ಈ Tammuz ನಲ್ಲಿ ಕಾಣಬೇಕು. ಮುಂದಿನ ಕ್ರಿಸ್ತಧರ್ಮದ 'Divine Son' ಸತ್ತು ಮತ್ತೆ ಬದುಕಿಬರುವ ಕಲ್ಪನೆಯ ಮೂಲ Tammuz ನದ್ದು, ಪ್ರಾಚೀನ ಗ್ರೀಕರು, ಅರ್ಕಾಡಿಯನರು, ಸ್ಪಾರ್ಟನರು. ಇವರೆಲ್ಲ ಮೂಲತಃ ಚಂದ್ರಾರಾಧಕರು. ಗ್ರೀಕ್ 'Athene' ಚಂದ್ರನನ್ನು ಗುರಾಣಿಯಲ್ಲಿ ಧರಿಸಿದವಳು. ಅದರ ಸುತ್ತ ಚಾಂದ್ರಸರ್ಪಗಳು ಈ ದೇವತೆಯ ಪೂಜಾರಿಣಿ ಚಂದ್ರಮಂಡಳವನ್ನು ಧರಿಸುತ್ತಿದ್ದಳು. ಪೂರ್ಣಚಂದ್ರನ ಕಲೆಯು ಸರ್ಪ. ಅದು ಮುಂದೆ Satan ಆಗುತ್ತದೆ ಸೆಮಿಟಿಕ್ ಧರ್ಮಗಳಲ್ಲಿ.

ಪೈಗಳ 'ಚಂದ್ರ', 'ಸಿನಿವಾಲಿ', 'ತಿಂಗಳು' ಲೇಖನದಲ್ಲಿ ಈ ಅಂಶಗಳು ಇಲ್ಲ. ಆದರೆ ಅವರು ಆರಂಭಿಸಿದ ವಿಮರ್ಶೆಯನ್ನು ಹೆಚ್ಚು ವ್ಯಾಪಕವಾಗಿ, ನಾನು ಇದುವರೆಗೆ ಹೇಳಿದ ಉದಾಹರಣೆಗಳ ಹಿನ್ನೆಲೆಯಲ್ಲಿ ನೋಡುವ ಅಗತ್ಯವಿದೆ. ಆದರೂ ಪೈಯವರು ಈ ಬಗ್ಗೆ ಹೊಸದಾಗಿ ಚಿಂತಿಸುವ ಮಾರ್ಗವನ್ನು ಆರಂಭಿಸಿದ್ದು ಮಹತ್ವಪೂರ್ಣ ಹೆಜ್ಜೆ.

ಇದೇ ಲೇಖನದ 'ಅಮವಾಸ್ಯೆ'ಯ ವಿಶ್ಲೇಷಣೆಯೂ ಮಹತ್ವಪೂರ್ಣವಾದದ್ದು. ಅ+ಮಾ (ಮಾ=ಚಂದ್ರ) ಅಂದರೆ ಚಂದ್ರರಹಿತ ರಾತ್ರಿಯ ಅರ್ಥದಿಂದಲ್ಲ, "ಅಮಾಃ" (=ಒಟ್ಟಿಗೆ, ಒಂದೇ ಮನೆ, ಸಮೀಪ) ಪದದಿಂದ ಬಂದದ್ದು 'ಅಮಾವಾಸ್ಯೆ'-ಎನ್ನುವುದು ಪೈಯವರ ತೀರ್ಪು. ಪ್ರಮಾಣವಾಗಿ ಅವರು ಅಮರವಿವೇಕ, ಶಬ್ದಕಲ್ಪದ್ರುಮ, ಅಭಿದಾನ ಚಿಂತಾಮಣಿ ಮುಂತಾದ ಮಧ್ಯಕಾಲೀನ ಕೃತಿಗಳನ್ನು ಉಲ್ಲೇಖಿಸುತ್ತಾರೆ. ಪ್ರಾಯಃ ಅವರ ಅಭಿಪ್ರಾಯವನ್ನೇ ಪೂರ್ವದ ಅಥರ್ವವೇದ (VII.೭೯) ಶತಪಥ ಬ್ರಾಹ್ಮಣ (I೬. ೪. ೫.) ಇತ್ಯಾದಿಗಳೂ ಪುಷ್ಟೀಕರಿಸುವುದನ್ನು ಅವರು ಗಮನಿಸಿಲ್ಲ. ಚಂದ್ರನು ನೀರು, ರಸ, ಔಷಧಿಯ ಸಮೀಪಕ್ಕೆ ಬರುವಾಗ, ಚಂದ್ರ-ಸೂರ್ಯರು ಒಟ್ಟಾಗಿರುವಾಗ, ಚಂದ್ರನು ಸೂರ್ಯನಿಂದಲೇ 'ದರ್ಶ' ನಾಗುವಾಗ -ಇತ್ಯಾದಿ ಅರ್ಥವನ್ನು ಇವೂ ನೀಡುತ್ತವೆ.

ಅಥರ್ವವೇದದಲ್ಲಿ 'ಪೂರ್ಣಮಾಸೀ' ಮತ್ತು 'ಅಮಾವಾಸ್ಯಾ' ಪದಗಳು ಅನೇಕ ಕಡೆ ಸಿಗುತ್ತವೆ. 'ಪೂರ್ಣಮಾಸೀ' ಅಂದರೆ ಮೊದಲನೆಯ ದಿನವೆಂದೂ ಸ್ಪಷ್ಟವಾಗಿ ಅಲ್ಲಿ ಹೇಳಿದೆ. ಇಲ್ಲಿ 'ಮಾಸೀ', 'ಮಾಸ್', 'ಮಾದ್ವಿಶ್' (ಋ) 'ಮಾಸ್ಸು' (ಪಂಚವಿಂಶ ಬ್ರಾಹ್ಮಣ) ಮಾಸು (ತೈ.ಸಂ) ಅನ್ನುವುದು ಚಂದ್ರನಿಗೇ ಅನ್ವಯಿಸುವ ಪದ. ಇಂಡೋ-ಯುರೋಪಿಯನ್ ಭಾಷೆಗಳಲ್ಲಿ ಗ್ರೀಕ್-'ಮಾಸ್', ಲ್ಯಾಟಿನ್- 'ಮೀನ', ಸ್ಲೇವಿಕ್-ಮೆನ್ಸಿಸ್, ಜರ್ಮನ್- 'ಮೇನ', ಲಿಥುವೇಸಿಯನ್-'ಮೆಸೆರೆ', ಇಂಗ್ಲಿಷ್- 'ಮೂನ್'-ಇತ್ಯಾದಿ. ಮಾಸ=ಚಂದ್ರ, ಕಾಲವನ್ನು

ಅಳೆಯುವವ, ವಿಂಗಡಿಸುವವ, 'ಮಾಪಕ'. ಹಾಗಿರುವಾಗ ಅಮಾವಾಸ್ಯೆಯೂ ಚಂದ್ರಸಂಬಂಧಿಯಾಗಿಯೇ ಅರ್ಥೈಸಲ್ಪಡಬೇಕಲ್ಲವೇ? ಇಲ್ಲಿ ನನಗೆ ಪೈಯವರು ಬೇಂದ್ರೆಯವರ (ಚಂದ್ರಸಂಬಂಧಿ ಎಂದು ತಿಳಿಯುವ) ಅರ್ಥವನ್ನು ತಳ್ಳಿಹಾಕುವುದು ಸರಿಯಲ್ಲವೆನ್ನಿಸುತ್ತದೆ. ಇದನ್ನು ಪುಷ್ಟೀಕರಿಸಲು ತೈತ್ತಿರೀಯ ಬ್ರಾಹ್ಮಣದ ವಾಕ್ಯ ಗಮನಿಸತಕ್ಕದ್ದು: ಚಂದ್ರಮಾ ವೈ ಪಂಚದಶಃ I ಏಷಹಿ ಪಂಚದಶಾಮ ಪಕ್ಷೀಯತೇ। ಪಂಚದಶ್ಯಾಮಾ ಪೂರ್ಯತೇI (ತೈ. ಬ್ರಾ.I. ೫. ೧೦. ೫)=ಚಂದ್ರನು ೧೫ನೇ ದಿನಕ್ಕೆ ಪೂರ್ತಿ ಕರಗಿ ಮತ್ತೆ ೧೫ನೇ ದಿನದಂದು ಪೂರ್ತಿ ತುಂಬಿ ಬರುವದನ್ನಿದು ಹೇಳುತ್ತದೆ. ಅಂದರೆ ಅ+ಮಾ=ಚಂದ್ರನಿಲ್ಲದ ೧೫ನೆಯ ದಿನವೇ ಅಮಾವಾಸ್ಯೆ ಎಂಬ ಅರ್ಥವಲ್ಲವೇ? ಒಟ್ಟು ಮಾಸದ ೩೦ ದಿನಗಳನ್ನು ಪೂರ್ಣಮಾಸಿಯಿಂದ ಆರಂಭಿಸಿ ೪ ವಿಭಾಗ ಮಾಡಿದಾಗ, ೧) ಪೂರ್ಣಮಾಸಿ, 'ಅಷ್ಟಕ', 'ಅಮಾವಾಸೀ', ಮತ್ತೆ ಅಷ್ಟಕ, ಮತ್ತು ಪೂರ್ಣಮಾಸೀ-ಹೀಗೆ ನಾಲ್ಕು. ಈ ಸಂಪ್ರದಾಯ ಬ್ರಾಹ್ಮಣಗಳ ಕಾಲದ್ದು.

ಪ್ರಾಯಃ ಪೈಗಳು ನೀಡುವ ಅರ್ಥ ಮುಂದಿನ ಕಾಲದ ಬೆಳವಣಿಗೆ. ಯಜ್ಞಕ್ಕೆ ಸಂಬಂಧಿಸಿ 'ದರ್ಶಪೂರ್ಣಮಾಸ', 'ಸೋಮಸಹಿತ ಚಂದ್ರ' ನಿರುವ ದಿನ, ಔಷಧಿ, ನೀರು ಉಕ್ಕಿಬರುವ ದಿನ:-ಇತ್ಯಾದಿ ಯಜ್ಞಗಳಿಗೆ ಪ್ರಶಸ್ತವಾದ ದಿನವೆಂದು ಹೇಳಲು ಬಳಸಿಕೊಂಡ ಅರ್ಥವಾಗಿರುವ ಸಾಧ್ಯತೆಯೇ ಹೆಚ್ಚೆಂದು ನನಗನ್ನಿಸುತ್ತದೆ. ಮೂಲದಲ್ಲಿ ಅದು ಅ+ಮಾ=ಚಂದ್ರನು ಕಾಣದ ದಿನವಾಗಿಯೇ ಇದ್ದಿರಬೇಕು. 'ಪೂರ್ಣಮಾಸಿ'ಯು ಹಿಂದಿನ ಚತುರ್ದಶಿ ತಿಥಿಯ ಜತೆಗೆ "ಅನುಮತಿ"; ಮುಂದಿನ ಪ್ರತಿಪದೆಯ ಜತೆ "ರಾಕಾ"; ಅಮಾವಾಸಿಯು ಹಿಂದಿನ ಚತುರ್ದಶಿಯ ಜತೆಗೆ "ಸಿನಿವಾಲೀ", ಮುಂದಿನ ಪ್ರತಿಪದೆಯ ಜತೆಗೆ "ಕುಹೂ" ಇತ್ಯಾದಿ ಬ್ರಾಹ್ಮಣಗಳಲ್ಲಿ ಹೇಳುವ ವಿವರಗಳನ್ನು ಗಮನಿಸಬೇಕು.

ಮಂಜೇಶ್ವರ ದೇವಸ್ಥಾನದ ಪ್ರಾಚೀನತೆ (ಪುಟ ೬೯೩-೭೦೩)ಎಂಬ ಇನ್ನೊಂದು ಲೇಖನವೂ ಇತಿಹಾಸದ ಬೆಳಕಿನಲ್ಲಿ ಮತ್ತೊಮ್ಮೆ ಪರಿಶೀಲಿಸಬೇಕಾದ ಲೇಖನ. ಇದರಲ್ಲಿ ಸ್ಕಂಧಪುರಾಣದ ಒಂದು ಖಂಡವಾದ ಸಹ್ಯಾದ್ರಿಖಂಡ ಪುರಾಣದ ಒಂದನೆಯ ಮತ್ತು ಮೂರನೆಯ ಅಧ್ಯಾಯವು ತೀರ ಪ್ರಾಚೀನವೆಂದೂ, ಇದರಲ್ಲಿ ಬರುವ ಮಂಜುಳಕ್ಷೇತ್ರ ಮಹಾತ್ಮ್ಯಕ್ಕೆ ಸಂಬಂಧಪಟ್ಟ ಕಥಾನಕವು "ಕ್ರಿಸ್ತಶಕ ಕ್ಕೆ ಹಿಂದಣ ಕಾಲದ್ದಾಗಿರಬೇಕು" ಎಂದು ಪೈಗಳು ಹೇಳುತ್ತಾರೆ. ಈ ತೀರ್ಮಾನ ಖಂಡಿತವಾಗಿಯೂ ಒಪ್ಪಲು ಸಾಧ್ಯವಿಲ್ಲ. ಹೆಚ್ಚೆಂದರೆ ಇವು ಕ್ರಿ. ಶ. ೧೦-೧೧ನೇ ಶತಮಾನದಕ್ಕಿಂತ ಪೂರ್ವಕ್ಕೆ ಕೊಂಡೊಯ್ಯಬಹುದು ಅಷ್ಟೆ. ಇವುಗಳಲ್ಲಿ ದಕ್ಷಿಣಕನ್ನಡದ ಅನೇಕ ಕ್ಷೇತ್ರಗಳ ಪ್ರಸ್ತಾಪವಿದೆಯಾದರೂ ಉಡುಪಿಯ ಕೃಷ್ಣನ ಪ್ರಸ್ತಾಪವಿಲ್ಲ. ಆದರೆ 'ಅನಂತೇಶ್ವರ', ಅಥವಾ ಅನಂತಾಸನನ ಉಲ್ಲೇಖವಿದೆ. ಹಾಗೆಯೇ, ಗೋಕರ್ಣ, ಕುಟಚಾದ್ರಿ, ಕೊಲ್ಲೂರು, ಕ್ರೋಧಾಶ್ರಮ, ಶಂಕರ-ನಾರಾಯಣ, ವಿಧೋಃಕ್ಷೇತ್ರ (ಉಡುಪಿ, ಚಂದ್ರೇಶ್ವರ ದೇವಾಲಯ) ಕದ್ರಿಯ ಮಂಜುನಾಥ ಇತ್ಯಾದಿಗಳ ಉಲ್ಲೇಖವಿದ್ದು-ಇವು ಯಾವುವೂ ಕ್ರಿಸ್ತ ಪೂರ್ವದವುಗಳು

ಖಂಡಿತ ಅಲ್ಲ. ಇದರಲ್ಲಿ ಬರುವ ವಿರೂಪಾಕ್ಷ ಬ್ರಾಹ್ಮಣನು ಈಯೆಲ್ಲ ಕ್ಷೇತ್ರಗಳನ್ನು ಸಂದರ್ಶಿಸಿದ್ದ. ಆದರೆ ಅದರಲ್ಲಿ ಮಂಗಳೂರಿನ ಉಲ್ಲೇಖವಿಲ್ಲ. ಈ ಕಾರಣಕ್ಕಾಗಿ ಪೈಯವರು ಅವನನ್ನು ಕ್ರಿ. ಪೂ. ಕ್ಕೆ ಒಯ್ಯುತ್ತಾರೆ. ಅವರು ನೀಡುವ ಕಾರಣ, ಸುಮಾರು ಕ್ರಿಸ್ತಶಕ ೧೫೦ರ ಕಾಲದ Ptolemyಯು ಮಂಗಳೂರನ್ನು Managanaur ಎಂದು ಹೆಸರಿಸಿದ್ದಾರೆ. ಹಾಗಾಗಿ ವಿರೂಪಾಕ್ಷ ಅದಕ್ಕೂ ಹಿಂದಕ್ಕೆ ಬಂದವನು-ಎಂದು. ಒಂದು ಪುರಾಣದಲ್ಲಿ ಹೆಸರಿಲ್ಲವೆಂದ ಮಾತ್ರಕ್ಕೆ ಉಳಿದೆಲ್ಲ ಅಂಶಗಳನ್ನು ಕಡೆಗಣಿಸಿ ಒಮ್ಮೆಲೇ ಸಹಸ್ರ ವರ್ಷಗಳಷ್ಟು ಹಿಂದಕ್ಕೆ ಅದನ್ನು ತಳ್ಳುವುದು ಎಷ್ಟು ಸಮಂಜಸವಾದೀತು? ಇದೇ ಪುರಾಣದಲ್ಲಿ ಹೇಳಿರುವ ಅನೇಕ ದೇವಸ್ಥಾನಗಳು ಕ್ರಿ. ಪೂ. ೭ನೇ ಶತಮಾನಗಳಿಗಿಂತ ಈಚಿನವುಗಳೆನ್ನುವುದನ್ನೂ ಮರೆಯಬಾರದು. ಈ ಸ್ಕಂಧಪುರಾಣದ ಬೇರೆ ಬೇರೆ ಪ್ರತಿಗಳು ಸುಮಾರು ೮೬,೦೦೦ ದಿಂದ ೧ ಲಕ್ಷ ಶ್ಲೋಕಗಳನ್ನು ಒಳಗೊಂಡವುಗಳು. ಬೇರೆ ಬೇರೆ ಕಾಲದಲ್ಲಿ ಹಿಗ್ಗುತ್ತ ಹೋದ ಗ್ರಂಥವಿದು. ಹೆಚ್ಚಿನವುಗಳು ಕ್ರಿ. ಶ. ೭-೯ ಶತಮಾನದ ಅವಧಿಯಲ್ಲಿ ಸೇರಿಕೊಂಡವುಗಳು-ಎಂದು ಡಾ. ಪಿ. ಪಿ. ಕಾಣೆಯವರು ಹೇಳುತ್ತಾರೆ. ಅದರ ಮಂಜುಳಕ್ಷೇತ್ರ ಮಹಾತ್ಮ್ಯವು ಅಷ್ಟು ಪ್ರಾಚೀನವಲ್ಲ. (History of Dharmashastras vol V part II page 912). ಹೀಗಿರುವಾಗ ಪೈಯವರ ಮಂಜೇಶ್ವರ ದೇವಸ್ಥಾನದ ಪ್ರಾಚೀನತೆಯ ಅಭಿಪ್ರಾಯ ಒಪ್ಪಲು ಸಾಧ್ಯವಿಲ್ಲವೆಂದು ನನ್ನ ಅಭಿಪ್ರಾಯ.

ನನಗೆ ಖುಷಿಕೊಟ್ಟ ಇನ್ನೊಂದು ಲೇಖನ ಕದಿರೆಯ ಮಂಜುನಾಥನಿಗೆ ಸಂಬಂಧಿಸಿದ್ದು. ಇಲ್ಲಿ ಪೈಯವರ ತೀರ್ಪನ್ನು ನಾನು ಪೂರ್ತಿ ಅನುಮೋದಿಸುತ್ತೇನೆ. (ಪುಟ ೫೮)ಮಹಾಯಾನ ಪಂಥದ ಬೋಧಿಸತ್ವರಲ್ಲಿ (ದೇವತಾಕಲ್ಪರಾಗಿದ್ದು ಮುಂದಕ್ಕೆ ಬುದ್ಧರಾಗುವವರು) ಒಬ್ಬನಾದ 'ಮಂಜುಶ್ರೀ', 'ಮಂಜುಘೋಷ'ನೇ ಮುಂದಕ್ಕೆ ಮಂಜುನಾಥನೆಂದು ಅವರು ಹೇಳುವುದು ಸರಿಯೆಂದನ್ನಿಸುತ್ತದೆ. ಅವರು ಹೇಳುವಂತೆ 'ಮಂಜುನಾಥ'ಪದವು ಶಿವನಿಗೆ ಅನ್ವಯಿಸಿ ಯಜುರ್ವೇದದ 'ಶತರುದ್ರೀಯ'ದಲ್ಲಿಯಾಗಲೀ, ಯಾವ ಸ್ಮೃತಿಗಳಲ್ಲೇ ಆಗಲೀ (ಉದಾ : ಬೌಧಾಯನ ಗೃಹ್ಯಸೂತ್ರ) ಅಥವಾ ಮುಂದಿನ ಪೌರಾಣಿಕ ಶಿವಸಹಸ್ರನಾಮಾವಳಿಯಲ್ಲೇ ಆಗಲೀ ಬರುವುದಿಲ್ಲವೆನ್ನುವುದನ್ನು ನಾನೂ ಪರಿಶೀಲಿಸಿಯೇ ಪೈಯವರ ಅಭಿಪ್ರಾಯ ಒಪ್ಪಿಕೊಳ್ಳುತ್ತಿದ್ದೇನೆ. "ಇಡೀ ಭಾರತವರ್ಷದಲ್ಲೇ 'ಮಂಜುನಾಥ'ಎಂಬ ಶಿವಲಿಂಗ ಕದಿರೆಯದೊಂದೇ" ಎನ್ನುವ ಅವರ ಮಾತು ನಿಜವೆಂದನಿಸುತ್ತದೆ. 'ಮಂಜುನಾಥ'ಎಂಬ ಹೆಸರು 'ಮಂಜುಶ್ರೀ' ಯದ್ದೇ. ಕದಿರೆಯ ಲೋಕೇಶ್ವರ ಮೂರ್ತಿಯ ಪೀಠದಲ್ಲಿರುವ ಕ್ರಿ. ಶ. ೧೦೬೮ರ ಶಾಸನದಲ್ಲಿ "ಕದಿರಾನಾಮ್ನಿ ವಿಹಾರೇ"-ಎಂಬ ಮಾತು ಬುದ್ಧವಿಹಾರವೆಂದು ತೋರಿಸುವುದಿಲ್ಲವೇ? ದೇವಾಲಯಗಳು ಎಂದೂ ವಿಹಾರಗಳಾಗಲಾರವು. ವಿಹಾರಗಳು ಬೌದ್ಧವೇ. ಹಾಗಾಗಿ ಪೈಗಳ ತೀರ್ಪು ಒಪ್ಪಬೇಕಾದದ್ದೇ. ಬೌದ್ಧ ಮಂಜುಘೋಷನ ವಿಹಾರವೇ ಕ್ರಮೇಣ ಮಂಜುನಾಥನ ದೇವಾಲಯವಾಗಿ ಪರಿವರ್ತಿತವಾದದ್ದನ್ನು ಇದು ಸೂಚಿಸುತ್ತದೆ. ಲೋಕೇಶ್ವರನ ಮೂರ್ತಿ ಲಕ್ಷಣವೂ ಬೌದ್ಧ

ಬೋಧಿಸತ್ವನದ್ದೇ. ಅದು ಶಿವನ ಮೂರ್ತಿ ಖಂಡಿತಾ ಅಲ್ಲ. ಚಂದ್ರಲೇಖೆಯಿಲ್ಲದ ಜಟಾಮುಕುಟ, ಕಮಲದ ಮೊಗ್ಗುಗಳನ್ನು ಹಿಡಿದ ಕೈಗಳು, ಮತ್ತೊಂದು ಕೈಯಲ್ಲಿ ಬೋಧಿಸತ್ವನ ಆಖ್ಯಾನಮುದ್ರೆ-ಇವೆಲ್ಲ ಬೊಧಿಸತ್ವ ಲೋಕೇಶ್ವರನದ್ದೇ ಲಕ್ಷಣಗಳು. ಜಡೆಯಲ್ಲಿ ಬುದ್ಧನ ಮೂರ್ತಿಯಿರುವುದೂ ಬೌದ್ಧ ಲೋಕೇಶ್ವರನಿಗೆ ಮಾತ್ರ.

ಪೈಯವರ ಈ ಲೇಖನ-ಧಾರ್ಮಿಕ ಇತಿಹಾಸಜ್ಞರಿಗೆ ಸಂಶೋಧನೆಯ ಮಾರ್ಗದರ್ಶಿಯಾಗಬಲ್ಲುದು. ಇಂತಹ ಅನೇಕ ವಿಶ್ಲೇಷಣೆಗಳು ಪೈಯವರ ವಿದ್ವತ್ಪೂರ್ಣ ಬರೆಹಗಳಲ್ಲಿ ಒಡಮೂಡಿ ಬಂದಿವೆ. ಅವೆಲ್ಲವುಗಳ ಬಗ್ಗೆ ಹೇಳುವುದು ದೀರ್ಘ ಪ್ರಬಂಧವೋ, ಹೊತ್ತಗೆಯೋ ಆದೀತು. ಒಟ್ಟಿನಲ್ಲಿ ಸಂಶೋಧನೆಯ ಕ್ಷೇತ್ರದಲ್ಲಿ ಕರ್ನಾಟಕದಲ್ಲೇ ನಮ್ಮ ಸಾಂಸ್ಕೃತಿಕ ಜಗತ್ತಿಗೆ ಮೊದಲ ಮಾರ್ಗದರ್ಶಿ ಪೈಯವರೆನ್ನುವುದರಲ್ಲಿ ಸಂಶಯವಿಲ್ಲ. ಈ ಜಿಲ್ಲೆಯ ಯಾವ ಇತಿಹಾಸ ಸಂಶೋಧಕನೂ ಮೊದಲು 'ಪೈಯವರು ಏನು ಹೇಳುತ್ತಾರೆ?' ಎಂಬುದರಿಂದಲೇ ತನ್ನ ಸಂಶೋಧನೆಯನ್ನು ಆರಂಭಿಸಬೇಕಾದಷ್ಟು ಗಮನಾರ್ಹ ಕೊಡುಗೆಯನ್ನು ಅವರು ನಮಗೆ ಕೊಟ್ಟು ಹೋಗಿದ್ದಾರೆ. ಅವರ ಆ ಕೊಡುಗೆಗಳನ್ನು ಒಂದೇ ಹೊತ್ತಗೆಯಲ್ಲಿ ಸಂಗ್ರಹರೂಪದಲ್ಲಿ ನೀಡುವ ಮೂಲಕ ಈ ಮಹಾಸಂಪುಟದ ಸಂಪಾದಕರು ವಿದ್ವತ್ಪ್ರಪಂಚಕ್ಕೆ ಮಹದುಪಕಾರ ಮಾಡಿದ್ದಾರೆ.

ಹಾರ್ದಿಕ ಶುಭಾಶಯಗಳು

ಬಿ. ಎಸ್. ವಿಶ್ವನಾಥನ್	ಶರಣಬಸಪ್ಪ	ಉಷಾ ಗಣೇಶ್, ಐ.ಎ.ಎಸ್.
ಅಧ್ಯಕ್ಷರು	ಕಾರ್ಯದರ್ಶಿ	ಕಾರ್ಯನಿರ್ವಾಹಕ ನಿರ್ದೇಶಕರು

ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿಯಮಿತ ಬೆಂಗಳೂರು - ೫೬೦ ೦೧೮

ಪುಸ್ತಕ ಪರಿಚಯ

ವಿಲಿಯಂ

ಎಕ್ಕುಂಡಿ ನಮುನ (ಲೇಖನಗಳು) ಸಂ. ಜಿ. ಎನ್. ಮೋಹನ್-
ಕರ್ನಾಟಕ ಸಂಘ, ಪುತ್ತೂರು, ದ. ಕ., ಪುಟ ೨೩೪, ರೂ. ೧೦೫/-

ಪ್ರೀತಿಯ ಕವಿ ಎಕ್ಕುಂಡಿಯವರಿಗೆ ಪುತ್ತೂರಿನಲ್ಲಿ ಅರ್ಪಿಸಬೇಕೆಂದಿದ್ದ ಈ ಪುಸ್ತಕ ಎಕ್ಕುಂಡಿ ನಮುನವಾಯಿತು. ಈ ಕೃತಿ ಸುಂದರ, ಸಾರ್ಥಕ ಎನ್ನುವುದರಲ್ಲಿ ಎರಡು ಮಾತಿಲ್ಲ. ಈ ಕೃತಿಯ ಪುಟ ಪ್ರವೇಶದಲ್ಲಿ ಮೋಹನ್ ಎಕ್ಕುಂಡಿಯವರ ಕವನವನ್ನೇ ಉಪಯೋಗಿಸಿಕೊಂಡು ಹೇಳಿರುವ ಮಾತುಗಳು ಅರ್ಥಪೂರ್ಣವಾಗಿದೆ. "ಮರೆತು ಬಿಟ್ಟೆನು ನಿಮ್ಮ ಹೆಸರು ಕೇಳಲು. ನೀವು/ನಡೆದ ದಾರಿಗೆ ಇರಲಿ ಶುಭದ ನೆರಳು /ಬಿರಿದ ಮಲ್ಲಿಗೆ ಕಂಡು, ಕೋಗಿಲೆಯ ದನಿಕೇಳಿ/ತುಂಬಿ ಬಂದಿತ್ತೇಕೆ ಕಣ್ಣು, ಕೊರಳು?" - ಪಯಣಕ್ಕೆ ಸಿದ್ಧನಾದ ಆತನನ್ನು ಹೆಂಗಸು ಕೇಳುವ ಪ್ರಶ್ನೆಗೆ ಉತ್ತರ ಪಂಪ ಎಂದಾದರೂ ಆಗಬಹುದು. ಇಲ್ಲ ಎಕ್ಕುಂಡಿ ಎಂದಿದ್ದರೂ ಯಾರಿಗೂ ಆಶ್ಚರ್ಯವಾಗುತ್ತಿರಲಿಲ್ಲ. ಎದೆಯಲ್ಲಿ ಕಾವ್ಯ ಕೈಯಲ್ಲಿ ಖಡ್ಗ ಹಿಡಿದ ಪಂಪನ ಹಾಗೆಯೇ ಎಕ್ಕುಂಡಿ ಕೂಡಾ. ಅದಕ್ಕೆ ಅವರು ದೃಢವಾಗಿ ಹೇಳಿದ್ದು 'ಯೋಧ ನಡೆಯುವ ದಾರಿ ಕವಿಯ ದಾರಿಯು ಕೂಡಾ' ಬೆಂಜಮಿನ್ ಮೊಲಾಯಿಸ ಸತ್ತಾಗ ಪಂಪನ ಸೈನ್ಯದಲ್ಲಿ ಒಬ್ಬರು ಕಡಿಮೆಯಾದರಲ್ಲಾ ಎನಿಸಿತ್ತು. ಎಕ್ಕುಂಡಿ ನಿಧನರಾಗಿದ್ದಾರೆ. ಪಂಪ ಈಗ ಮತ್ತೊಮ್ಮೆ ಬಿಕ್ಕುತ್ತಿದ್ದಾನೆ.

ಸುಮಾರು ನಲವತ್ತು ಮಂದಿ ನಾಡಿನ ಹಿರಿಯ ಕಿರಿಯ ವಿಚಾರವಂತರು ತಮ್ಮ ಕೈಗೆ ಎಟಕುವಷ್ಟು ಎಕ್ಕುಂಡಿಯವರನ್ನು ಸುಂದರವಾಗಿ ಹಿಡಿದಿಟ್ಟಿದ್ದಾರೆ. ಮನುಷ್ಯನಿಗೆ ರೊಟ್ಟಿಯ ಸಂಗಡ ಸಮುದ್ರ, ಬೆಳ್ಳಕ್ಕಿ, ಬಕುಲದ ಹೂವು - ಇವೆಲ್ಲಾ ಬೇಕು. ಗಂಜಿಯ ಮಡಕೆಗಳು ಬೆಳ್ಳಕ್ಕಿಗಳನ್ನು ನುಂಗಬಾರದು. ಇದು ಇವರ ಕಾವ್ಯ ಧರ್ಮ. ಮುಖ ಪುಟ ಮತ್ತು ಬೆನ್ನುಡಿಗಾಗಿ ಹಾಕಿರುವ ರಸೂಲ್ ಗಂಚತೋನ್ ಮಾತು ಎಕ್ಕುಂಡಿಯವರ ಮೂಲ ದ್ರವ್ಯವನ್ನು ಹೇಳುತ್ತವೆ.

ಕಾರಂತರ ಕಾದಂಬರಿಗಳಲ್ಲಿ ನಿರೂಪಕ (ವಿಶ್ಲೇಷಣೆ)

ಪ್ರೊ. ಸಿ. ಎನ್. ರಾಮಚಂದ್ರನ್-ಕರ್ನಾಟಕ ಸಂಘ, ಪುತ್ತೂರು, ಪುಟ ೪೬, ರೂ. ೨೪/-

ಪುತ್ತೂರಿನ ಕರ್ನಾಟಕ ಸಂಘವು ಏರ್ಪಡಿಸಿದ **ಕಾರಂತ ದತ್ತಿ ಉಪನ್ಯಾಸ** (ಐದನೆಯ ಉಪನ್ಯಾಸ)ದ ವಿಸ್ತೃತ ಲಿಖಿತರೂಪವೇ ಈ ಪುಸ್ತಕ. ಕಥನ ಶಾಸ್ತ್ರದ ಕೆಲವು ಪರಿಕಲ್ಪನೆಗಳ ಹಿನ್ನೆಲೆಯಲ್ಲಿ ಡಾ. ಕೆ. ಶಿವರಾಮ ಕಾರಂತರ ಕೆಲವು ಮುಖ್ಯ ಕಾದಂಬರಿಗಳ ವಿಶ್ಲೇಷಣೆ ಇದರ ಮುಖ್ಯ ವಸ್ತು. ಈವರೆಗೆ ಕಾರಂತರ ಕಾದಂಬರಿಗಳನ್ನು ಬೇರೆ ಬೇರೆ ಪರಿಕಲ್ಪನೆಯ ನೆಲೆಯಲ್ಲಿ ಅಧ್ಯಯನ ಮಾಡಿದ್ದರೂ ನಿರೂಪಕ ಕಲ್ಪನೆಯ ನೆಲೆಯಲ್ಲಿ ಸ್ಪಷ್ಟವಾದ ಒಂದು ಅಧ್ಯಯನವನ್ನು ಮಾಡಿಲ್ಲವೆನಿಸುತ್ತದೆ. ಈ ಹಿನ್ನೆಲೆಯಲ್ಲಿ ನಿರೂಪಕ-ಪ್ರಶ್ನೆ ಮುಖ್ಯವಾಗುವ ಕೆಲವು ಕಾದಂಬರಿಗಳನ್ನು ಇಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಕಾರಂತರ ಕಾದಂಬರಿಗಳ ನಿರೂಪಕರನ್ನು ವಿಡಂಬನಕಾರ ನಿರೂಪಕ, ರೂಪನಿರ್ಧಿಷ್ಟ ನಿರೂಪಕ, ಭಾಗಿ ನಿರೂಪಕ, ಸೀಮಿತ ಪ್ರಥಮ ಪುರುಷ ನಿರೂಪಕ - ಹೀಗೆ ವರ್ಗೀಕರಿಸಿಕೊಂಡು ಶಿಸ್ತಿನ ಅಧ್ಯಯನ ಮಾಡಿದ್ದಾರೆ.

ದೇಸಗತಿ (ಕಥೆಗಳು)ರಾಘವೇಂದ್ರ ಪಾಟೀಲ -ಸಂವಾದ ಪ್ರಕಾಶನ,

ಮಲ್ಲಾಡಿಹಳ್ಳಿ, ಚಿತ್ರದುರ್ಗ ಜಿಲ್ಲೆ, ಪುಟ ೧೦೪, ರೂ. ೩೦/-)

ಇದು ರಾಘವೇಂದ್ರ ಪಾಟೀಲರ ಮೂರನೇ ಕಥಾ ಸಂಕಲನ. ಅನುಭವವೊಂದನ್ನು ಕಥೆಯಾಗಿಸುವ ಸೃಜನಶೀಲ ಅಭಿವ್ಯಕ್ತಿ ಪಾಟೀಲರಿಗೆ ಸಹಜವಾಗಿಯೇ ದಕ್ಕಿದೆ. ಇಲ್ಲಿಯ ಸುಂದರ ಕಥೆಗಳಲ್ಲಿ ಒಂದಾದ "ಕಥಿಯ ಹುಚ್ಚಿನ ಕರಿಟೋಪಿಗೆಯ ರಾಯ" ಕಥೆಯೇ ಪಾಟೀಲರ ಕಥಾ ಕರ್ಮಕ್ಕೆ, ಕಥೆಯಾಗಿಸುವಾಗ ಮೂಡುವ ಭಾಷೆಯ ಕಸುವಿಗೆ ಹಾಗೂ ಲಭ್ಯವಿರುವ ಹತ್ತಾರು ಸಾಧ್ಯತೆಗಳ ಕಾಳಜಿಗೆ ಒಳ್ಳೆಯ ಸಾಕ್ಷಿ. ಮರಿಮಗನನ್ನು ಕಂಡಿರುವ ಕಲ್ಪನಾಥ ದೇಸಾಯಿ ತನ್ನ ತೊಂಬತ್ತನೆ ವಯಸ್ಸಿನಲ್ಲಿ ಕೇವಲ ತನ್ನ ನಿನ್ನೆ ಮೊನ್ನೆಯ ನೆನಪಿನ ಬುತ್ತಿಯನ್ನೇ ಬಿಚ್ಚಿಟ್ಟುಕೊಂಡು ಅದರ ಚೌಕಟ್ಟಿನಲ್ಲಿಯೇ ದೇಸಗತಿಯ ಇತಿಹಾಸವನ್ನು ನೋಡುವ ಒಳ್ಳೆಯ ಪ್ರಯತ್ನ ದೇಸಗತಿ ಕಥೆಯಲ್ಲಿದೆ. ಪಾಟೀಲರ ಗಾಢವಾದ ಅನುಭವಗಳು ಕಥೆಗಳಲ್ಲಿ ಹರಳಾಗಿವೆ.

ಶಿಬಿರದ ದಾರಿಯಲ್ಲಿ (ಅನುವಾದಿತ ಕತೆ) ಅನು. ಜಿ. ಎಸ್. ಸದಾಶಿವ ಅಂಕುರ ಪ್ರಕಾಶನ,

೪೭೩ ವಾಟರ್‌ಟ್ಯಾಂಕ್ ಬಸ್‌ಸ್ಟಾಪ್ ಬಳಿ, ಬಸವೇಶ್ವರ ನಗರ, ಬೆಂಗಳೂರು,

ಪುಟ ೧೦೪, ರೂ. ೪೫/-

ನಮ್ಮ ಕಥಾಮಾರ್ಗದ ಸಮರ್ಥ ಕಥೆಗಾರರಾದ ಸದಾಶಿವರವರು ಅನುವಾದದಲ್ಲೂ ಎತ್ತಿದ ಕೈ. ಬೇರೆ ಬೇರೆ ಸಂದರ್ಭದಲ್ಲಿ ಅನುವಾದ ಮಾಡಿ ಪ್ರಕಟಿಸಿರುವ ಆರು ಕತೆಗಳನ್ನು ಈ ಸಂಕಲನದಲ್ಲಿ

ಹೊರ ತಂದಿದ್ದಾರೆ. ಗೇಬ್ರಿಯಲ್ ಗಾರ್ಸಿಯಾ ಮಾರ್ಕ್ವೆಸ್‌ನ **ಈ ಪಟ್ಟಣದಲ್ಲಿ ಕಳ್ಳರಿಲ್ಲ** ಮತ್ತು **ಪಂಜರ**, ಬೋರ್ಹೆಸ್‌ನ **ಭೇಟಿ** ಐಸಾಕ್ ಭಾಷೆವಿಸ್ ಸಿಂಗರ್‌ನ **ಯಾಂಡಾ** ಲುಷೂನ್‌ನ **ಹುಚ್ಚನ ದಿನಚರಿ** ಮತ್ತು ಸ್ಲಾವೋಮೀರ್ ಪ್ರೋಸೆಕ್‌ನ **ಶಿಬಿರದ ದಾರಿಯಲ್ಲಿ** - ಇವೆಲ್ಲ ಸುಂದರವಾಗಿ ಅನುವಾದಗೊಂಡಿವೆ. ಬದುಕಿನ ಎಲ್ಲಾ ಸ್ತರದ ಸೂಕ್ಷ್ಮ ವ್ಯಾಪಾರಗಳ ಹಿನ್ನೆಲೆಯಿಂದ ಬಂದಿರುವ ಕತೆಗಳು ಇವು. ಇಲ್ಲಿ ಪ್ರಮುಖವಾಗಿ ಕಂಡು ಬರುವುದು ಶ್ರೀ ಸಾಮಾನ್ಯನ ಬದುಕಿನೊಳಗಿರುವ ಹೋರಾಟ, ಗಂಡು ಹೆಣ್ಣಿನ ಸಂಬಂಧ ಮತ್ತು ಮಾನವೀಯ ಸಂಬಂಧಗಳೇ ಕಳಚಿಬೀಳುವ ಸನ್ನಿವೇಶಗಳು. ಕತೆಗಳನ್ನು ಆರಿಸುವಲ್ಲಿ, ನಿರೂಪಣೆ ಸಂಭಾಷಣೆಗಳಲ್ಲಿ ಸದಾಶಿವರ ಅನುವಾದ ಕನ್ನಡದ ಜಾಯಮಾನಕ್ಕೆ ಒಗ್ಗಿದೆ. ಮೂಲಕತೆಯನ್ನು ಓದದವರೂ ಸಹಾ ಸುಲಭವಾಗಿ ಅದರ ಮೂಲ ಆಶಯವನ್ನು ದಕ್ಕಿಸಿಕೊಳ್ಳಬಹುದಾದ ಅನುವಾದಗಳು ಇವು.

ಇತಿಗೀತಿಕೆ (ಕವನ) ವಿಜಯಾದಬ್ಬೆ - ರಚನಾ ಪ್ರಕಾಶನ, ೨೫೪, ಹೊಸ ಕಾಳಿದಾಸ ರಸ್ತೆ, ವಿಜಯನಗರ ಮೊದಲ ಹಂತ, ಮೈಸೂರು ೧೭, ಪುಟ ೧೬೫, ರೂ. ೪೦/-

ಸುಮಾರು ಇಪ್ಪತ್ತು ವರ್ಷಗಳ ಅವಧಿಯಲ್ಲಿ ಬಂದ **ತಿರುಗಿನಿಂತ ಪ್ರಶ್ನೆ**, **ನೀರು ಲೋಹದ ಚಿಂತೆ** ಮತ್ತು **ಇರುತ್ತವೆ** ಸಂಕಲನಗಳಿಂದ ಆಯ್ಕೆ ಆಗಿರುವ ಸುಮಾರು ಒಂದು ನೂರು ಕವನಗಳ ದೊಡ್ಡ ಸಂಕಲನ. ಸ್ತ್ರೀ ವಿಮೋಚನಾ ಚಳುವಳಿಯಲ್ಲಿ ನಿಂತಿರುವ ವಿಜಯಾದಬ್ಬೆ, 'ಮರೆತಿಲ್ಲ', 'ಪ್ರೇಮನೇಮಿಗೆ ', 'ಸದ್ಗೃಹಿಣಿ', 'ಪರಂಪರೆ', 'ನಾರೀಮಣಿಗಳಿಗೊಂದು ಕಿವಿಮಾತು'- ಕವನಗಳಲ್ಲಿ ತಮ್ಮ ಸೂಕ್ಷ್ಮ ಸಂವೇದನಾ ಶೀಲತೆಯನ್ನು ತೋರಿಸಿದ್ದಾರೆ. ಪುರಾಣದ ನೆಲೆಯಲ್ಲಿ ಬಂದಿರುವ 'ಅಭಿಮನ್ಯು', 'ಕುಂತಿಯ ಬೆಳಗು', 'ಸಂಜೀವಿನಿ', 'ಶಂಬುಕ'ಗಳಲ್ಲಿ ಸತ್ಯದ ನಿರಂತರ ಹುಡುಕಾಟವಿದೆ. ಸರಳವಾಗಿ ಓದಿಸಿಕೊಳ್ಳುವ ಈ ಕವನಗಳಲ್ಲಿ ಭಾಷೆ, ಭಾವ ಲಾಲಿತ್ಯದ ಒಳ್ಳೆಯ ಮಿಳಿತವಿದೆ. ಗಂಜೀಫ ರಘುಪತಿ ಭಟ್ಟರು ಮುಖ ಪುಟದಲ್ಲಿ ಮೂಡಿಸಿರುವ ರೇಖೆಗಳು ಸಹಾ ಒಂದು ಅತ್ಯುತ್ತಮ ಕವನ.

ಮಾತಿಗೂ ಆಚೆ (ಪ್ರಬಂಧಗಳು) ಅಬ್ದುಲ್ ರಶೀದ್, ನಮ್ಮ ಪ್ರಕಾಶನ, ತಿಪಟೂರು, ಪುಟ ೬೨, ರೂ. ೩೦/-

ಮುಂಗಾರು ಪತ್ರಿಕೆಯಲ್ಲಿ ಬಂದ ರಶೀದರ ಅಂಕಣದ ಆಯ್ದ ಲೇಖನಗಳ ಸಂಕಲನ. ಇದು ಪ್ರಬಂಧಗಳ ಸಂಕಲನವೆಂದು ಕರೆಸಿಕೊಂಡಿದ್ದರೂ ನಿಜವಾದ ಅರ್ಥದಲ್ಲಿ ಪ್ರಬಂಧದ ಚೌಕಟ್ಟನ್ನೂ ಮೀರಿ ಆಚೆಗೂ ಕೈಚಾಚುತ್ತದೆ. ಇಲ್ಲಿಯ ಹಲವು ಪ್ರಬಂಧಗಳು ಒಮ್ಮೊಮ್ಮೆ ಕವಿತೆಗಳಾಗಿ, ಕಥೆಗಳಾಗಿ, ಹರಟೆಗಳಾಗಿ ಇಲ್ಲವೆ ಆತ್ಮಕತೆಯ ಪುಟಗಳಾಗಿ ಕಾಣುತ್ತವೆ. ಹೀಗಾಗಿ ಇಲ್ಲಿಯ ಅನೇಕ ಲೇಖನಗಳು ಮಿದುಳಿಗಿಂತ ಹೃದಯಕ್ಕೆ ಹತ್ತಿರವಾಗಿದೆ. ತೀವ್ರವಾದ ಭಾವನೆಗಳಿಂದ

ಕೂಡಿರುವ ಈ ಲೇಖನಗಳೆಲ್ಲಾ ರಶೀದರು ಕಂಡುಂಡ ನೈಜ ಅನುಭವಗಳು. ವೈಕಂ ಬಷೀರ್, ಸೂಫಿಬ್ಯಾರಿ, ಹದಿನೈದು ತುಂಬಿದ ಲಂಕೇಶ ಪತ್ರಿಕೆ, ಕೀರಂ, ಸಾವಿನ ಚಿಂತನೆ, ಮಂಗೇಶರಾಯರು, ತಸ್ಲೀಮಾ ಇವೆಲ್ಲಾ ಗಾಢವಾಗಿ ಬಂದಿವೆ.

ಫ್ರೂಟ್ ಗ್ಯಾದರಿಂಗ್ (ಹಣ್ಣಿನ ಕುಯಿಲು)ರವೀಂದ್ರನಾಥ್ ಠಾಕೂರ್,
ಅನು :ಎಸ್. ಜಿ. ಮೈಸೂರು ಮಠ, ಸಿಡ್ ಪ್ರಕಾಶನ, ಬೆಂಗಳೂರು, ಪುಟ ೮೮, ರೂ. ೬೦/-

ಕವಿ ರವೀಂದ್ರರ **ಫ್ರೂಟ್‌ಗ್ಯಾದರಿಂಗ್** ಸಂಗ್ರಹದಲ್ಲಿರುವ ಎಂಬತ್ತಾರು ಕವನಗಳನ್ನು ಬಂಗಾಳಿಯಿಂದ ರವೀಂದ್ರರೆ ಇಂಗ್ಲಿಷಿಗೆ ಭಾಷಾಂತರಿಸಿದ್ದಾರೆ. ಬೇರೆ ಬೇರೆ ಸಮಯ ಸಂದರ್ಭಗಳಲ್ಲಿ ರಚನೆಯಾಗಿರುವ ಈ ಬಂಗಾಳಿ ಕವಿತೆಗಳು ರವೀಂದ್ರರ ಸಾಹಿತ್ಯದ ಬೆಳವಣಿಗೆಯೊಡನೆ ಮೂಡಿ ಬಂದಿವೆ. **ಗೀತಾಂಜಲಿಯ** ಕವಿತೆಗಳಂತೆ ಈ ಕವಿತೆಗಳ ಅಧ್ಯಾತ್ಮದ ನೆಲೆಗೆ ಭಾವಗೀತಾತ್ಮಕತೆಯ ಲಹರಿಯ ಪಸೆ ಸೇರಿಕೊಂಡು ಬಂದಿದೆ. ಬಂಗಾಳಿಯಿಂದ ಇಂಗ್ಲಿಷ್‌ಗೆ ಇಂಗ್ಲಿಷ್‌ನಿಂದ ಕನ್ನಡಕ್ಕೆ ಬರುವಾಗ ಕವಿತೆಗಳಲ್ಲಿನ ಭಾವಸೂಕ್ಷ್ಮತೆಗಳಿಗೆ ಸಹಜವಾದ ಅತಂಕಗಳು ಆಗುವುದು ಅನಿವಾರ್ಯ. ಆದರೆ ಮೈಸೂರು ಮಠರ ಈ ಅನುವಾದ ಅನುವಾದದ ಗೌರವವನ್ನೇ ಹೆಚ್ಚಿಸಿದೆ. ಇಲ್ಲಿಯ ಅನೇಕ ಅನುವಾದಗಳು ಮೈಸೂರು ಮಠರ ಪ್ರಯತ್ನಕ್ಕೆ ಸಾರ್ಥಕತೆಯನ್ನು ತೋರಿಸಿದೆ. "ಬಾಳುಂಡು ಬೆಳೆದ ಒಡಲೀಗ/ಮಾಗಿದ ಪರಿಪಕ್ವ ಫಲ/ಕಳಚಿಕೊಡಲು ದಳಗಳಿಲ್ಲ/ರಸದೊಡಲನ್ನೇ ಅರ್ಪಿಸಲು/ಸಿದ್ಧವಿದೆ, ಪರಿಶುದ್ಧವಾಗಿದೆ/. ರವೀಂದ್ರರಿಗೆ ಕಾಡುತ್ತಿದ್ದ ಅನೇಕ ತಾತ್ವಿಕ ಪ್ರಶ್ನೆಗಳಿಗೆ ಸಂಬಂಧಿಸಿದ ಕವನಗಳು ಇಲ್ಲಿವೆ." ನನ್ನ ಪ್ರಾರ್ಥನೆ ಇಷ್ಟೆ :/ನಾನು ಬಿಟ್ಟು ಹೋಗುವಮುನ್ನ/ಭೂಮಿ ನನ್ನ ಕರೆಸಿಕೊಂಡದ್ದೇಕೆ?/ ಎಂಬುದ ತಿಳಿಯ ಬಯಸುವೆ/ ಮುಂತಾಗಿ ಉದಾಹರಣೆ ಕೊಡಬಹುದು.

ಆಯ್ದ ರಷ್ಯನ್ ಕತೆಗಳು ಅನು :ಶ್ರೀನಿವಾಸ್ ವಿ. ಸುತ್ರಾವೆ,
ವಿನಯ್ ಪ್ರಕಾಶನ, ವಿದ್ಯಾನಗರ, ದಾವಣಗೆರೆ, ಪುಟ ೯೬, ರೂ. ೩೦/-

ರಷ್ಯನ್ ಶ್ರೇಷ್ಠ ಕತೆಗಳಲ್ಲಿ ಅದ್ಭುತ ಕಲೆಗಾರಿಕೆ ಇದೆ. ಅವುಗಳಲ್ಲಿ ತುಂಬಿರುವ ಪ್ರೀತಿ ಮತ್ತು ನೋವಿನ ಆಳ ಎತ್ತರದ ಕಲ್ಪನೆ ಅಳತೆಗೆ ಮೀರಿದ್ದು. ಇಲ್ಲಿರುವ **ತಾಲಸ್ತೋಯ್**, **ದಾಸ್ತೋಯೆವಸ್ಕಿ**, **ಚೆಹಾಫ್** ಮತ್ತು **ಮ್ಯಾಕ್ಸಿಂಗಾರ್ಕಿಯರ** ಕತೆಗಳೆಲ್ಲವೂ ಬದುಕಿನ ಮೂಸೆಯೊಳಗಿಂದ ಬಂದವು. ಪಾಪ, ಸಾಮಾಜಿಕ ರೋಗ ರುಜಿನಗಳು, ಅಮಾಯಕರ ಬವಣೆ, ಉಸಿರು ಕಟ್ಟುವ ವ್ಯವಸ್ಥೆ, ಸರಕಾರಿ ಯಂತ್ರದ ಅಮಾನವೀಯ ಮನಸ್ಸುಗಳು -ಈ ಎಲ್ಲಾ ಹೀನಸ್ಥಿತಿಯಲ್ಲೂ ಕಾಣುವ ದಯೆ, ಪ್ರೀತಿ, ಕ್ಷಮೆ ದಮೆಗಳೇ ಈ ಕತೆಗಳನ್ನು ಜೀವಂತವಾಗಿ

ಇಟ್ಟಿವೆ. ಪ್ರೀತಿ ಮತ್ತು ನೀತಿಯ ನೆಲೆಗಟ್ಟಿನ ಮೇಲೆ ನಿಂತಿರುವ ನಿಜ ಗೊತ್ತಿದ್ದರೂ ದೇವರು ನಿಧಾನಿಸುತ್ತಾನೆ, ನೈಜ ನಂಬಿಕೆ ಮತ್ತು ಮಾನವೀಯತೆಯು ಎಲ್ಲಿ ಪ್ರೀತಿ ಇದೆಯೋ ಅಲ್ಲಿ ದೇವರಿದ್ದಾನೆ ಕುರುಡು ಕಾಂಚಾಣದ ದಾಹ ಮನುಷ್ಯನನ್ನು ಯಾವ ಮಟ್ಟಕ್ಕೆ ಇಳಿಸಬಹುದೆನ್ನುವ ಕ್ರಿಸ್‌ಮಸ್ ಮರ ಮತ್ತು ಮುಮಟೆ ಸುಂದರವಾಗಿ ಅನುವಾದಗೊಂಡಿವೆ. ಆ್ಯಂತೋನ್ ಚೆಹಾಫ್‌ನ ಐದು ಭಿನ್ನ ಭಿನ್ನ ಹಿನ್ನೆಲೆಯ ಕಥೆಗಳಿರುವುದೇ ಈ ಸಂಕಲನದ ಮತ್ತೊಂದು ವಿಶೇಷ ಸಂಗತಿ. ಇಲ್ಲಿನ ಕತೆಗಳ ಅನುವಾದವು ಮೂಲಕತೆಗಳ ಆಶಯಕ್ಕೆ ಕಿಂಚಿತ್ತೂ ಊನತಾರದೆ ಅಲ್ಲಿನ ಕತೆಗಳನ್ನು ಇಲ್ಲಿನ ಕತೆಗಳನ್ನಾಗಿಸುವ ಸುತ್ರಾವೆಯವರ ಪ್ರಯತ್ನ ಸಾರ್ಥಕವಾಗಿದೆ.

KANATAKA POWER CORPORATION LIMITED
(A Government of Karnataka Enterprise)

ACCEPTS/RENEWS DEPOSITS

DEPOSITS ARE ACCEPTED WITH A MINIMUM OF Rs. 5000/- FOR FIXED DEPOSITS, Rs. 1000/- IN CASE OF CUMULATIVE DEPOSITS AND IN MULTIPLES OF Rs. 1000/- ONLY. FOR CASH CERTIFICATES, DEPENDING ON THE PERIOD OF DEPOSIT, THE MINIMUM AMOUNT SHALL BE AS INDICATED BELOW & IN MULTIPLES THERE OF ARE ACCEPTED

I. CUMULATIVE DEPOSIT SCHEME

II. CASH CERTIFICATE

III. FIXED DEPOSIT SCHEME

Application forms can be obtained from the office indicated below or from the authorised brokers of the Corporation.

KARNATAKA POWER CORPORATION LIMITED
KPC Public Deposit Centre, 22/23, Ground Floor, Sudarshan complex, Seshadri Road, Bangalore-560 009., Phone: 2202950/2202956

ಸಾದರ ಸ್ವೀಕಾರ

ವಿಶ್ವಾಸ ನಾ. ಲೋಕೇಶ ಒಡೆಯರ್, ಚಿಂತನಗಳ ಸಂಕಲನ, ಯುವ ಹಿರಿಯ ವಿದ್ಯಾರ್ಥಿಸಂಘ, ಮೈ. ಬಸವಯ್ಯ ವಸತಿ ಮಹಾವಿದ್ಯಾಲಯ, ಸಿರಿಗೆರೆ ೫೭೭ ೫೪೧ ಚಿತ್ರದುರ್ಗ (ಜಿ.), ಪುಟ ೧೧೭, ಬೆಲೆ ರೂ. ೩೦ /-

ವಿಮಾ ಖಾಸಗೀಕರಣ ಎನ್. ಎಂ. ಸುಂದರಂ, ಹೊಸ ಆರ್ಥಿಕ ನೀತಿ ಮತ್ತು ಜನಸಾಮಾನ್ಯರು-ಒಂದು ಅಧ್ಯಯನ, 'ಅಧ್ಯಯನ' ಶಿರಸಿ ಉತ್ತರ ಕನ್ನಡ ಜಿಲ್ಲೆ, ಪುಟ ೨೮, ಬೆಲೆ ರೂ. ೩ /-

ಗಾಂಧೀಜಿ ಮತ್ತು ಗಾಂಧಿವಾದ ಇ. ಎಂ. ಎಸ್. ನಂಬುದಿರಿಪ್ಪಾಡ್, ಒಂದು ಚಿಂತನೆ, ಸಂಚಾಲಕರು ಚಿಂತನ ಕನ್ನಡ ಪುಸ್ತಕ ಮಳಿಗೆ, ಬಸ್‌ಸ್ಟ್ಯಾಂಡ್ ಹತ್ತಿರ, ಶಿರಸಿ ಉ. ಕ., ಪುಟ ೫೦, ಬೆಲೆ ರೂ. ೪ /-

ಹೃದ್ಗತ ಶ್ರೀನಿವಾಸ ಜೋಕಟ್ಟೆ, ಕಥಾಸಂಕಲನ, ಅಭಿವ್ಯಕ್ತಿ ಸಾಂಸ್ಕೃತಿಕ ವೇದಿಕೆ, ಸಂಚಾಲಕ: ನಾಗತಿಹಳ್ಳಿ ಚಂದ್ರಶೇಖರ, ಕನ್ನಡ ಅಧ್ಯಾಪಕ, ಬಿ. ಇ. ಎಸ್. ಕಾಲೇಜು, ಜಯನಗರ ೪ನೇ ಬಡಾವಣೆ, ಬೆಂಗಳೂರು ೫೬೦ ೦೧೧, ಪುಟ ೯೪, ಬೆಲೆ ರೂ. ೩೦ /-

ಹಲಗಲಿ ಬಂಡಾಯ ಹನುಮಂತ ಗೌಡ ರಾ. ಮುದಿಗೌಡರ ಎಂ. ಎ., ಚಾರಿತ್ರಿಕ ನಾಟಕ, ಗ್ರಾಮ ಭಾರತಿ ಪ್ರಕಾಶನ, ಹೊಸಕೋಟಿ ೫೯೧ ೧೮೭, ಬೆಳಗಾಂ (ಜಿ.), ಪುಟ ೧೫೫, ಬೆಲೆ ರೂ. ೨೫ /-

ಜಾತ್ರಿ ಮತ್ತು ಮಾದನಾಯ್ಕನ ಗಂಡು ಹೊರೆಯಾಲ ದೊರೆಸ್ವಾಮಿ, ಸಣ್ಣ ಕಥೆಗಳು, ಸೌಮ್ಯ ಪ್ರಕಾಶನ, ೧೩ನೇ ಮುಖ್ಯ ಸರಸ್ವತಿಪುರಂ ಮೈಸೂರು ೫೭೦ ೦೦೧, ಪುಟ ೧೨೦, ಬೆಲೆ ರೂ. ೧೬/-

ಸುಗಂಧರಾಜ ಮೋಹನ್ ದಾಸ್ ಧಾವಸ್ಕರ್, ಕವಿತೆಗಳು, ಪುಟ ೬೪, ಬೆಲೆ ರೂ. ೩೫ /-

ಚಿತ್ರದ ಚಿತ್ತಾರಗಳು ಮೋಹನ್ ದಾಸ್ ಧಾವಸ್ಕರ್, ಕವಿತೆಗಳು, ಪುಟ ೮೦, ಬೆಲೆ ರೂ. ೪೦ /-

ಈ ಮೇಲಿನ ಎರಡು ಪುಸ್ತಕಗಳ ಪ್ರಕಾಶಕರು ಶ್ರೀವತ್ಸ ಮುದ್ರಣಾಲಯ, ನಂ. ೪೦೧, ಶ್ರೀ ರಾಮಾಂಜನೇಯ ಮುಖ್ಯರಸ್ತೆ, ಶ್ರೀನಗರ, ಬೆಂಗಳೂರು-೫೦.

ಪದ್ಮಿನಿ ಜಯಶ್ರೀ ದೇಶಪಾಂಡೆ, ಸಣ್ಣಕಥೆಗಳು, ಪುಟ ೫೦, ಬೆಲೆ ರೂ. ೨೪ /-

ಎರಡು ರೇಡಿಯೋ ರೂಪಾಂತರಗಳು ಸಿ. ಎನ್. ರಾಮಚಂದ್ರನ್, ನಾಟಕ, ಪುಟ ೪೨, ಬೆಲೆ ರೂ. ೨೪ /-

ಮೇಲಿನ ಎರಡು ಪುಸ್ತಕಗಳ ಪ್ರಕಾಶಕರು ಕನ್ನಡ ಪ್ರಪಂಚ ಪ್ರಕಾಶನ, ದರ್ಬೆ, ಪುತ್ತೂರು ದ. ಕ. ೫೭೪ ೨೦೨.

ಸುಮ್ಮಾನದ ಪದ್ಯಗಳು ಜಗದೀಶ್ ಕೊಪ್ಪ, ಕವನಗಳು, ಅಪೂರ್ವ ಪ್ರಕಾಶನ, ಕೊಪ್ಪ ೫೭೧ ೪೨೫, ಮಂಡ್ಯ(ಜಿ.), ಪುಟ ೪೮, ಬೆಲೆ ರೂ. ೧೨ /-

ಪ್ರಾತಃಕಾಲದ ಪದ್ಯಗಳು ಸಂತೋಷ ಚೊಕ್ಕಾಡಿ, ಕವನ ಸಂಕಲನ, ಸುಮನಸಾ ವಿಚಾರವೇದಿಕೆ ಚೊಕ್ಕಾಡಿ, ಪುಟ ೬೦, ಬೆಲೆ ರೂ. ೨೫ /-

ನಿರುತ್ತರ ಮುಕುಂದ ಜೋಷಿ, ಕಾದಂಬರಿ, ಪುಟ ೧೯೦, ಬೆಲೆ ರೂ. ೫೦ /-

ಆಕಾಶಕ್ಕೊಂದು ಕಂದೀಲು ! ವ್ಯಾಸರಾಯ ಬಲ್ಲಾಳ, ಕಾದಂಬರಿ, ಪುಟ ೨೫೦, ಬೆಲೆ ರೂ. ೫೦ /-

ಗಿಣಿಯು ಪಂಜರದೊಳಿಲ್ಲ ವ್ಯಾಸರಾಯ ಬಲ್ಲಾಳ, ನಾಟಕ, ಪುಟ ೧೨೬, ಬೆಲೆ ರೂ. ೩೫ /-

ಮುಳ್ಳಿಲ್ಲಿದೆ ಮಂದಾರ ವ್ಯಾಸರಾಯ ಬಲ್ಲಾಳ, ನಾಟಕ, ಪುಟ ೧೨೩, ಬೆಲೆ ರೂ. ೩೫ /-

ಜೀವಜಲ ಶಾಂತಾರಾಮ ಸೋಮಯಾಜಿ, ಕಥಾಸಂಕಲನ, ಪುಟ ೧೪೬, ಬೆಲೆ ರೂ. ೪೦ /-

ಪ್ರಶ್ನೆಗಳು ಡಾ. ಶಾರದಾ ಶೆಣ್ಯೆ, ಕಥಾಸಂಕಲನ, ಪುಟ ೧೪೬, ಬೆಲೆ ರೂ. ೪೦ /-

ಮೇಲಿನ ಆರು ಪುಸ್ತಕಗಳ ಪ್ರಕಾಶಕರು ಗೀತಾ ಬುಕ್ ಹೌಸ್, ಕೆ. ಆರ್. ಸರ್ಕಲ್, ಮೈಸೂರು ೫೭೦ ೦೦೧

ಹಿರಣ್ಯ ಗರ್ಭ ಕೆ. ಆರ್. ತೇಜಕುಮಾರ್ ಬಡ್ಡಡ್ಕ, ಕಿರು ಕಾದಂಬರಿ, ಬಂಟಮಲೆ ಪ್ರಕಾಶನ ಗುತ್ತಿಗಾರು, ಪುಟ ೮೧, ಬೆಲೆ ರೂ. ೩೦ /-

ಮಾನ ಮತ್ತು ಇತರ ಕಥೆಗಳು ಹರಿಯಪ್ಪ ಪೇಜಾವರ, ಸಣ್ಣ ಕಥೆಗಳು, ಸಾವಿ ಪ್ರಕಾಶನ, ಕೋಟೇಶ್ವರ, ಕುಂದಾಪುರ (ತಾ.) ೫೭೬ ೨೨೨, ಪುಟ ೧೭೨, ಬೆಲೆ ರೂ. ೪೫ /-

ಸಮೀಪ ಜಿ. ಪಿ. ಬಸವರಾಜು, ಕವನಗಳು, ಸಮೀಪ ಪ್ರಕಾಶನ, ೧/೮ ಇ ಮತ್ತು ಎಫ್ ಬ್ಲಾಕ್ ರಾಮಕೃಷ್ಣನಗರ, ಮೈಸೂರು ೫೭೦ ೦೨೩, ಪುಟ ೭೬, ಬೆಲೆ ರೂ. ೪೫ /-

ನಲ್ವತ್ತರ ನಲುಗು ವ್ಯಾಸರಾವ್ ನಿಂಜೂರ್, ನಾಟಕ, ಪುಟ ೬೮, ಬೆಲೆ ರೂ. ೨೫ /-

ಚಿನ್ನದ ಗೊಂಬೆ ಸದಾನಂದ ಸುವರ್ಣ, ಕಥಾಸಂಕಲನ, ಪುಟ ೬೦, ಬೆಲೆ ರೂ. ೨೫ /-

ಮೇಲಿನ ಎರಡು ಪುಸ್ತಕಗಳ ಪ್ರಕಾಶಕರು ಸುವರ್ಣಗಿರಿ ಪ್ರಕಾಶನ, ೩೦ ಮಾರುತಿ ಲೇನ್, ಕೋಟೆ, ಮುಂಬಯಿ ೪೦೦ ೦೦೧.

ಒಲಿದಂತೆ ಹಾಡುವೆ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು, ವಚನ ಸಂಕಲನ, ಶ್ರೀ ತರಳಬಾಳು ಜಗದ್ಗುರು ಬೃಹನ್ಮಠ, ಸಿರಿಗೆರೆ ೫೭೭ ೫೪೧, ಪುಟ ೧೨೬, ಬೆಲೆ ರೂ. ೩೦ /-

ಧ್ವನಿ ಸಂ. ಗುರುಮೂರ್ತಿ ಪೆಂಡಕೂರು ತೂ. ಕ. ಶಂಕರಯ್ಯ, ಬಳ್ಳಾರಿ ಜಿಲ್ಲಾ ಪ್ರಾತಿನಿಧಿಕ ಕವನಗಳ ಸಂಕಲನ, ಯುವಕ ಸಂಘ (ರಿ.) ರಾಮನಗರ ಹೆಚ್. ಬಿ. ಹಳ್ಳಿ ೫೮೩ ೨೧೨ ಬಳ್ಳಾರಿ (ಜಿ.), ಪುಟ ೧೬೨, ಬೆಲೆ ರೂ. ೫೦ /-

ತೆಂಕನ ಹಸಿರು ನಿಶಾನೆ ಮೋಹನ ಹಬ್ಬು, ಕವನ ಸಂಕಲನ, ಜನ ಜೀವನ ಪ್ರಕಾಶನ, ಹಿಚಕಡ, ಅಂಕೋಲಾ, ಪುಟ ೬೬, ಬೆಲೆ ರೂ. ೨೦ /-

ಪ್ರಾಸಂಗಿಕ ರತ್ನಾಕರ ಶೆಟ್ಟಿ, ಅಂಕಣ ಬರಹಗಳು, ಮನುಕುಲ ಪ್ರಕಾಶನ ಮುಂಬಯಿ, ಪುಟ ೨೨೧, ಬೆಲೆ ರೂ. ೭೫ /-

ಸ್ಫೂರ್ತಿ ಜಿ. ಕೆ. ಕುಲಕರ್ಣಿ, ಕವನ ಸಂಕಲನ, ಪುಟ ೪೮, ಬೆಲೆ, ರೂ. ೧೦ /-

ನುಡಿಮುತ್ತು ಕೆ. ನಾರಾಯಣಭಟ್ಟ, ವಿಚಾರ ಸಂಗ್ರಹ, ಪುಟ ೯೮, ಬೆಲೆ ರೂ.೧೫ /-

ಮೇಲಿನ ಎರಡು ಪುಸ್ತಕಗಳ ಪ್ರಕಾಶಕರು ಶ್ರೀ ಲಕ್ಷ್ಮೀ ಪ್ರಕಾಶನ, ಪಟೇಲ ನಗರ, ಹೊಸಪೇಟೆ ೫೮೩ ೨೦೧.

ದುಂಡಿರಾಜರ ಹನಿಗವನಗಳು ಎಚ್. ದುಂಡಿರಾಜ್, ಹನಿಗವನಗಳು, ಹಾಸ್ಯಸಂಘ, 'ಮಿಂಚು' ನಾನಾಸಾಹೆಬ್ ರೋಡ್, ಕುಂದಾಪುರ ದ. ಕ., ಪುಟ ೬೮, ಬೆಲೆ ರೂ. ೧೦ /-

ಗಾಳಿಯ ದೈವಿಕ ಹಾದಿಗಳು ಸಂ. ಕಾರಿನೆ ಕುಮಾರ್ ಮತ್ತು ಎಲ್. ಸಿ. ನಾಗರಾಜು, ಅನು:ಎಲ್. ಸಿ. ನಾಗರಾಜು, ವಿವಿಧ ಪರಂಪರೆಗಳಿಂದ ಆಯ್ದ ಕವನಗಳ ಕನ್ನಡ ಅನುವಾದ, ಸ್ನೇಲೇಖ, ೧೫/೫೫ ಜೀವನ ಕೇಂದ್ರ ಲೇ ಔಟ್, ಕೇಂಬ್ರಿಡ್ಜ್ ರಸ್ತೆ, ಬೆಂಗಳೂರು ೫೬೦ ೦೦೮, ಬೆಲೆ ರೂ. ೧೫೦ /-

ಹ್ಯಾಮ್ಲೆಟ್ ಅನು : ರಾಮಚಂದ್ರದೇವ, ನಾಟಕ, ಗ್ರಂಥಾವಳಿ, ೧೬೬- ಎ ೨೨ ನೇ ಮುಖ್ಯರಸ್ತೆ, ಶ್ರೀನಗರ, ಬೆಂಗಳೂರು ೫೬೦ ೦೫೦, ಪುಟ ೧೪೪, ಬೆಲೆ ರೂ. ೫೦ /-

ಭಟ್ಟರ ಕೈಲೂ ಕೋಕಕೋಲ ಹಿರೇಮಗಳೂರು ಕಣ್ಣನ್, ಹನಿಗವನಗಳು, ಭಾರ್ಗವ ಪ್ರಕಾಶನ, ಸಾಕೇತ ನಿಲಯ, ಹಿರೇಮಗಳೂರು ೫೭೭ ೧೦೨, ಪುಟ ೫೧, ಬೆಲೆ ರೂ. ೧೦ /-

ನೀತಿ ಕಥೆಗಳು ಸಂಗ್ರಹಾನುವಾದ : ಸಂಧ್ಯಾ ಎಸ್., ಕಥೆಗಳು, ಪುಟ ೧೨೦, ಬೆಲೆ ರೂ. ೨೫/-

ಖಂಡಾಂತರ ಅನು : ಸಂಧ್ಯಾ ಎಸ್., ಕಥೆಗಳು, ಪುಟ ೧೨೪, ಬೆಲೆ ರೂ. ೫೦ /-

ಮೇಲಿನ ಎರಡು ಪುಸ್ತಕಗಳ ಪ್ರಕಾಶಕರು ಎಸ್. ಬಿ. ಎಸ್. ಪಬ್ಲಿಷರ್ಸ್ ಡಿಸ್ಟ್ರಿಬ್ಯೂಟರ್ಸ್, ರೈಲ್ವೆ ಪ್ಯಾರಲಲ್ ರೋಡ್, ಕುಮಾರಾಪಾರ್ಕ್ ಈಸ್ಟ್, ಬೆಂಗಳೂರು ೫೬೦ ೦೦೧.

ಭತ್ತದ ಕಥೆ ಮೂಲ : ರಮೇಶ್ ದತ್ತ ಶರ್ಮ, ಅನು : ಜಿ. ಆರ್. ರಂಗಸ್ವಾಮಯ್ಯ, ಪುಟ ೭೦, ಬೆಲೆ ರೂ. ೯ /-

ಗುಲಾಬೊ ಇಲಿಯಮ್ಮ ಮತ್ತು ಅವಳ ಬಲೂನುಗಳು ಮೂಲ : ಖುದ್ಸಿಯ ಝೈದಿ, ಅನು : ಎಚ್. ನಾಗರಾಜಪ್ಪ, ಶಿಶುಸಾಹಿತ್ಯ, ಪುಟ ೨೮, ಬೆಲೆ ರೂ. ೮-೫೦ /-

ಪ್ರತಿಪದಾ ಮೂಲ : ಬೀರೇಂದ್ರ ಕುಮಾರ್ ಭಟ್ಟಾಚಾರ್ಯ, ಅನು : ಎಸ್. ಎಮ್. ರಾಮಚಂದ್ರಸ್ವಾಮಿ, ಕಾದಂಬರಿ, ಪುಟ ೩೩೪, ಬೆಲೆ ರೂ. ೫೫ /-

ರಸ್ಕಿಯ ಸಾಹಸಗಳು ಮೂಲ : ರಸ್ಕಿನ್ ಬಾಂಡ್, ಅನು: ಅಹಲ್ಯಾಚಿಂತಾಮಣಿ, ಕಾದಂಬರಿ, ಪುಟ ೯೫, ಬೆಲೆ ರೂ. ೨೦ /-

ಉದ್ಯಾನ ಪುಷ್ಪಗಳು ಮೂಲ : ವಿಷ್ಣು ಸ್ವರೂಪ್, ಅನು : ಡಾ. ಪಿ. ಎಸ್. ಚಿಕ್ಕಣ್ಣಯ್ಯ, ಪುಟ ೨೭೫, ಬೆಲೆ ರೂ. ೩೬ /-

ತೋಡ ಬಾಲಕ ಮತ್ತು ಕಾಡು ಮೇಕೆ ಮೂಲ : ಇ. ಆರ್. ಸಿ. ದಾವಿಡರ್, ಅನು : ಬಿ. ಎನ್. ಗುರುಮೂರ್ತಿ, ಶಿಶುಸಾಹಿತ್ಯ, ಪುಟ ೭೦, ಬೆಲೆ ರೂ. ೯ /-

ಸೂರ್ಯ ಕಿನ್ನರಿಯರು ಸ್ವಪ್ನಾದತ್ತ, ಶಿಶುಸಾಹಿತ್ಯ, ಪುಟ ೨೬, ಬೆಲೆ ರೂ. ೮-೫೦ /-

ಮೇಲಿನ ಏಳು ಪುಸ್ತಕಗಳ ಪ್ರಕಾಶಕರು ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ, ಎ-೫ ಗ್ರೀನ್ ಪಾರ್ಕ್, ಹೊಸ ದೆಹಲಿ ೧೧೦ ೦೧೬.

ನಮ್ಮ ಹೆಮ್ಮೆಯ ನಾಡು-ಕರ್ನಾಟಕ

ಎರಡು ಸಾವಿರ ವರ್ಷಗಳ ಭವ್ಯ ಇತಿಹಾಸ, ಪರಂಪರೆಯ ಪುಣ್ಯ ಭೂಮಿ ಕರ್ನಾಟಕ. ಇದು ವಿವಿಧ ಮತ ಧರ್ಮಗಳ ಸಂಗಮ; ಉದಾತ್ತ ದಾರ್ಶನಿಕರ ಮತ್ತು ಮಹಾನ್ ಸಾಹಿತಿಗಳ ನೆಲೆವೀಡು. ರಾಷ್ಟ್ರದ ಸರ್ವತೋಮುಖ ಪ್ರಗತಿಗೆ ಕರ್ನಾಟಕದ ಕೊಡುಗೆ ಗಣನೀಯ. ರಾಷ್ಟ್ರ ನಿರ್ಮಾಣದ ಮಹತ್ಕಾರ್ಯವನ್ನು ಮುಂದುವರಿಸುವುದು ನಮ್ಮೆಲ್ಲರ ಪರಮ ಕರ್ತವ್ಯ.

ದಾರ್ಶನಿಕರು, ಸಮಾಜ ಸುಧಾರಕರು, ಸಾಹಿತಿಗಳು, ವಿಜ್ಞಾನಿಗಳು, ಕರ್ನಾಟಕವನ್ನು ಶ್ರೀಮಂತಗೊಳಿಸಿದ್ದಾರೆ

"ಮಾನವ ಜಾತಿ ತಾನೊಂದೆ ವಲಂ"

-ಪಂಪ

"ಸರ್ವಜ್ಞನೆಂಬುವನು ಗರ್ವದಿಂದಾವನೆ ?
ಸರ್ವರೊಳೊಂದೊಂದು ನುಡಿಗಲಿತು
ವಿದ್ಯದ ಪರ್ವತವೆ ಆದ ಸರ್ವಜ್ಞ"

-ಸರ್ವಜ್ಞ.

"ಒಂದೇ ಕರ್ನಾಟಕ ಒಂದೇ,
ಇಂದೆ, ಹಿಂದೆ, ಮುಂದೆ,
ಒಂದೇ ಕರ್ನಾಟಕ ಒಂದೇ"

-ದ. ರಾ. ಬೇಂದ್ರೆ

"ಎಲ್ಲರೂ ದೇಶಾಭಿಮಾನದಿಂದ,
ಸೇವಾಪ್ರೇಮದಿಂದ ಕರ್ನಾಟಕ ಸಂಸ್ಕೃತಿ
ಭಾಷೆಗಳ ಸದಭಿಮಾನದಿಂದ, ಪ್ರೇರಿತರಾದರೆ
ಅವರು ಹೆಚ್ಚು ಹೆಚ್ಚು ಸುಖಿಗಳಾಗುವರು"

-ಸರ್. ಎಂ. ವಿಶ್ವೇಶ್ವರಯ್ಯ

"ಬರಿಯ ಚದರ ಮೈಲಿಗಳಲ್ತು ಕರ್ನಾಟಕದ
ದೇಶ ವಿಸ್ತೀರ್ಣಂ ನೆನೆ, ನೆನೆ
ಮನೋಮಯದ ಸಂಸ್ಕೃತಿಯ ಕೋಶ
ವಿಸ್ತೀರ್ಣಮಂ ಮರೆಯದಿರು ಚದರ
ಸಂವತ್ಸರದ ಶತಮಾನಗಳ ಕಾಲ
ವಿಸ್ತೀರ್ಣಮಂ ಪ್ರಾಣಮಯ ಭಾವಮಯ
ವಿಸ್ತೀರ್ಣಮಂ, ಚಿದಾಕಾಶ ವಿಜ್ಞಾನ
ವಿಸ್ತೀರ್ಣಮಂ"

-ಕುವೆಂಪು.

"ಈಸಬೇಕು
ಇದ್ದು ಜೈಸಬೇಕು"

-ಪುರಂದರದಾಸರು

" ಆತ್ಮ ಯಾವ ಕುಲ ಜೀವ ಯಾವ ಕುಲ
ತತ್ವೇಂದ್ರಿಯಗಳ ಕುಲ ಯಾವುದಯ್ಯ"

-ಕನಕದಾಸರು

"ಕಳಬೇಡ ಕೊಲಬೇಡ ಹುಸಿಯ
ನುಡಿಯಲು ಬೇಡ ಮುನಿಯಬೇಡ
ಅನ್ಯರಿಗೆ ಅಸಹ್ಯ ಪಡಬೇಡ ತನ್ನ ಬಣ್ಣಿಸ
ಬೇಡ ಇದಿರ ಹಳಿಯಲು ಬೇಡ ಇದೇ
ಅಂತರಂಗ ಶುದ್ಧಿ ಇದೇ ಬಹಿರಂಗ ಶುದ್ಧಿ
ಇದೇ ನಮ್ಮ ಕೂಡಲ ಸಂಗಮ ದೇವರ -
ನೊಲಿಸುವ ಪರಿ"

-ಬಸವಣ್ಣ

"ನರಕಕ್ಕಿಳ್ಸಿ ನಾಲ್ಗೆ ಸೀಳ್ಸಿ
ಬಾಯೊಲ್ಸಾಕಿದ್ರೂನೆ
ಮೂಗ್ನಲ್ ಕನ್ನಡ ಪದಗಳ್ನಾಡ್ತೀನಿ
ನನ್ ಮನ್ಸನ್ ನೀಕಾಣೆ"

-ಜಿ. ಪಿ. ರಾಜರತ್ನಂ

"ಕರ್ನಾಟಕತ್ವವೆಂದರೆ ಕೇವಲ
ದೇಶಾಭಿಮಾನವಲ್ಲ
ಕೇವಲ ಭಾಷಾಭಿಮಾನವಲ್ಲ.
ಇವೆಲ್ಲವುಗಳನ್ನು ಮೀರಿದ ಇವೆಲ್ಲವುಗಳನ್ನು
ಒಳಗೊಂಡ ಪರಿಶುದ್ಧ ಭಾವನೆ"

-ಆಲೂರು ವೆಂಕಟರಾಯರು

"ಹಸಿರಾಯಿತು ಕರ್ನಾಟಕ
ಉಸಿರಾಗಲಿ ಕನ್ನಡ"

-ಚನ್ನವೀರ ಕಣವಿ.

ಕರ್ನಾಟಕ ವಾರ್ತೆ

ಕೆ.ಎಸ್.ಎಫ್.ಸಿ.: ಮೂರು ದಶಕಗಳಿಂದಲೂ ಕೈಗಾರಿಕಾ ಪ್ರಗತಿ ಚಕ್ರದ ಚಾಲನೆಯಲ್ಲಿ ನಿರತ

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಸಾಧನೆಯ ಅಪ್ರತಿಮ ಚಿತ್ರಣ ಕಾರ್ಯ ಪ್ರಗತಿಯ ಅಂಕಿ ಅಂಶಗಳಿಂದ ಮನದಟ್ಟಾಗುತ್ತದೆ. ಆದರೆ ಬರೀ ಅಂಕಿ ಅಂಶಗಳಿಂದಲೇ ವಿದಿತವಾಗದಿರುವ ಮತ್ತೊಂದು ಮಹತ್ತರ ಅಂಶ ಸಂಸ್ಥೆಗೆ ಕರ್ನಾಟಕದ ಕೈಗಾರಿಕಾ ಬೆಳವಣಿಗೆ ಕುರಿತಂತೆ ಇರುವ ವಿಶೇಷ ಕಾಳಜಿ.

ಸಂಸ್ಥೆಯ ಅಸ್ತಿತ್ವ ಹಾಗೂ ಸಾಧನೆ ಗ್ರಾಮೀಣ ಗುಡಿ ಕೈಗಾರಿಕೆಯಿಂದ ಆಧುನಿಕ ತಂತ್ರಜ್ಞಾನವನ್ನೊಳಗೊಂಡ ಸಣ್ಣ ಹಾಗೂ ಮಧ್ಯಮ ಗಾತ್ರದ ಸಾವಿರಾರು ಉದ್ಯಮಗಳ ಸ್ಥಾಪನೆಯಿಂದಾಗಿ ರಾಜ್ಯಾದ್ಯಂತ ಪ್ರತಿಫಲಿತವಾಗಿದೆ. ಈ ಕ್ಷೇತ್ರಗಳ ಯಾವುದೇ ಅರ್ಹ ಉದ್ದಿಮೆಗೆ ನೆರವು ನೀಡಲು ಸಂಸ್ಥೆ ವಿವಿಧ ಯೋಜನೆಗಳನ್ನು ರೂಪಿಸಿದೆ.

ಸಂಸ್ಥೆ ೧೯೫೯ ರಲ್ಲಿ ಸ್ಥಾಪನೆಯಾದಂದಿನಿಂದ ರಾಜ್ಯದಲ್ಲಿ ೧,೦೫,೮೬೩ ಘಟಕಗಳಿಗೆ ೨,೮೦೦ ಕೋಟಿ ರೂಗಳ ನೆರವು ಕಲ್ಪಿಸಿದೆ. ವರ್ಷದಿಂದ ವರ್ಷಕ್ಕೆ ತನ್ನ ಕಾರ್ಯಕ್ಷೇತ್ರದಲ್ಲಿ ನಿರಂತರ ಹಾಗೂ ನಿಶ್ಚಿತ ಪ್ರಗತಿ ಸಾಧಿಸಿ ರಾಜ್ಯ ಹಣಕಾಸು ಸಂಸ್ಥೆಗಳ ಪೈಕಿ ಮುಂಚೂಣಿಯಲ್ಲಿರುವ ಹೆಗ್ಗಳಿಕೆ ಈ ಸಂಸ್ಥೆಯದು.

ಕೈಗಾರಿಕಾ ಬೆಳವಣಿಗೆಗೆ ವಿಪುಲ ಅವಕಾಶ ಹೊಂದಿರುವ ಕರ್ನಾಟಕ ರಾಜ್ಯದಲ್ಲಿ ಸಂಸ್ಥೆ ಕ್ಷಿಪ್ರ ಹಾಗೂ ಸಮತೋಲನ ಕೈಗಾರಿಕಾ ಬೆಳವಣಿಗೆಗೆ ಸೂಕ್ತವಾಗಿ ಸ್ಪಂದಿಸುತ್ತಿದೆ.

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ

ಪ್ರಧಾನ ಕಛೇರಿ

೧/೧, ತಿಮ್ಮಯ್ಯ ರಸ್ತೆ

ಬೆಂಗಳೂರು - ೫೬೦ ೦೫೨

ದೂರವಾಣಿ : ೨೨೬೩೩೨೨

ಕೆ.ಎಸ್.ಎಫ್.ಸಿ. : ರಾಷ್ಟ್ರದಲ್ಲಿ ಮುಂಚೂಣಿಯಲ್ಲಿರುವ ರಾಜ್ಯ ಹಣಕಾಸು ಸಂಸ್ಥೆ

ಬೆಂಗಳೂರಿನಲ್ಲಿ ಇಲ್ಲಿ ಉಳಿಯಿರಿ
ಹೊಟೆಲ್ ಮಹಾವೀರ್

* ನಗರದ ಮಧ್ಯಭಾಗದಲ್ಲಿದೆ
* ರೈಲು ಮತ್ತು ಬಸ್ ನಿಲ್ದಾಣಕ್ಕೆ ಎರಡೇ ನಿಮಿಷದ ದಾರಿ
* ಷಾಪಿಂಗ್ ಮತ್ತು ಮನೋರಂಜನ ಕೇಂದ್ರಗಳಿಗೆ ಸಮೀಪವಿದೆ.
* ಅಲಂಕರಿಸಿದ ಪಡಸಾಲೆಯಿದೆ
* ಸಿದ್ಧಗೊಳಿಸಿದ ಸುಂದರ ಕೋಣೆಗಳಿವೆ
* ಸ್ನಾನದ ಮನೆ ಸೇರಿರುವ ರೂಮುಗಳು, ದೂರವಾಣಿ, ಸಂಗೀತ, ಟಿ. ವಿ., ಸಿನೇಮಾ ಛಾನಲ್ಲುಗಳು, ಊಟ ಹಾಗೂ ಬಿಸಿನೀರಿನ ವ್ಯವಸ್ಥೆ ಹೊಂದಿದೆ.
* ಕ್ರೆಡಿಟ್ ಕಾರ್ಡ್ಸ್ : ವೀಸಾ ಮತ್ತು ಮಾಸ್ಟರ್ ಕಾರ್ಡ್ಸ್ ಕ್ಯಾನ್ ಕಾರ್ಡ್ಸ್ ಬಾಬ್ ಇಂಡಿಯಾ ಮತ್ತು ಡೈನರ್ಸ್ ಕಾರ್ಡ್

ದುಬಾರಿಯಾಗದೆ ಸ್ವಚ್ಛ ಸೌಲಭ್ಯಗಳು ಬೇಕಿದ್ದರೆ ನಮ್ಮಲ್ಲಿ ಬನ್ನಿ

ನಗರದ ರೈಲ್ವೇ ನಿಲ್ದಾಣದ ಹತ್ತಿರ, ಬೆಂಗಳೂರು -560 053

Ph:73670, 70741,70735, 70774, Grams : "NICESTAY"

TLX :0845 -3060- !C6 FAX: 080 269843

ನಮ್ಮ ಸದಸ್ಯರಾಗಿ, ಎಲ್ಲಾ ಲಾಭಗಳನ್ನು ಪಡೆದುಕೊಳ್ಳಿ.

ಶುಭಾಶಯಗಳೊಂದಿಗೆ

EMGEE SOLAR LIMITED

❄

ನಂ. 435, " IMAD", 18 ನೇ ಮುಖ್ಯ, 6ನೇ ಬ್ಲಾಕ್, ಕೋರಮಂಗಲ,

ಬೆಂಗಳೂರು- 560 095

ದೂರವಾಣಿ / ಫ್ಯಾಕ್ಸ್: 91- 80- 553 6922

ಶುಭಾಶಯಗಳೊಂದಿಗೆ

ಅಕ್ಷರ ಪ್ರಿಂಟರ್ಸ್

ಆಫ್‌ಸೆಟ್ ಮತ್ತು ಲೆಟರ್‌ಪ್ರೆಸ್ ಮುದ್ರಕರು

❋

54 / 4, ಪೋಲೀಸ್ ಸ್ಟೇಷನ್ ರಸ್ತೆ, ಬಸವನಗುಡಿ
ಬೆಂಗಳೂರು - 560 004
ದೂರವಾಣಿ - 624082

ಕಾಮಧೇನು

ಡಬಲ್ ಪ್ಲಸ್

ಸಮೃದ್ಧಿಯ ಜಗತ್ತಿಗೆ, ನಿಮಗೆ ರಹದಾರಿ

ಹೆಚ್ಚಿನ ವಿವರಗಳಿಗೆ ಕೆನರಾಬ್ಯಾಂಕಿನ ಹತ್ತಿರದ ಶಾಖೆಯಲ್ಲಿ ವಿಚಾರಿಸಿರಿ.

ಕೆನರಾ ಬ್ಯಾಂಕ್

(ಭಾರತ ಸರ್ಕಾರದ ಉದ್ದಿಮೆ)

ಪ್ರಧಾನ ಕಛೇರಿ : ಜೆ. ಸಿ. ರಸ್ತೆ, ಬೆಂಗಳೂರು - ೫೬೦ ೦೦೨

ERG

Engineering Resources Group

42/1, Palmgrove Road, Austin Town, Bangalore - 560 047.
Karnataka, India.

phone : 564338 | Telex : (0845) 3269 ERGIN

Cable: EEARGEE | Fax : (080) 5561992/5280706

E-MAIL(INTERNET): erg % dartnet @ uunet.uu.net

PROJECT IMPLEMENTATION FROM CONCEPT TO COMMISSIONING

AQUACULTURE | ENGINEERING PROJECTS

BIOTECH AND FOOD | DESIGN ENGINEERING

SITE MANAGEMENT | PROJECT MANAGEMENT

WE UNDERTAKE TOTAL PROJECT MANAGEMENT

ಕೆಎಸ್ಐಐಡಿಸಿ

ಮೂರು ಮುಖ್ಯ ಕಾರಣಗಳಿಗೆ ನಮ್ಮನ್ನ ಸಂಪರ್ಕಿಸಿ

O ವ್ಯಾಪಾರಿ ಬ್ಯಾಂಕಿಂಗ್ ಮತ್ತು ಹಣಕಾಸು ಸೇವೆ.

O ಯಂತ್ರಗಳನ್ನ ಗುತ್ತಿಗೆ ನೀಡುವ ಯೋಜನೆ.

O ಮುಂದೂಡಿದ ಸಂದಾಯಗಳಿಗೆ ಖಾತರಿ ನಿಲ್ಲುವುದು.

ಜೊತೆಗೆ ತ್ವರಿತ ಸೇವೆಯ ಭರವಸೆಯೂ ಇದೆ !

ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಮತ್ತು ಅಭಿವೃದ್ಧಿ ನಿಗಮ ನಿಯಮಿತ

'ಎಂಎಸ್ಐಎಲ್ ಹೌಸ್', 36, ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು - 560 052

ದೂರವಾಣಿ : 2258131-33 ಫ್ಯಾಕ್ಸ್ : 91-80-2255740

ನಾಳಿನ ಭವಿಷ್ಯವದು
ಯಾರ ಮುಷ್ಟಿಯಲ್ಲಿ ಭದ್ರವಿದೆಯೊ

ಯಾರು,
ಭಾಷೆ ಸಂಸ್ಕೃತಿ ಹಾಗೂ ಕಲೆಗಳ ವಾರಸುದಾರರೊ

ಯಾರ ದನಿಯನ್ನ ಗ್ರಹಿಸಲು
ಎಲ್ಲ ಕಲೆಗಳು ಎಲ್ಲ ಸಾಹಿತ್ಯ ಹೆಣಗುತ್ತಿದೆಯೊ

ಅವರ ದನಿಯಲ್ಲಿ, ಅವರ ಪರಿಶ್ರಮದಲ್ಲಿ
ಅವರ ಮನಃ ಪೂರ್ತಿ ಆಶೀರ್ವಾದದಲ್ಲಿ
ನಡೆದಿದೆ ಮುಂದೆ ಮುಂದೆ
ದೇಶದ ಸಾಕ್ಷರತೆ ಆಂದೋಲನ

ನೀವೂ ಬನ್ನಿ ಕೈಗೂಡಿಸಿ
ನಿಮ್ಮದೇ ಕಾರ್ಯವಿದು ಸಾರ್ಥಕಗೊಳಿಸಿ.

ನಿಮ್ಮ ಜಿಲ್ಲೆಯ ಸಾಕ್ಷರತಾ ಸಮಿತಿಗಳನ್ನ ಸಂಪರ್ಕಿಸಿ. ಸಾಕ್ಷರತೆಗೆಂದು ಆಂದೋಲನ ಬೆಳಸಿ. ಜನಾಭಿಪ್ರಾಯ ಮೂಡಿಸುವಲ್ಲಿ ನಿಮ್ಮ ಪಾತ್ರ ಏನೆಂದು ಕಾರ್ಯಕರ್ತರಿಗೆ ಮನವರಿಕೆ ಮಾಡಿ. ಅಕ್ಷರ ಕಲಿಕೆಗೆ ಕಾರ್ಯಕರ್ತರ ಉತ್ಸಾಹ ಬೆಳಸಿ, ಪ್ರೇರಣೆ ಕೊಡಿ. ಅವರ ಆತ್ಮವಿಶ್ವಾಸ ಮೂಡಿಸಲಿಕ್ಕೆ ನಿಮಗಿಂತ ಮಿಗಿಲು ಮತ್ತಾರಿದ್ದಾರೆ ಹೇಳಿ ? ಮತ್ತೂ ಒಂದು ಹೆಜ್ಜೆ ಮುಂದಿಡಬಲ್ಲಿರಾದರೆ ಕಾರ್ಯಕರ್ತರಾಗಿ ಸಾಕ್ಷರತೆಯ ಸಂಘಟನೆ ಸೇರಿ. ಅಥವಾ ಪಾಠಗಳನ್ನ, ಪುಸ್ತಕಗಳನ್ನ ರಚಿಸಿ. ನಿಮ್ಮ ಶಕ್ತಿ ನಿಮಗೇ ಗೊತ್ತು. ಭಾಗವಹಿಸಿ.

ಸಾಕ್ಷರತೆಗಾಗಿ ರಾಷ್ಟ್ರೀಯ ಮಿಷನ್

ಸಾಕ್ಷರತೆ ನಿಮ್ಮದೇ ಕೆಲಸವೆಂದು ತಿಳಿಯಿರಿ
ಅಕ್ಷರ ಕ್ರಾಂತಿಯಲ್ಲಿ ಭಾಗವಹಿಸಿ.



ಕೋಟಿ ಕೋಟಿ ಗ್ರಾಹಕರ ಸಂತಸವೇ ನಮ್ಮ ಸ್ಫೂರ್ತಿ

ಕೆನರಾ ಬ್ಯಾಂಕ್

(ಭಾರತ ಸರ್ಕಾರದ ಉದ್ದಿಮೆ)

ಪ್ರಧಾನ ಕಚೇರಿ, ಜೆ. ಸಿ. ರಸ್ತೆ ಬೆಂಗಳೂರು - ೫೬೦ ೦೦೨

ಗ್ರಾಮೀಣ ಸಮೂಹ ಜೀವ ವಿಮಾ ಯೋಜನೆ

ನಮ್ಮ ಪ್ರಧಾನಮಂತ್ರಿಯವರು ಆಗಸ್ಟ್ 15, 1995 ರಿಂದ ಜಾರಿಗೆ ಬರುವಂತೆ ಘೋಷಿಸಿರುವ ಗ್ರಾಮೀಣ ಸಮೂಹ ವಿಮಾ ಯೋಜನೆ ಗಳು ಗ್ರಾಮೀಣ ಜನತೆಯಲ್ಲಿ ಹೊಸ ಬೆಳಕನ್ನು ಮೂಡಿಸಿವೆ. ಭಾರತೀಯ ಜೀವ ವಿಮಾ ನಿಗಮವು ಗ್ರಾಮ ಪಂಚಾಯಿತಿಗಳ ಮುಖಾಂತರ ಇವುಗಳನ್ನು ಕಾರ್ಯಗತಗೊಳಿಸುತ್ತದೆ.

ಈ ಯೋಜನೆಗಳ ಉದ್ದೇಶಗಳು : ಗ್ರಾಮೀಣ ಜನತೆಗೆ ಸುಲಭ ಮತ್ತು ಸರಳ ರೀತಿಯಲ್ಲಿ ಜೀವ ವಿಮಾ ರಕ್ಷಣೆಯನ್ನು ನೀಡುವುದಾಗಿದೆ.

ಈ ಯೋಜನೆಗಳಲ್ಲಿ ಸೇರ್ಪಡೆಯಾಗಲು ಬೇಕಾದ ಅರ್ಹತೆಗಳು :

1. **ಸಾಮಾನ್ಯ ಯೋಜನೆ :** ಇದು 20 ಅಥವಾ ಮೇಲ್ಪಟ್ಟು ಆದರೆ 50 ವರ್ಷದೊಳಗಿನ ಎಲ್ಲ ವ್ಯಕ್ತಿಗಳಿಗೆ ಅನ್ವಯಿಸುತ್ತದೆ.

2. **ರಿಯಾಯತಿ ಯೋಜನೆ :** ಇದೂ ಸಹ 20 ಅಥವಾ ಮೇಲ್ಪಟ್ಟು ಆದರೆ ಗರಿಷ್ಠ 50 ವರ್ಷ ವಯಸ್ಸಿನ ವ್ಯಕ್ತಿಗಳಿಗಾಗಿ ರೂಪಿಸಿರುವ ಯೋಜನೆ. ಆದರೆ, ಬಡತನದ ರೇಖೆಯ ಕೆಳಗಿರುವ ಕುಟುಂಬದ ಒಬ್ಬ ಸದಸ್ಯನಿ / ಳಿಗೆ ಮಾತ್ರ ಈ ಸೌಲಭ್ಯವಿರುತ್ತದೆ.

ವಿಮಾ ಕಂತು ಎಷ್ಟು ಮತ್ತು ಯಾರು ಕಟ್ಟಬೇಕು ?

20 ವರ್ಷ ಮೇಲ್ಪಟ್ಟು 40 ವಯಸ್ಸಿನವರೆಗಿನ ವ್ಯಕ್ತಿಗೆ ವಾರ್ಷಿಕ ಪ್ರೀಮಿಯಂ ರೂ. 60 /-

40 ವರ್ಷಕ್ಕೆ ಮೇಲ್ಪಟ್ಟು 50 ವರ್ಷದೊಳಗಿನ ವ್ಯಕ್ತಿಗೆ ವಾರ್ಷಿಕ ಪ್ರೀಮಿಯಂ ರೂ. 70 /-

ಯೋಜನೆಗೆ ಸೇರುವ ದಿನಾಂಕದಂದು ಇರುವ ವಯಸ್ಸನ್ನು ಈ ಯೋಜನೆಗೆ ಪ್ರಾರಂಭಿಕ ವಯಸ್ಸನ್ನಾಗಿ ಪರಿಗಣಿಸಲಾಗುವುದು.

ಸಾಮಾನ್ಯ ಯೋಜನೆಯಡಿಯಲ್ಲಿ ಕಂತುಗಳನ್ನು ಪೂರ್ತಿಯಾಗಿ ಸದಸ್ಯರೇ ಕಟ್ಟಬೇಕು.

ರಿಯಾಯತಿ ಯೋಜನೆಯಲ್ಲಿ ಪ್ರೀಮಿಯಂ ಕಂತಿನ ಅರ್ಧ ಭಾಗವನ್ನು ಸದಸ್ಯರು ಕಟ್ಟಬೇಕು ಹಾಗೂ ಉಳಿದರ್ಧ ಭಾಗವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಮವಾಗಿ ಭರಿಸುತ್ತವೆ.

ವಿಮಾ ರಕ್ಷಣೆಯ ಮುಕ್ತಾಯ ಹಾಗೂ ಸೌಲಭ್ಯಗಳು :

ಸದಸ್ಯರು ವಿಮೆಯ ಕಂತನ್ನು ಕಟ್ಟದೇ ಇದ್ದಾಗ ಅಥವಾ ಸದಸ್ಯರು 60 ವರ್ಷ ವಯಸ್ಸು ತಲುಪಿದಾಗ ವಿಮಾ ರಕ್ಷಣೆ ಮುಕ್ತಾಯವಾಗುವುದು.

60 ವರ್ಷದೊಳಗೆ ಸಾವು ಸಂಭವಿಸಿದ್ದಲ್ಲಿ ಸದಸ್ಯನ /ಳ ಕುಟುಂಬದ ನಾಮ ನಿರ್ದೇಶಿತ ವ್ಯಕ್ತಿಗೆ ನಿರ್ಧಾರಿತ ಮೊತ್ತವಾದ ರೂ. 5,000/- (ರೂ. ಐದು ಸಾವಿರ ಮಾತ್ರ) ನೀಡಲಾಗುವುದು.

ನಿರ್ಧಾರಿತ ಮೊತ್ತ ಪಡೆಯುವ ಬಗೆ : ಮರಣಹೊಂದಿದ ಸದಸ್ಯನ/ಳ ನಾಮ ನಿರ್ದೇಶಿತ ವ್ಯಕ್ತಿಯು ಅಧಿಕೃತ ಮರಣ ದಾಖಲೆ ಪತ್ರವನ್ನು ಹಕ್ಕಿನ ಪತ್ರದ ಜೊತೆಗೆ ಗ್ರಾಮ ಪಂಚಾಯಿತಿಗೆ ಸಲ್ಲಿಸಬೇಕು. ಅವರು ಜಿಲ್ಲೆಯ ನಿರ್ದೇಶಿತ ಜೀವ ವಿಮಾ ಶಾಖೆಗೆ ತಲುಪಿಸುವರು. ನಿಗಮವು ನಿಗದಿತ ವಿಮಾ ಮೊತ್ತವನ್ನು ಡಿಮ್ಯಾಂಡ್ ಡ್ರಾಫ್ಟ್ ಅಥವಾ ಮನಿ ಆರ್ಡರ್ ಮೂಲಕ ಫಲಾನುಭವಿ ವ್ಯಕ್ತಿಗೆ ನೇರವಾಗಿ ತಲುಪಿಸುವುದು.

ಈ ಯೋಜನೆಗಳನ್ನು ಗ್ರಾಮ ಪಂಚಾಯಿತಿಗಳ ಮೂಲಕ ಕಾರ್ಯಗತಗೊಳಿಸಲಾಗುವುದು.

ಹೆಚ್ಚಿನ ವಿವರಗಳಿಗಾಗಿ ಸಮೀಪದ ಜೀವ ವಿಮಾ ಕಾರ್ಯಾಲಯವನ್ನು ಸಂಪರ್ಕಿಸಿ.

ಗ್ರಾಮೀಣ ಸಮೂಹ ಜೀವ ವಿಮಾ ಯೋಜನೆ,

ಭಾರತೀಯ ಜೀವ ವಿಮಾ ನಿಗಮ, ದಕ್ಷಿಣ ಮಧ್ಯ ಕ್ಷೇತ್ರೀಯ ಕಾರ್ಯಾಲಯ, ಹೈದರಾಬಾದ್

ಶುಭಾಶಯಗಳೊಂದಿಗೆ

ದಿ ಪ್ರಿಂಟರ್ಸ್ (ಮೈಸೂರು) ಲಿಮಿಟೆಡ್

೭೫, ಮಹಾತ್ಮ ಗಾಂಧಿ ರಸ್ತೆ
ಬೆಂಗಳೂರು -೫೬೦ ೦೦೧

ಡೆಕ್ಕನ್ ಹೆರಾಲ್ಡ್, ಪ್ರಜಾವಾಣಿ, ಸುಧಾ, ಮಯೂರ
ಪತ್ರಿಕೆಗಳ ಮಾಲೀಕರು.

RUJUVATHU Registered [illegible] of Newspapers
of India Reg. No. 36592/ [illegible] Published by KAVIKAVYA
[illegible]-577 417. Editor—[illegible]murthy.